ಸಂಪುಟ: 05 ಸಂಚಿಕೆ: 247 ಪುಟಗಳು: 08 ಶುಕ್ರವಾರ 21 ನವೆಂಬರ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಮತ್ತೊಬ್ಬರನ್ನು ಸೋಲಿಸುವುದು ಬಲು ಸುಲಭ. ಆದರೆ, ಮತ್ತೊಬ್ಬರನ್ನು ಗೆಲ್ಲುವುದು ಬಲು ಕಷ್ಟ

# ಕರ್ನಾಟಕದಲ್ಲಿ 5 ಜಿಲ್ಲೆಗಳಲ್ಲಿ ಚಿನ್ನದ ನಿಕ್ಷೇಪ ಪತ್ತೆ!

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಸಂಬಂಧಿತ ಸಂಸ್ಥೆಗಳು ರಾಜ್ಯದ 19 ಪ್ರಮುಖ ಸ್ಥಳಗಳಲ್ಲಿ ಬರೋಬ್ಬರಿ 16,350 ಹೆಕ್ಟೇರ್‌ನಷ್ಟು ವಿಶಾಲವಾದ ಪ್ರದೇಶದಲ್ಲಿ ಖನಿಜ ಶೋಧ ಕಾರ್ಯವನ್ನು ನಡೆಸುತ್ತಿವೆ. ಇದು ರಾಜ್ಯದ ಇತಿಹಾಸದಲ್ಲೇ ಅತಿದೊಡ್ಡ ಅನ್ವೇಷಣಾ ಕಾರ್ಯಾಚರಣೆಯಾಗಿದೆ.

**ಕರ್ನಾಟಕ 5 ಜಿಲ್ಲೆಗಳಲ್ಲಿ ಚಿನ್ನದ ಕುರುಹು ಪತ್ತೆ!**

**● ಹಾವೇರಿ ● ಕೊಪ್ಪಳ ● ಮಂಡ್ಯ ● ಚಿತ್ರದುರ್ಗ ● ಬಳ್ಳಾರಿ**

ಈಗಾಗಲೇ ನಡೆಯುತ್ತಿರುವ ಈ ಅನ್ವೇಷಣೆಯಲ್ಲಿ ಶುಭ ಸುದ್ದಿ ಕೂಡ ಸಿಕ್ಕಿದೆ. ಹಾವೇರಿ, ಕೊಪ್ಪಳ, ಮಂಡ್ಯ, ಚಿತ್ರದುರ್ಗ ಹಾಗೂ ಬಳ್ಳಾರಿ ಜಿಲ್ಲೆಗಳ ಹಲವು ಭಾಗಗಳಲ್ಲಿ ಚಿನ್ನದ ನಿಕ್ಷೇಪ ಇರುವುದು ಪ್ರಾಥಮಿಕ ಹಂತದಲ್ಲಿ ದೃಢಪಟ್ಟಿದೆ. ಈ ಬಗ್ಗೆ ಮಾತನಾಡಿರುವ ಗಣಿ ಇಲಾಖೆಯ ಅಧಿಕಾರಿಯೊಬ್ಬರು, ಪ್ರಾಥಮಿಕ ಅಂದಾಜಿನ ಪ್ರಕಾರ ಈ ಸ್ಥಳಗಳಲ್ಲಿ ಚಿನ್ನ ಇರುವುದು ನಿಜ. ಆದರೆ, ಖನಿಜದ ಪ್ರಮಾಣ ಎಷ್ಟಿದೆ ಎಂಬುದು ಸದ್ಯಕ್ಕೆ ತಿಳಿದಿಲ್ಲ. ಸಂಪೂರ್ಣ ಅನ್ವೇಷಣೆ ಮುಗಿದ ನಂತರವೇ ನಮಗೆ ನಿಖರವಾದ ಚಿತ್ರಣ ಸಿಗಲಿದೆ ಎಂದು ಹೇಳಿದ್ದಾರೆ. ಸದ್ಯ ಕರ್ನಾಟಕದಲ್ಲಿ ಹಟ್ಟಿ ಚಿನ್ನದ ಗಣಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಒಂದು ಕಾಲದಲ್ಲಿ ಜಗತ್ಪ್ರಸಿದ್ಧವಾಗಿದ್ದ ಕೋಲಾರದ ಚಿನ್ನದ ಗಣಿ ಅಂದ್ರೇ ಕೆಜಿಎಫ್ ಸದ್ಯಕ್ಕೆ ಮುಚ್ಚಿದೆ. ಈ



**19 ಸ್ಥಳದಲ್ಲಿ ಖನಿಜ ಶೋಧ ಕಾರ್ಯ**

**ಈ 19 ಸ್ಥಳಗಳಲ್ಲದೇ, ಗಣಿ ಇಲಾಖೆ ಮತ್ತೊಂದು ಮಹತ್ವದ ಹೆಜ್ಜೆ ಇಟ್ಟಿದೆ. ಚಿನ್ನ, ತಾಮ್ರ ಹಾಗೂ ಇತರೆ ಖನಿಜಗಳಿಗಾಗಿ ವಿಚಕ್ಷಣಾ ಸಮೀಕ್ಷೆ ನಡೆಸಲು ಮತ್ತೆ 52 ಸ್ಥಳಗಳ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತಿದೆ. ಈ ಪಟ್ಟಿಯಲ್ಲಿ ದಕ್ಷಿಣ ಕನ್ನಡ, ಬೆಳಗಾವಿ, ಬೆಂಗಳೂರು ಗ್ರಾಮಾಂತರದ ಹೆಸರಘಟ್ಟ, ವಿಜಯನಗರ, ಚಾಮರಾಜನಗರ, ಶಿವಮೊಗ್ಗದ ಹೊಳೆಹೊನ್ನೂರು ಹಾಗೂ ಕಲಬುರಗಿಯಂತಹ ಪ್ರದೇಶಗಳು ಸೇರಿವೆ. ಈ ಅನೇಕ ಸ್ಥಳಗಳು ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ, ಸದ್ಯಕ್ಕೆ ಅಲ್ಲಿ ಪರೀಕ್ಷೆ ನಡೆಸಲು ಅನುಮತಿಗಾಗಿ ಕಾಯಲಾಗುತ್ತಿದೆ. ಇದು ಕೇವಲ ಪರೀಕ್ಷೆಗೆ ಮಾತ್ರ ಅನುಮತಿಯಾಗಿದ್ದು, ಗಣಿಗಾರಿಕೆಗಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.**

ಹೊಸ ಶೋಧ ಯಶಸ್ವಿಯಾದರೆ, ರಾಜ್ಯದಲ್ಲಿ ಚಿನ್ನದ ಉತ್ಪಾದನೆಗೆ ಹೊಸ ಜೀವ ಬಂದಂತಾಗುತ್ತದೆ.

**ಖನಿಜ ಶೋಧ!:** ಈ ಬೃಹತ್ ಅನ್ವೇಷಣಾ ಕಾರ್ಯಕ್ಕೆ ರಾಜ್ಯ ಸರ್ಕಾರ ಹಾಗೂ ರಾಷ್ಟ್ರೀಯ ಖನಿಜ ಅನ್ವೇಷಣಾ ಟ್ರಸ್ಟ್ ಅಂದ್ರೇ ಎನ್‌ಎಂಇಟಿ ಹಣಕಾಸಿನ ನೆರವು ನೀಡುತ್ತಿವೆ. ಮಿನರಲ್ ಎಕ್ಸ್‌ಪ್ಲೋರೇಷನ್ ಅಂಡ್ ಕನ್ಸಲ್ಟೆನ್ಸಿ ಲಿಮಿಟೆಡ್ ಹಾಗೂ ಕುದುರೆಮುಖ ಕಬ್ಬಿಣದ ಅದಿರು ಕಂಪನಿ ಲಿಮಿಟೆಡ್‌ನಂತಹ ಸಾರ್ವಜನಿಕ ವಲಯದ ಪ್ರಮುಖ ಸಂಸ್ಥೆಗಳು ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿವೆ.

ಇದು ಒಂದೇ ದಿನದಲ್ಲಿ ಮುಗಿಯುವ ಕೆಲಸವಲ್ಲ. ಇದಕ್ಕೊಂದು ವ್ಯವಸ್ಥಿತವಾದ ಪ್ರಕ್ರಿಯೆ ಇದೆ. ಅಧಿಕಾರಿಗಳು ಹೇಳುವ ಪ್ರಕಾರ, ಒಟ್ಟು ನಾಲ್ಕು ಹಂತಗಳಲ್ಲಿ ಈ ಶೋಧ ನಡೆಯುತ್ತೆ. ಮೊದಲು ವಿಶಾಲವಾದ ಪ್ರದೇಶದಲ್ಲಿ ವಿಚಕ್ಷಣಾ ಸಮೀಕ್ಷೆ ನಡೆಸಿ ಸ್ಯಾಂಪಲ್ ಟೆಸ್ಟ್ ಮಾಡಲಾಗುತ್ತದೆ. ನಂತರ, ಪ್ರಾಥಮಿಕ ಹಾಗೂ ಸಾಮಾನ್ಯ ಅನ್ವೇಷಣೆಯ ಮೂಲಕ ಪ್ರದೇಶವನ್ನು ಕೆಲವೇ ಕಿಲೋ ಮೀಟರ್‌ಗಳಿಗೆ ಸೀಮಿತಗೊಳಿಸಲಾಗುತ್ತದೆ. ಕೊನೆಯದಾಗಿ, ವಿವರವಾದ ಅನ್ವೇಷಣೆ ನಡೆಸಿ ಅದಿರಿನ ನಿಕ್ಷೇಪವನ್ನು ಅಂದಾಜಿಸಲಾಗುತ್ತದೆ. ಈ ಪ್ರಕ್ರಿಯೆ ಪೂರ್ಣಗೊಳ್ಳಲು ಕೆಲವು ಕಡೆ ಎರಡು ವರ್ಷ, ಮತ್ತೆ ಕೆಲವು ಕಡೆ ಅದಕ್ಕಿಂತ ಹೆಚ್ಚು ಸಮಯ ಬೇಕಾಗಬಹುದು ಎನ್ನಲಾಗಿದೆ.

**ಸ್ಥಳೀಯವಾಗಿ ಉದ್ಯೋಗ ಸೃಷ್ಟಿಗೂ ಅವಕಾಶ!:** ಈ ಬಗ್ಗೆ ಮಾತನಾಡಿರುವ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರಾದ ರಂಗಪ್ಪ ಅವರು, ನಮ್ಮ ಇಲಾಖೆಯ ಪ್ರಾಥಮಿಕ ಕೆಲಸವೇ ಅನ್ವೇಷಣೆ. ಆದರೆ, ಕಾಲಕ್ರಮೇಣ ನಮ್ಮ ಗಮನ ಕಂದಾಯ ಸಂಗ್ರಹದತ್ತ ಹರಿದು ಅನ್ವೇಷಣೆ ಹಿನ್ನೆಲೆಗೆ ಸರಿದಿತ್ತು. ನಾವು ಹೊಸ ಖನಿಜ ನಿಕ್ಷೇಪಗಳನ್ನು ಶೋಧಿಸದಿದ್ದರೆ, ಹಳೆಯ ಗಣಿಗಳಲ್ಲಿ ಗಣಿಗಾರಿಕೆ ನಿಂತ ಮೇಲೆ ಆದಾಯದ ಮೂಲವೇ ಬತ್ತಿಹೋಗುತ್ತದೆ. ಅಲ್ಲದೇ, ಯುರೇನಿಯಂ, ಲಿಥಿಯಂನಂತಹ ರಾಷ್ಟ್ರೀಯ ಮಹತ್ವವುಳ್ಳ ಖನಿಜಗಳನ್ನೂ ನಾವು ಹುಡುಕುತ್ತಿದ್ದೇವೆ. ಹೊಸ ಗಣಿಗಾರಿಕೆ ಪ್ರದೇಶಗಳು ಪತ್ತೆಯಾದರೆ, ಅದು ರಾಜ್ಯಕ್ಕೆ ಹಣ ತಂದುಕೊಡುವುದು ಮಾತ್ರವಲ್ಲ, ಸ್ಥಳೀಯವಾಗಿ ಉದ್ಯೋಗ ಸೃಷ್ಟಿಗೂ ನೆರವಾಗುತ್ತದೆ ಎನ್ನುತ್ತಿದ್ದಾರೆ. ಅದಲ್ಲದೇ ಚೀನಾ ಈಗ ರೇರ್ ಅರ್ಥ್ ಎಲಿಮೆಂಟ್ಸ್ ಮೇಲೆ ನಿರ್ಬಂಧ ಹೇರಿರುವ ಹಿನ್ನೆಲೆ ಅಪರೂಪದ ಭೂಮಿಯ ಖನಿಜಗಳ ನಿಕ್ಷೇಪಗಳನ್ನು ಪತ್ತೆ ಮಾಡುವುದು ಕೂಡ ಇದರ ಮುಖ್ಯ ಉದ್ದೇಶವಾಗಿದೆ. ಇನ್ನು, ರಾಜಧಾನಿ ಬೆಂಗಳೂರಿಗೆ ಅತಿ ಸಮೀಪದಲ್ಲೇ ಸಮೀಕ್ಷೆ ನಡೆಯುತ್ತಿರುವುದು. ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ನಿಕ್ಕಲ್, ತಾಮ್ರ ಮತ್ತು ಪ್ಲಾಟಿನಂ ಗುಂಪಿನ ಲೋಹಗಳ ನಿಕ್ಷೇಪಗಳಿರುವ ಸಾಧ್ಯತೆ ಇದೆ ಎಂದು ಭೂವೈಜ್ಞಾನಿಕ ಅಧ್ಯಯನಗಳು ಸೂಚಿಸಿವೆ.

ಕೆಜಿಎಫ್ ಮೂಲಕ ಜಗತ್ತಿನ ಭೂಪಟದಲ್ಲಿ ಗುರುತಿಸಿಕೊಂಡಿದ್ದ ಕರ್ನಾಟಕ, ಈಗ ಮತ್ತೊಮ್ಮೆ ಚಿನ್ನದ ಮೂಲಕ ಸದ್ದು ಮಾಡಲು ಸಜ್ಜಾಗಿದೆ. ಈ ಮಹಾಶೋಧ ಸಂಪೂರ್ಣ ಯಶಸ್ವಿಯಾದರೆ, ರಾಜ್ಯದ ಬೊಕ್ಕಸ ತುಂಬಿ ತುಳುಕುವುದಲ್ಲದೆ, ಸಾವಿರಾರು ಜನರಿಗೆ ಉದ್ಯೋಗ ಭಾಗ್ಯ ಸಿಗಲಿದೆ. ಆ ಮೂಲಕ ಚಿನ್ನದ ನಾಡು ಎಂಬ ಕರ್ನಾಟಕದ ಹಿರಿಮೆ ಮತ್ತಷ್ಟು ಹೆಚ್ಚಲಿದೆ.

## ಬದಲಾದ ವರ್ಕಿಂಗ್ ಸ್ಟೈಲ್ ಭಿನ್ನರ ವಿರುದ್ಧ ಗೆಲುವಿನ ಸಿಗ್ನಲ್

• ಉದಯವಾಹಿನಿ, ಬೆಂಗಳೂರು

ನವೆಂಬರ್ 10, 2023ರಂದು ಕರ್ನಾಟಕ ಬಿಜೆಪಿ ಘಟಕದ ಅಧ್ಯಕ್ಷರಾಗಿ ಆಯ್ಕೆಯಾದ ಮಾಜಿ ಸಿಎಂ ಯಡಿಯೂರಪ್ಪನವರ ಪುತ್ರ, ಬಿವೈ ವಿಜಯೇಂದ್ರ, ಅಧ್ಯಕ್ಷರಾಗಿ ತಮ್ಮ ಎರಡು ವರ್ಷವನ್ನು ಪೂರೈಸಿದ್ದಾರೆ. ಈ ಅವಧಿಯಲ್ಲಿ ಪಕ್ಷವನ್ನು ಕಟ್ಟುವ ಕೆಲಸ ಲೆಕ್ಕವಿಲ್ಲದಷ್ಟು ಮಾಡಿದ್ದರೂ, ನೆಮ್ಮದಿಯಿಂದ ಕೆಲಸ ಮಾಡಲು ಅವರಿಗೆ ಸಾಧ್ಯವಾಗಿಲ್ಲ ಎನ್ನುವುದು, ಅವರ ಅಭಿಮಾನಿ / ಆಪ್ತ ವಲಯದಲ್ಲಿ ಕೇಳಿ ಬರುತ್ತಿರುವ ಮಾತು. ಸದ್ಯ, ಕರ್ನಾಟಕ ಬಿಜೆಪಿ ಘಟಕದಲ್ಲಿ ಭಾರೀ ಸುದ್ದಿಯಲ್ಲಿರುವ ವಿಚಾರ ಏನಂದರೆ, ವಿಜಯೇಂದ್ರ ಅಧ್ಯಕ್ಷರಾಗಿ ಮುಂದುವರಿಯುತ್ತಾರೋ ಇಲ್ಲವೋ ಎನ್ನುವುದು. ಇದಕ್ಕೆ ಕಾರಣಗಳು ಇಲ್ಲದಿಲ್ಲ. ವಿಜಯೇಂದ್ರ, ಅವರ ವಿರೋಧಿ ಬಣದ ಪ್ರಕಾರ, ಯಡಿಯೂರಪ್ಪನವರ ಕುಟುಂಬದ ಸ್ವಯಂಕೃತ ಅಪರಾಧದಿಂದಾಗಿ, ಭಿನ್ನಮತ ಭುಗಿಲೆದಿದ್ದು ಎನ್ನುವುದು. ಬಿಜೆಪಿಯಿಂದ ಅಮಾನತುಗೊಂಡಿರುವ ಬಸನಗೌಡ ಪಾಟೀಲ್ ಯತ್ನಾಳ್, ಯಡಿಯೂರಪ್ಪನವರ ಕುಟುಂಬವನ್ನು ಮಾತ್ರ ಟಾರ್ಗೆಟ್ ಮಾಡುತ್ತಿರುವುದು ಗೊತ್ತಿರುವ ವಿಚಾರ.

## ರಾಮ್-ರಹೀಮ್ ಕೂಡಿಕೆಯೇ ಅನುಮಾನಾಸ್ಪದ: ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ಧರ್ಮದ ಹೆಸರಲ್ಲಿ ಸರ್ಕಾರಿ ಜಾಗಗಳನ್ನು ಅತಿಕ್ರಮಿಸುವುದು ಹಾಗೂ ದೇವರ ಹೆಸರಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವುದನ್ನು ಸಹಿಸಲು ಆಗದು ಎಂದು ಹೈಕೋರ್ಟ್ ಪ್ರಕರಣವೊಂದರ ವಿಚಾರಣೆ ವೇಳೆ ಅಸಮಾಧಾನ ವ್ಯಕ್ತಪಡಿಸಿದೆ.

ಸರ್ಕಾರಿ ಜಾಗದ ತೆರವುಗೊಳಿಸುವಂತೆ ಕೋಲಾರ ತಹಶೀಲ್ದಾರ್ ನೀಡಿದ್ದ ನೋಟಿಸ್ ಪ್ರಶ್ನಿಸಿ ಗ್ರಾಮದ ವಿರಾಟ್ ಹಿಂದೂ ಸೇವಾ ಚಾರಿಟಬಲ್ ಟ್ರಸ್ಟ್ ಹಾಗೂ ಜಾಮಿಯಾ ಮಸ್ಜಿದ್ ಕಮಿಟಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆಯನ್ನು ನಡೆಸಿತು. ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಪೀಠ, ಎರಡೂ ಧರ್ಮದವರು ಹೈಕೋರ್ಟ್ ಮೆಟ್ಟಿಲೇರಿರುವುದನ್ನು ನೋಡಿದರೆ ರಾಮ್-ರಹೀಮ್ ಕೂಡಿಕೆಯೇ ಹಲವು ಅನುಮಾನಗಳನ್ನು ಹುಟ್ಟುಹಾಕುತ್ತಿದೆ ಎಂದು ಆಶ್ಚರ್ಯ ವ್ಯಕ್ತಪಡಿಸಿತು. ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ, ಕೋಲಾರ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ತಹಶೀಲ್ದಾರ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 21ಕ್ಕೆ ಮುಂದೂಡಿತು.

## ಸಾಲು ಮರದ ತಿಮ್ಮಕ್ಕನ ಹೆಸರಿನಲ್ಲಿ ಪ್ರತಿ ವರ್ಷ ಐವರಿಗೆ ಪ್ರಶಸ್ತಿ

• ಉದಯವಾಹಿನಿ, ಬೆಂಗಳೂರು


ಪರಿಸರಪ್ರೇಮಿ ಸಾಲುಮರದ ತಿಮ್ಮಕ್ಕನ ಹೆಸರಿನಲ್ಲಿ ಪ್ರತಿ ವರ್ಷ ಕನಿಷ್ಠ ಐವರು ಪರಿಸರವಾದಿಗಳಿಗೆ ಪ್ರಶಸ್ತಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು. ನಗರದ ಅರಮನೆ ಮೈದಾನದಲ್ಲಿ ನಡೆದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಿಮ್ಮಕ್ಕನ ಹೆಸರಿನಲ್ಲಿ ಪ್ರಶಸ್ತಿ ನೀಡುವ ಉದ್ದೇಶದಿಂದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಒಂದು ಕೋಟಿ ರೂ. ದತ್ತಿ ನಿಧಿ ಸ್ಥಾಪಿಸಿ ಠೇವಣಿಯಿಂದ ಬಡ್ಡಿ ಮೊತ್ತದಲ್ಲಿ ಪ್ರತಿ ವರ್ಷವೂ ಐವರಿಗೆ ಪ್ರಶಸ್ತಿ ನೀಡಲಾಗುವುದು ಎಂದರು.

# ಸಿಎಂ ಆಗಿ ನಿತೀಶ್ ಪಟ್ಟಾಭಿಷೇಕ

**ಬಿಹಾರ ರಾಜಕೀಯದಲ್ಲಿ ಫಿನಿಕ್ಸ್ ಹಕ್ಕಿಯಂತೆ ಬೆಳೆದ ನಿತೀಶ್ ಕುಮಾರ್**

**ಮತ್ತೆ ಮತ್ತೆ ನಿತೀಶ್‌ಗೆ ಸಿಎಂ ಪಟ್ಟ**





**1** 10ನೇ ಬಾರಿಗೆ ಪ್ರಮಾಣವಚನ ಸ್ವೀಕರಿಸಿದ ನಿತೀಶ್ ಕುಮಾರ್ ಆಸ್ತಿ 1.6 ಕೋಟಿ ರೂ.

**2** ನಿತೀಶ್ ಕುಮಾರ್ ಅವರು 13 ಹಸುಗಳು, 10 ಕರುಗಳನ್ನು ಹೊಂದಿದ್ದಾರೆ.

**3** ದೆಹಲಿಯ ದ್ವಾರಕಾದಲ್ಲಿರುವ ಸಹಕಾರಿ ವಸತಿ ಸಂಘದಲ್ಲಿನ ನಿವಾಸದಲ್ಲಿ ಫ್ಲಾಟ್ ಇದೆ.

• ಉದಯವಾಹಿನಿ, ಬೆಂಗಳೂರು

ದಾಖಲೆಯ 10ನೇ ಬಾರಿಗೆ ಬಿಹಾರದ ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸಿದರು. ಬಿಹಾರದ ಗಾಂಧಿ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಆರೀಫ್ ಮೊಹಮ್ಮದ್ ಖಾನ್ ಅವರಿಂದ ಪ್ರಮಾಣ ವಚನ ಬೋಧಿಸಿದರು. ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿ ಎನ್‌ಡಿಎ ಆಡಳಿತ ರಾಜ್ಯಗಳ ಸಿಎಂಗಳು ಭಾಗಿಯಾಗಿದ್ದರು. ಬಿಜೆಪಿ ನಾಯಕರಾದ ಸಾಮ್ರಾಟ್ ಚೌಧರಿ ಮತ್ತು ವಿಜಯ್ ಸಿನ್ಹಾ ಸೇರಿದಂತೆ ಹತ್ತೊಂಬತ್ತು ಶಾಸಕರು ಕೂಡ ಪ್ರಮಾಣ ವಚನ ಸ್ವೀಕರಿಸಿದರು. ಇವರು ಹೊಸ ಸರ್ಕಾರದ ಕೇಂದ್ರಬಿಂದುವಾಗಲಿದ್ದಾರೆ. ಚೌಧರಿ ಮತ್ತು ಸಿನ್ಹಾ ಹಿಂದಿನ ಅವಧಿಯಲ್ಲೂ ಡಿಸಿಎಂ ಆಗಿದ್ದರು. ಈ ಬಾರಿಯೂ ಉಪಮುಖ್ಯಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ.

ವಿಜಯ್ ಚೌಧರಿ, ಬಿಜೇಂದ್ರ ಪ್ರಸಾದ್ ಯಾದವ್, ಶ್ರವೋನ್ ಕುಮಾರ್, ಮಂಗಲ್ ಪಾಂಡೆ, ದಿಲೀಪ್ ಜೈಸ್ವಾಲ್, ಅಶೋಕ್ ಚೌಧರಿ, ಲೇಶಿ ಸಿಂಗ್, ಮದನ್ ಸಾಹ್ನಿ, ನಿತಿನ್ ನಬಿನ್, ರಾಮ್ ಕೃಪಾಲ್ ಯಾದವ್, ಸಂತೋಷ್ ಕುಮಾರ್ ಸುಮನ್, ಸುನಿಲ್ ಕುಮಾರ್, ಎಂಡಿ ಜಮಾ ಖಾನ್, ಸಂಜಯ್ ಸಿಂಗ್ ಟೈಗರ್, ಅರುಣ್ ಶಂಕರ್ ಪ್ರಸಾದ್, ಸುರೇಂದ್ರ ಮೆಹತಾ, ನಾರಾಯಣ ಪ್ರಸಾದ್, ರಾಮ ನಿಶಾದ್ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಪ್ರಮಾಣವಚನ ಸಮಾರಂಭದಲ್ಲಿ ಎನ್‌ಡಿಎ ಆಡಳಿತದ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಸಹ ಉಪಸ್ಥಿತರಿದ್ದರು. ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, ನಾಗಾಲ್ಯಾಂಡ್ ಮುಖ್ಯಮಂತ್ರಿ ನೀಫಿಯು ರಿಯೊ, ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಉತ್ತರಾಖಂಡ್ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಸೇರಿದಂತೆ ಇತರರು ಭಾಗವಹಿಸಿದ್ದರು. ಬಿಹಾರ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಮತ್ತು ಎಲ್‌ಜೆಪಿ (ಆರ್‌ವಿ) ಮುಖ್ಯಸ್ಥ ಚಿರಾಗ್ ಪಾಸ್ವಾನ್ ಸೇರಿದಂತೆ ಇತರರು ಉಪಸ್ಥಿತರಿದ್ದರು. 2025ರ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಐತಿಹಾಸಿಕ ಜಯ ಸಾಧಿಸಿ 243 ಸ್ಥಾನಗಳಲ್ಲಿ 202 ಸ್ಥಾನಗಳನ್ನು ಗೆದ್ದರೆ, ಮಹಾಘಟಬಂಧನ್ ಕೇವಲ 35 ಸ್ಥಾನಗಳನ್ನು ಮಾತ್ರ ಪಡೆಯುವಲ್ಲಿ ಯಶಸ್ವಿಯಾಯಿತು. 243 ಸದಸ್ಯ ಬಲದ ಬಿಹಾರ ವಿಧಾನಸಭೆಯಲ್ಲಿ ಆಡಳಿತಾರೂಢ ಮೈತ್ರಿಕೂಟವು ನಾಲ್ಕನೇ ಮೂರು ಭಾಗದಷ್ಟು ಬಹುಮತವನ್ನು ಗಳಿಸಿತು. ಇದು ರಾಜ್ಯ ಚುನಾವಣೆಯಲ್ಲಿ ಎನ್‌ಡಿಎ 200 ಸ್ಥಾನಗಳ ಗಡಿಯನ್ನು ದಾಟಿದ್ದು ಎರಡನೇ ಬಾರಿಯಾಗಿದೆ. 2010 ರಲ್ಲಿ, ಅದು 206 ಸ್ಥಾನಗಳನ್ನು ಗೆದ್ದಿತ್ತು.

**ಬಿಹಾರ ಸಾಧನೆಯ ಹಾದಿ!**

**ರಾಜಕೀಯ ಜೀವನ:** ಇಂಜಿನಿಯರ್ ಆಗಿದ್ದ ನಿತೀಶ್ ಜೆಪಿ ಚಳವಳಿಯಿಂದಾಗಿ ಆಕರ್ಷಣೆಗೊಂಡು ರಾಜ್ಯ ವಿದ್ಯುತ್ ಇಲಾಖೆಯ ಉದ್ಯೋಗವನ್ನು ತೊರೆದು ರಾಜಕೀಯಕ್ಕೆ ಬಂದರು. ಆ ಕಾಲದಲ್ಲಿ ಜಯಪ್ರಕಾಶ್ ನಾರಾಯಣ್ ನೇತೃತ್ವದ ಚಳವಳಿ ಸಮಯದಲ್ಲಿ ತಮ್ಮ ಸಮಕಾಲೀನರಾಗಿದ್ದ ಲಾಲು ಪ್ರಸಾದ್ ಯಾದವ್ ಮತ್ತು ರಾಮ್ ವಿಲಾಸ್ ಪಾಸ್ವಾನ್ ಹೊರತಾಗಿ ಇವರು ದೀರ್ಘ ಚುನಾವಣಾ ಯಶಸ್ಸು ಪಡೆದುಕೊಂಡಿದ್ದು ಮಾತ್ರ ಅಚ್ಚರಿಯೇ ಸರಿ. ಸತತ ಮೂರು ಬಾರಿ ಸೋಲಿನ ಬಳಿಕ 1985ರ ವಿಧಾನಸಭಾ ಚುನಾವಣೆಯಲ್ಲಿ ಲೋಕದಳದ ಅಭ್ಯರ್ಥಿಯಾಗಿ ಹರ್ನಾತ್ ಕ್ಷೇತ್ರದಿಂದ ನಿತೀಶ್ ಕುಮಾರ್ ಮೊದಲ ಬಾರಿಗೆ ವಿಧಾನಸಭೆಗೆ ಪ್ರವೇಶ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದರುಇದಾದ ನಾಲ್ಕು ವರ್ಷದ ಬಳಿಕ ಅವರು ಬರ್ಹ್ ಕ್ಷೇತ್ರದಿಂದ ಲೋಕಸಭೆಗೆ ಪ್ರವೇಶಿಸಿದರು. ಸಂಸದರಾಗಿದ್ದ ಲಾಲು ಪ್ರಸಾದ್ ಯಾದವ್ ರಾಜ್ಯ ರಾಜಕಾರಣಕ್ಕೆ ಮರಳಿ ಸಿಎಂ ಆದರು. ಮುಂದೆ ಒಂದೂವರೆ ದಶಕಗಳ ಕಾಲ ಪ್ರಸಾದ್ ಶಕ್ತಿಶಾಲಿ, ಆದರೆ ವಿವಾದಾತ್ಮಕ ನಾಯಕರಾಗಿ ಬೆಳೆದರು. ಅಲ್ಲದೇ ಅವರ ಪತ್ನಿ ರಾಬ್ರಿ ದೇವಿಯನ್ನು ನಾಮಕೇವಾಸ್ತೆ ಸಿಎಂ ಆಗಿಸಿ, ಅವರ ಮೂಲಕ ಆಡಳಿತ ನಡೆಸಿದರು. ಅವರ ವಿರುದ್ಧ ಮೇವು ಹಗರಣದ ಚಾರ್ಜ್ ಶೀಟ್ ದಾಖಲಾದ ಬಳಿಕವಷ್ಟೇ ಅವರು ಸಿಎಂ ಸ್ಥಾನದಿಂದ ಕೆಳಗಿಳಿದರು.

## ರಾಜಕಾರಣದಲ್ಲಿ ನಿತೀಶ್ ಕುಮಾರ್ ಅತಿ ದೊಡ್ಡ ಛಾಪು

**ಕೈ ಹಿಡಿದ ಜನಪ್ರಿಯ ಯೋಜನೆಗಳು**

**ಕುಮಾರ್ ಮೊದಲ ಬಾರಿಗೆ ಐದು ವರ್ಷ ಸಿಎಂ ಆದಾಗ ಅವರ ಆಡಳಿತದಲ್ಲಿ ಕೈಗೊಂಡ ಕಾನೂನು ಮತ್ತು ಸುವ್ಯವಸ್ಥೆ ಸುಧಾರಣೆ ಬಗ್ಗೆ ಟೀಕಾಕಾರರು ಕೂಡಾ ಮೆಚ್ಚುಗೆ ವ್ಯಕ್ತಪಡಿಸಿದರು. ಇಬಿಸಿ ಮತ್ತು ಮಹಾದಲಿತರು ಎಂದು ಕರೆಯುತ್ತಿದ್ದ ಒಬಿಸಿಗಳು ಮತ್ತು ದಲಿತರಲ್ಲಿ ಉಪ ಕೋಟಾಗಳನ್ನು ರಚಿಸಿ ಅವರ ಏಳಿಗೆಗೆ ಕ್ರಮ ಕೈಗೊಂಡರು.ಶಾಲಾ ಬಾಲಕಿಯರಿಗೆ ಸಮವಸ್ತ್ರ ಮತ್ತು ಉಚಿತ ಬೈಸಿಕಲ್ ಯೋಜನೆಯಂತಹ ಹಲವು ಜನಪ್ರೀಯ ಕಾರ್ಯಕ್ರಮಗಳನ್ನು ಜಾರಿಗೆ ತಂದರು. ಇದರ ಯಶಸ್ಸಿನಿಂದ 2010ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಜೆಡಿಯು - ಬಿಜೆಪಿ ಮೈತ್ರಿ ಅಭೂತಪೂರ್ವ ಯಶಸ್ಸನ್ನು ಪಡೆದುಕೊಂಡಿತು.**

**ಮೋದಿಗೆ ಬಿಜೆಪಿ ನೇತೃತ್ವ - ಮುನಿಸಿಕೊಂಡ ನಿತೀಶ್**



**2014ರ ಲೋಕಸಭಾ ಚುನಾವಣೆಗೆ ಮೋದಿ ಅವರನ್ನು ಬಿಜೆಪಿಯ ಪ್ರಚಾರ ಸಮಿತಿ ಮುಖ್ಯಸ್ಥರನ್ನಾಗಿ ನೇಮಿಸಿದಾಗ ಮುನಿಸಿಕೊಂಡ ನಿತೀಶ್ ಕುಮಾರ್, 2013ರಲ್ಲಿ ಬಿಜೆಪಿಯೊಂದಿಗಿನ ತಮ್ಮ ಪಕ್ಷದ 17ವರ್ಷಗಳ ಸಂಬಂಧವನ್ನು ಕಡಿದುಕೊಂಡರು. ಬಿಜೆಪಿಯಿಂದ ದೂರಾದ ಬಳಿಕ ಕಾಂಗ್ರೆಸ್ ಬೆಂಬಲದೊಂದಿಗೆ ಲೋಕಸಭಾ ಚುನಾವಣೆಯಲ್ಲಿ ಜೆಡಿಯು ಸೋಲಿನ ಹೊಣೆಯನ್ನು ಹೊತ್ತು 2014ರಲ್ಲಿ ಸಿಎಂ ಹುದ್ದೆಯಿಂದ ಕೆಳಗಿಳಿದರು. ಇದಾಗಿ ಬಳಿಕ ಆರ್‌ಜೆಡಿ ಮತ್ತು ಕಾಂಗ್ರೆಸ್ ಬೆಂಬಲದೊಂದಿಗೆ ತಮ್ಮ ವಿರುದ್ಧ ಬಂಡಾಯ ಎದ್ದಿದ್ದ ಶಿಷ್ಯ ಜಿತನ್ ರಾಮ್ ಮಾಂಝಿ ಅವರನ್ನು ಸೋಲಿಸಿ ಮತ್ತೆ ಸಿಎಂ ಆದರು.ಜೆಡಿಯು, ಕಾಂಗ್ರೆಸ್ ಹಾಗೂ ಆರ್‌ಜೆಡಿ ಜೊತೆಗೆ ಮೈತ್ರಿಯೊಂದಿಗೆ 2017ರಲ್ಲಿ ವಿಧಾನಸಭೆ ಚುನಾವಣೆ ಎದುರಿಸಿದರೂ ಎರಡು ವರ್ಷದಲ್ಲೇ ಈ ಮೈತ್ರಿ ಮುರಿದು ಬಿತ್ತು.**

**ಚುನಾವಣೆಯಲ್ಲಿ ಭರ್ಜರಿ ಗೆಲುವು!**

**ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು 243 ಸ್ಥಾನಗಳ ಪೈಕಿ 202 ಸ್ಥಾನಗಳನ್ನು ಗೆದ್ದು ಭರ್ಜರಿ ಗೆಲುವು ಸಾಧಿಸಿದೆ. ಬಿಜೆಪಿ 89 ಸ್ಥಾನಗಳೊಂದಿಗೆ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಜೆಡಿಯು ಪಕ್ಷವು 2010ರ ನಂತರ ಇದೇ ಮೊದಲ ಬಾರಿಗೆ 85 ಸ್ಥಾನಗಳನ್ನು ಗೆದ್ದು ಬಲಿಷ್ಠವಾಗಿ ಪುಟಿದೆದ್ದಿದೆ. ಮೈತ್ರಿಕೂಟದ ಇತರ ಪಕ್ಷಗಳಾದ ಚಿರಾಗ್ ಪಾಸ್ವಾನ್ ಅವರ ಎಲ್‌ಜೆಪಿ 19 ಸ್ಥಾನ, ಎಚ್‌ಎಎಂ 5 ಸ್ಥಾನ, ಮತ್ತು ಆರ್‌ಎಲ್‌ಎಂ 4 ಸ್ಥಾನಗಳನ್ನು ಪಡೆದುಕೊಂಡಿವೆ. ಇತ್ತ, ತೇಜಸ್ವಿ ಯಾದವ್ ಅವರ ಆರ್‌ಜೆಡಿ ನೇತೃತ್ವದ ಮಹಾಘಟಬಂಧನ್ ಮೈತ್ರಿಕೂಟವು ದೊಡ್ಡ ಹಿನ್ನಡೆ ಅನುಭವಿಸಿದ್ದು, ಕೇವಲ 35 ಸ್ಥಾನಗಳನ್ನು ಮಾತ್ರ ಗಳಿಸಿದೆ. ಈ ಮೈತ್ರಿಕೂಟದಲ್ಲಿ ಆರ್‌ಜೆಡಿ 25 ಸ್ಥಾನ, ಕಾಂಗ್ರೆಸ್ 6 ಸ್ಥಾನ, ಮತ್ತು ಎಡಪಕ್ಷಗಳು ಒಟ್ಟಾಗಿ 3 ಸ್ಥಾನಗಳನ್ನು ಪಡೆದಿವೆ. ಇನ್ನು, ಪ್ರಶಾಂತ್ ಕಿಶೋರ್ ಅವರ ನೂತನ ಜನ ಸುರಾಜ್ ಪಕ್ಷವು ಯಾವುದೇ ಸ್ಥಾನ ಗೆಲ್ಲುವಲ್ಲಿ ವಿಫಲವಾಗಿದೆ.**

# ಡಿಕೆಶಿ ಟೀಂನ ಒಕ್ಕಲಿಗ ನಾಯಕರ ದಿಢೀರ್ ದೆಹಲಿ ದೌಡು

**■ ದೊಡ್ಡಗೌಡರ ತಂತ್ರಗಾರಿಕೆಗೆ ಟಕ್ಕರ್ ಕೊಡಲು ಪ್ಲ್ಯಾನ್ ■ ಕೆ.ಸಿ. ವೇಣುಗೋಪಾಲ್‌ರನ್ನು ಭೇಟಿ**

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಕಾಂಗ್ರೆಸ್ಸಿನ ಒಕ್ಕಲಿಗ ನಾಯಕರು ದಿಢೀರನೆ ದೆಹಲಿ ಹೊರಟಿದ್ದಾರೆ. ನ.21ರಂದು ದೆಹಲಿಯಲ್ಲಿ ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡಲು ಅವಕಾಶ ಸಿಕ್ಕಿರುವ ಹಿನ್ನೆಲೆಯಲ್ಲಿ, ಕಾಂಗ್ರೆಸ್ಸಿನ ಸುಮಾರು ಎಂಟು - ಒಂಭತ್ತು ಒಕ್ಕಲಿಗ ನಾಯಕರು ದಿಢೀರನೆ ದೆಹಲಿಗೆ ಪ್ರಯಾಣ ಬೆಳೆಸಿದ್ದಾರೆ.

ಅವರೊಂದಿಗೆ, ಅಲ್ಪಸಂಖ್ಯಾತ ನಾಯಕರಾದ ಇಕ್ಬಾಲು ಹುಸೇನ್ ಕೂಡ ಸೇರಿಕೊಂಡಿದ್ದಾರೆ.

**ಯಾರು ಯಾರಿದ್ದಾರೆ ತಂಡದಲ್ಲಿ**

**● ಚೆಲುವರಾಯಸ್ವಾಮಿ ● ಮಾಗಡಿ ಬಾಲಕೃಷ್ಣ ● ಇಕ್ಬಾಲ್ ಹುಸೇನ್ ● ಶಿವಗಂಗಾ ಬಸವರಾಜ್ ● ಗುಬ್ಬಿ ಶ್ರೀನಿವಾಸ್ ● ರವಿ ಗಣಿಗ ● ದಿನೇಶ್ ಗೂಳಿಗೌಡ ● ಆನೇಕಲ್ ಶಿವಣ್ಣ ● ಕುಣಿಗಲ್ ರಂಗನಾಥ್ ● ನೆಲಮಂಗಲ ಶ್ರೀನಿವಾಸ್**

**ಏನು ತಂತ್ರ :** ರಾಜ್ಯ ರಾಜಕಾರಣದಲ್ಲಿ ನಾಯಕತ್ವ ಬದಲಾವಣೆಯ ಕೂಗು ಜೋರಾಗಿದೆ. ಅತ್ತ, ಸಿದ್ದರಾಮಯ್ಯನವರನ್ನು ಬದಲಾಯಿಸಿ ಆ ಸ್ಥಾನಕ್ಕೆ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರನ್ನು ತಂದು ಕೂರಿಸಬೇಕು ಎಂಬ ಒಲವನ್ನು ಹೊಂದಿದ್ದಾರೆ. ಈ ಕುರಿತಂತೆ ಹೈಕಮಾಂಡ್ ಜೊತೆ ಮಾತನಾಡಲು ಡಿಕೆಶಿಯವರು ಹಲವಾರು ಬಾರಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿದ್ದರೂ ಫಲ ಸಿಕ್ಕಿಲ್ಲ.

ಈ ಎಲ್ಲಾ ಬೆಳವಣಿಗೆಯ ಬೆನ್ನಲ್ಲೇ, ಹೈಕಮಾಂಡ್ ಮುಂದೆ ತಾವು ಮುಖ್ಯಮಂತ್ರಿಯಾಗುವ ಇಂಗಿತವನ್ನು ಹಲವಾರು ಬಾರಿ ವ್ಯಕ್ತಪಡಿಸಿದ್ದರೂ ಹೈಕಮಾಂಡ್ ಅದಕ್ಕೆ ಸ್ವಲ್ಪ ಕಾಯಬೇಕು ಎಂದು ಪದೇ ಪದೇ ಹೇಳಿರುವುದು ಅವರಿಗೂ ಸರಿಹೋಗುತ್ತಿಲ್ಲ. ಹಾಗಾಗಿ, ಈ ಬಾರಿ ಹೈಕಮಾಂಡ್ ಮುಂದೆ ಒಕ್ಕಲಿಗ ಟ್ರಂಪ್ ಕಾರ್ಡ್ ಪ್ಲೇ ಮಾಡಲು ಡಿಕೆಶಿಯವರು ಮುಂದಾಗಿದ್ದಾರೆ ಎಂದು ಹೇಳಲಾಗಿದೆ. ಅದಕ್ಕಾಗಿಯೇ ನ. 20ರಂದು ರಾಜ್ಯ ಸಂಪುಟದಲ್ಲಿರುವ ತಮ್ಮ ಆಪ್ತ ಒಕ್ಕಲಿಗ ಸಚಿವರು ಹಾಗೂ ಕಾಂಗ್ರೆಸ್‌ನಲ್ಲಿರುವ ತಮ್ಮ ಆಪ್ತ ನಾಯಕರನ್ನು ದೆಹಲಿಗೆ ಕಳುಹಿಸಿ ನಾಯಕತ್ವ ಬದಲಾವಣೆಗೆ ಒತ್ತಡ ಹೇರಲು ಮುಂದಾಗಿದ್ದಾರೆ ಎನ್ನಲಾಗಿದೆ.



**ಒಕ್ಕಲಿಗ ಟ್ರಂಪ್ ಕಾರ್ಡ್ ಪ್ಲೇ**

**ಡಿಕೆಶಿ ಮುಂದಿನ ನಡೆ ಏನು**

**ಕಾಂಗ್ರೆಸ್ ನಾಯಕರು ದೆಹಲಿಯಲ್ಲಿ ಬೀಡು ಬಿಟ್ಟಿರುವುದರಿಂದ ರಾಜ್ಯ ರಾಜಕೀಯ ಬೆಳವಣಿಗೆಗಳು ಈಗ ದೆಹಲಿಗೆ ವರ್ಗಾವಣೆಯಾಗಿವೆ. ನಾಯಕತ್ವ ಬದಲಾವಣೆ ಆಗದಿದ್ದರೆ, ಡಿಕೆ ಶಿವಕುಮಾರ್ (ಡಿಕೆಶಿ) ಅವರು ತಮ್ಮ ಸ್ಥಾನಮಾನವನ್ನು ಭದ್ರಪಡಿಸಿಕೊಳ್ಳಲು ಮತ್ತು 2028ರ ಸಿಎಂ ಸ್ಥಾನಕ್ಕೆ ಅಧಿಕೃತ ಒಪ್ಪಂದ ಮಾಡಿಕೊಳ್ಳಲು ಹಲವು ಕಾರ್ಯತಂತ್ರಗಳನ್ನು ರೂಪಿಸಿದ್ದಾರೆ. ಮುಂದಿನ ಮುಖ್ಯಮಂತ್ರಿ ಪಟ್ಟಕ್ಕೇರುವ ನಿಟ್ಟಿನಲ್ಲಿ ಅವರು ಹೈಕಮಾಂಡ್ ಮುಂದೆ ನಾಲ್ಕು ಪ್ರಮುಖ ಬೇಡಿಕೆಗಳನ್ನು ಇಡುವ ಸಾಧ್ಯತೆ ಇದೆ.**

**ಇದರಿಂದೇನು ಲಾಭ :** ಭಾರತದ ರಾಜಕಾರಣ ಜಾತಿ ಆಧಾರಿತವಾದದ್ದು. ಕರ್ನಾಟಕದಲ್ಲಿ ಲಿಂಗಾಯತರು, ಒಕ್ಕಲಿಗರ ಕೃಪಾಕಟಾಕ್ಷ ಯಾವ ಪಕ್ಷದ ಮೇಲಿರುತ್ತದೋ ಆ ಪಕ್ಷ ಅಧಿಕಾರಕ್ಕೆ ಬಂದಿರುವುದು ಇತಿಹಾಸದಲ್ಲಿ ದಾಖಲಾಗಿದೆ. 2023ರ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಉತ್ತರ ಕರ್ನಾಟಕದ ಲಿಂಗಾಯತ ಮತದಾರರ ಕೃಪಾಕಟಾಕ್ಷ ಸಿಕ್ಕಿತ್ತು. 2028ರ ಚುನಾವಣೆಯಲ್ಲಿ ಅದು ಸಿಗುತ್ತೆ ಅನ್ನೋ ಗ್ಯಾರಂಟಿಯಿಲ್ಲ. ಅದಕ್ಕೆ ಕಾರಣ ಹಲವಾರು ಇವೆ, ಅದು ಬೇರೆ ವಿಚಾರ.

ಆದರೆ, ಹಳೇ ಮೈಸೂರು ಪ್ರಾಂತ್ಯದಲ್ಲಿ ಒಕ್ಕಲಿಗರ ಪ್ರಾಬಲ್ಯವಿದ್ದು ಆ ಸಮುದಾಯದ ಬೆಂಬಲ ಸಿಗಬೇಕು. ಹೈಕಮಾಂಡ್‌ಗೆ ಈ ವಿಚಾರವನ್ನು ಮನದಟ್ಟು ಮಾಡಲು ಡಿಕೆಶಿ ಬಣ ನಿರ್ಧರಿಸಿದೆ ಎನ್ನಲಾಗಿದೆ.

**ಪ್ರತಿತಂತ್ರಕ್ಕೆ ಪ್ಲ್ಯಾನ್:** ಈಗಾಗಲೇ ಜೆಡಿಎಸ್ - ಬಿಜೆಪಿ ಮೈತ್ರಿಯಿಂದಾಗಿ ಕಾಂಗ್ರೆಸ್ಸಿಗೆ ಹಲವಾರು ಸಂದರ್ಭಗಳಲ್ಲಿ ಡ್ಯಾಮೇಜ್ ಆಗಿದೆ. ಅದರಲ್ಲಿ ಮುಂದಿನ ಚುನಾವಣೆಯಲ್ಲಿ ಹಳೇ ಮೈಸೂರು ಪ್ರಾಂತ್ಯದಲ್ಲಿ ತಮ್ಮ ಬಲವರ್ಧನೆಗೆ ದೇವೇಗೌಡ - ಕುಮಾರಸ್ವಾಮಿ - ನಿಖಿಲ್ ಕುಮಾರಸ್ವಾಮಿ ಜೋಡಿಯು ಬಹುಶಃ ಹೊಸ ತಂತ್ರಗಾರಿಕೆಯನ್ನು ರೂಪಿಸಲಿದ್ದಾರೆ. ಬಿಜೆಪಿಯು ಅದಕ್ಕೆ ಬೆಂಬಲ ನೀಡುತ್ತದೆ.

ಹಾಗಾಗಿ, ಆ ತಂತ್ರಗಾರಿಕೆಗೆ ಪ್ರತಿತಂತ್ರವನ್ನು ಹೆಣೆಯುವುದು ಕಾಂಗ್ರೆಸ್ಸಿಗೆ ಅನಿವಾರ್ಯ. ಹಾಗಾಗಿ, ಡಿಕೆಶಿಯವರಿಗೆ ಸಿಎಂ ಪಟ್ಟ ಕೊಟ್ಟರೆ ಒಕ್ಕಲಿಗ ಸಮುದಾಯವನ್ನು ಕಾಂಗ್ರೆಸ್ಸಿನತ್ತ ಸೆಳೆಯಲು ಅನುಕೂಲವಾಗುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಡಲು ಈಗ ದೆಹಲಿಗೆ ತೆರಳಿರುವ ಡಿಕೆಶಿ ಪ್ರಯತ್ನಿಸಲಿದೆ ಎಂದು ಮೂಲಗಳು ತಿಳಿಸಿವೆ.

**ಡಿಕೆಶಿ ಉತ್ತರ :** ಸಚಿವ ಸಂಪುಟ ಪುನರ್ರಚನೆಯ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ ಎಂದು ಸ್ಪಷ್ಟಪಡಿಸಿದರು. ಮುಖ್ಯಮಂತ್ರಿಗಳು ಹೈಕಮಾಂಡ್ ನಾಯಕರನ್ನು ಭೇಟಿಯಾಗುವ ವಿಷಯದಲ್ಲಿ, ಹಾಗೆ ಭೇಟಿ ಮಾಡುವುದು ತಪ್ಪಲ್ಲ ಎಂದು ತಿಳಿಸಿದರು. ಇದೇ ವೇಳೆ, ಪಕ್ಷದ ಸೂಚನೆಗಳನ್ನು ಪಾಲಿಸುವುದಾಗಿ ಅವರು ಭರವಸೆ ನೀಡಿದರು. ಸಂಪುಟ ಪುನರ್ರಚನೆಯ ಕುರಿತು ಹೈಕಮಾಂಡ್ ಕೇಳಿದರೆ ಮಾತ್ರ ಮಾತನಾಡುವುದಾಗಿ ಡಿಕೆಶಿ ಹೇಳಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹12,426/Gram24ct ₹11,390/Gram22ct ಬೆಳ್ಳಿ: ₹165.00/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಕಲ್ಲು ದೇವರು ದೇವರಲ್ಲ

ಕಲ್ಲು ಮಣ್ಣು ಕಟ್ಟಿಗೆ ಲೋಹ ಮುಂತಾದವುಗಳ ಕಾಶಿ ರಾಮೇಶ್ವರ ಗೋಕರ್ಣ ಕೇದಾರ ಮುಂತಾದವುಗಳಲ್ಲಿನ ದೇವರು ದೇವರಲ್ಲ ಎಂದ ಬಸವಣ್ಣ. ತನ್ನ ಚೈತನ್ಯ ಪರಮಾತ್ಮನ ಸ್ವರೂಪ ತಿಳಿದವನಿಗೆ ಈ ಮಾತು. ಸ್ವರೂಪ ತಿಳಿಯಬೇಕಾದ ಸಾಧನಾ ಮಾರ್ಗದ ಸಾಧಕನಿಗೆ ಈ ಮಾತು ಯಥಾವತ್ತಾಗಿ ಅನ್ವಯವಾಗುವುದಾದರೆ ಯಾರೂ ಗುಡಿ ಮಸೀದಿ ಚರ್ಚ್ ಗಳಿಗೆ ಹೋಗುವಂತಿಲ್ಲ, ಪೂಜೆ ಪುನಸ್ಕಾರ ನಮಾಜ್ ಮಾಡುವಂತಿಲ್ಲ ಲಿಂಗಾಯತರಾದಿ ಎಲ್ಲಾ ಧರ್ಮದವರೂ ಇಷ್ಟಲಿಂಗಾದಿ ಎಲ್ಲ ಕುರುಹುಗಳನ್ನು ತೊರೆಯಬೇಕಾಗುತ್ತದೆ. ಉಂಡವನಿಗೆ ಈಗ ಊಟ ಬೇಡ, ಹಸಿದವನಿಗಂತೂ ಬೇಕೇ ಬೇಕು. ಸಿದ್ಧನಾದವನಿಗೆ ಸಾಧನೆ ಈಗ ಬೇಕಿಲ್ಲದಿರಬಹುದು, ಸಾಧಕನಿಗೆ ಅದು ಬೇಕೇ ಬೇಕು. ಪ್ರತಿ ನಿತ್ಯ ತನ್ನ ತಾಮ್ರ ಕಮಂಡಲು ಉಜ್ಜುವ ತೋತಾಪುರಿಸಾಧುಗೆ ಸ್ವಾಮಿ ವಿವೇಕಾನಂದರು ಪ್ರಶ್ನಿಸಿದಾಗ ನುಡಿದ: ಉಜ್ಜುವುದು ನಮ್ಮ ಸಾಧನೆ,ಮಲಿನವಾಗುವುದು ಪಾತ್ರೆಯ ಧರ್ಮ. ಸ್ವಚ್ಛವೆಂದು ಉಜ್ಜುವುದು ಬಿಟ್ಟರೆ ಮತ್ತೆ ಮಲಿನ! ಸಿದ್ಧನಿಗೂ ಸಾಧನೆ ಬಾಧಕವಲ್ಲ. ಮೂರ್ತಿಗಳು ಸಾಧಕನ ಸಾಧನೆಯ ಸಾಧನ. ಮೂರ್ತಿಗಳನ್ನು ಭಕ್ತ ದೇವರೆಂದು ಪೂಜಿಸುವನೇ ಹೊರತು ಕಲ್ಲು ಮಣ್ಣು ಕಟ್ಟಿಗೆ ಎಂದಲ್ಲ. ನೀರು ಕನ್ನಡಿ ಭಾವಚಿತ್ರಗಳಲ್ಲಿನ ತನ್ನ ಪ್ರತಿಬಿಂಬ ನಿಜವಲ್ಲ ತಾನಲ್ಲದಿದ್ದರೂ ತಾನೇ ಎಂಬ ಹೆಮ್ಮೆ! ಸ್ವಾಮಿ ವಿವೇಕಾನಂದರು ಖೇತ್ರಿಮಹಾರಾಜರ ಸಮ್ಮುಖದಲ್ಲಿ ಅವರ ಭಾವಚಿತ್ರವನ್ನು ಅವರ ಸೇವಕನಿಗಿತ್ತು ಉಗಿ ಎಂದಾಗ ಉಗಿಯುವ ಸಾಹಸ ಮಾಡಲಿಲ್ಲ! ಮೂರ್ತಿ ಮೂರ್ತಿಪೂಜಕರ ಅವಹೇಳನ ಸೌಜನ್ಯವಲ್ಲ.

## ಚಿನ್ನಸ್ವಾಮಿ ಕಾಲ್ತುಳಿತ ಪ್ರಕರಣ: ಕೆಎಸ್‌ಸಿಎ, ಡಿಎನ್‌ಎ, ಆರ್‌ಸಿಬಿ ಹೊಣೆ

• **ಉದಯವಾಹಿನಿ, ಬೆಂಗಳೂರು**

ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಜೂನ್ 4ರಂದು ಸಂಭವಿಸಿದ ಕಾಲ್ತುಳಿತ ದುರಂತ ಪ್ರಕರಣದ ತನಿಖೆ ನಡೆಸಿರುವ ಸಿಐಡಿ, ನ್ಯಾಯಾಲಯಕ್ಕೆ ಅಂತಿಮ ದೋಷಾರೋಪ ಪಟ್ಟಿ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದೆ. 2,200 ಪುಟಗಳ ದೋಷಾರೋಪ ಪಟ್ಟಿ ಸಿದ್ಧವಾಗಿದೆ. ಕಾಲ್ತುಳಿತದಿಂದಾಗಿ 11 ಮಂದಿ ಮೃತಪಟ್ಟಿದ್ದರು. ಈ ಬಗ್ಗೆ ಶೀಘ್ರದಲ್ಲೇ ಕೋರ್ಟ್‌ಗೆ ವರದಿ ಸಲ್ಲಿಸಲಾಗುವುದು ಎಂದು ಪೊಲೀಸರು ಹೇಳಿದರು. ದುರಂತಕ್ಕೆ ಕೆಎಸ್‌ಸಿಎ, ಡಿಎನ್‌ಎ (ಇ-ವೆಂಟ್ ಮ್ಯಾನೇಜ್‌ಮೆಂಟ್) ಆರ್‌ಸಿಬಿ ಫ್ರಾಂಚೈಸಿ ಕಾರಣ. ಮೂರೂ ಸಂಸ್ಥೆಗಳು ಲೋಪ ಎಸಗಿರುವುದು ತನಿಖೆ ವೇಳೆ ಪತ್ತೆಯಾಗಿವೆ. ಹಲವು ಸಾಕ್ಷ್ಯಗಳು ಸಿಕ್ಕಿವೆ.

ಎಲ್ಲವನ್ನೂ ಕ್ರೋಡೀಕರಿಸಿ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಲಾಗುವುದು' ಎಂದು ಪೊಲೀಸರು ಹೇಳಿದರು. ಪ್ರತ್ಯಕ್ಷ ಸಾಕ್ಷಿಗಳು ಹಾಗೂ ಗಾಯಾಳುಗಳ ಹೇಳಿಕೆ ದಾಖಲಿಸಿಕೊಳ್ಳಲಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗಿತ್ತು. ತನಿಖೆ ವೇಳೆ ಮೂರು ಸಂಸ್ಥೆಗಳ ಲೋಪಗಳು ಪತ್ತೆಯಾಗಿವೆ ಎಂದು ಸಿಐಡಿ ಮೂಲಗಳು ತಿಳಿಸಿವೆ.

## ಬೆಸ್ಕಾಂ ವಿರುದ್ಧ ಜನರ ಆಕ್ರೋಶ

• **ಉದಯವಾಹಿನಿ, ಬೆಂಗಳೂರು**

ಹೊಸ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡಲು ಬೆಸ್ಕಾಂ ಅಧಿಕಾರಿಗಳು ವಿಳಂಬ ಮಾಡ್ತಿದ್ದಾರೆ. ಅಧಿಕಾರಿಗಳ ವಿಳಂಬ ನೀತಿಯಿಂದ ಗೃಹಪ್ರವೇಶಕ್ಕೆ ಸಿದ್ಧವಾಗಿರುವ ಮನೆಗಳಿಗೆ ಬೆಳಕಿನ ಭಾಗ್ಯವೇ ಸಿಗ್ತಿಲ್ಲ. ಇದರಿಂದ ವಿದ್ಯುತ್ ಸಂಪರ್ಕ ನೀಡಿ ಅಂತ ಮನೆ ಮಾಲೀಕರು ನಿತ್ಯ ಬೆಸ್ಕಾಂ ಕಚೇರಿಗಳಿಗೆ ಅಲೆದಾಡ್ತಿದ್ದಾರೆ. ಬೆಂಗಳೂರಿನಲ್ಲಿ ಬೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ವಿಳಂಬ ನೀತಿಗೆ ಹೊಸ ಮನೆ ಕಟ್ಟಿದ ಮನೆ ಮಾಲೀಕರು ಪರದಾಡ್ತಿದ್ದಾರೆ. ಹೊಸ ವಿದ್ಯುತ್ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸಿದ ಗ್ರಾಹಕರಿಗೆ ಅನುಮತಿ ಪತ್ರವನ್ನೇ ನೀಡುತ್ತಿಲ್ಲ. ಹೀಗಾಗಿ ಗೃಹ ಪ್ರವೇಶಕ್ಕೆ ಸಜ್ಜಾಗಿದ್ದ ಮನೆಗಳಲ್ಲಿ ಕತ್ತಲು ತುಂಬಿದ್ದು, ವಿದ್ಯುತ್ ಸಂಪರ್ಕ ನೀಡುವಂತೆ ನಿತ್ಯ ಬೆಸ್ಕಾಂ ಕಚೇರಿಗಳಿಗೆ ಅಲೆದಾಡ್ತಿದ್ದಾರೆ. ಬಸವನಗುಡಿ ಕ್ಷೇತ್ರ ಸೇರಿದಂತೆ ನಗರದ ಹಲವೆಡೆ ಹೊಸ ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಮನೆ ಮಾಲೀಕರು ಅಗತ್ಯ ದಾಖಲೆಗಳ ಜೊತೆಗೆ ಆನ್‌ಲೈನ್, ಆಫ್ ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. 18 ಕಿಮಿ ವರೆಗೆ ಎಲ್‌ಟಿ1 ಮತ್ತು ಎಲ್‌ಟಿ 3 ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸಿದ್ರೂ ಅಧಿಕಾರಿಗಳು ಮಾತ್ರ ಅನುಮತಿ ನೀಡ್ತಿಲ್ಲ. ಸರ್ವರ್ ಸಮಸ್ಯೆ, ಅಧಿಕಾರಿಗಳ ಗೈರು, ಹೀಗೆ ನಾನಾ ಕಾರಣಗಳನ್ನ ನೀಡಿ ಎರಡ್ಮೂರು ತಿಂಗಳಿಂದ ಅಲೆದಾಡಿಸ್ತಿದ್ದಾರೆ. ಬೆಸ್ಕಾಂ ಕಚೇರಿಗಳಿಗೆ ಅಲೆದಾಡಿ ಸುಸ್ತಾದ ಗ್ರಾಹಕರು ಸಿಎಂ, ಡಿಸಿಎಂ ವಿರುದ್ಧ ಕಿಡಿಕಾರಿದ್ದಾರೆ.

## ಎಪಿಎಸ್ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ

• **ಉದಯವಾಹಿನಿ, ಬೆಂಗಳೂರು**

ನಗರದ ಎಪಿಎಸ್ ಕಾಲೇಜ್ ಆಫ್ ಕಾಮರ್ಸ್‌ನಲ್ಲಿ ಈ ಬಾರಿ ಕನ್ನಡ ರಾಜ್ಯೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು.

ವಿದ್ಯಾರ್ಥಿಗಳು, ಸಿಬ್ಬಂದಿ ಆಡಳಿತ ವರ್ಗ ಕನ್ನಡದ ಬಾವುಟದ ಪ್ರತೀಕವಾದ ಹಳದಿ ಮತ್ತು ಕೆಂಪುಬಣ್ಣದ ವಸ್ತ್ರಗಳೊಂದಿಗೆ ಸಂಭ್ರಮಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕಲಾಶ್ರೀ ಡಾ. ಜಯಶ್ರೀ ಅರವಿಂದ್, ಶ್ರೀಸಂತವಾಣಿ ಸುಧಾಕರ್ ಹಾಗೂ ತಂಡ ಕನ್ನಡ ಗೀತೆಗಳನ್ನು ಹಾಡಿ ರಂಜಿಸಿದರು. ಡಾ. ಜಯಶ್ರೀ ಅರವಿಂದ್ ಅವರು ಎಪಿಎಸ್ ಸಂಸ್ಥೆಗಳೊಂದಿಗೆ ತಮ್ಮ ಆರು ದಶಕಗಳ ದೀರ್ಘಕಾಲದ ನಂಟನ್ನು ಸ್ಮರಿಸಿ, ಶಿಕ್ಷಣ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿ ಸಂಸ್ಥೆಯ ನಿರಂತರ ಕೊಡುಗೆಯನ್ನು ಶ್ಲಾಘಿಸಿದರು. ಎಪಿಎಸ್ ಸಂಸ್ಥೆಗಳ ಅಧ್ಯಕ್ಷರಾದ ಸಿಎ. ಡಾ. ವಿಷ್ಣು ಭರತ್ ಅಲಂಪಲ್ಲಿ ಮಾತನಾಡಿ.

ಕನ್ನಡ ನಾಡಿನಲ್ಲಿ ವಿಶೇಷವಾಗಿ ಬೆಂಗಳೂರಿನಲ್ಲಿ ಜನ್ಮವೆತ್ತಿರುವುದು ನಿಜವಾದ ಭಾಗ್ಯ ಎಂದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪ್ರೊ. ಎ. ಪ್ರಕಾಶ್, ಪ್ರಾಂಶುಪಾಲರಾದ ಪರಮೇಶ ಎಪಿಎಸ್ ಕಾಲೇಜ್ ಆಫ್ ಕಾಮರ್ಸ್, ಭಾಗ್ಯಲಕ್ಷ್ಮಿ ಮತ್ತಿತರರು ಉಪಸ್ಥಿತರಿದ್ದರು.

## ಕಡಲೆಕಾಯಿ ಪರಿಷೆಗೆ ಆರು ಲಕ್ಷ ಜನ

• **ಉದಯವಾಹಿನಿ, ಬೆಂಗಳೂರು**

ಕಾರ್ತಿಕ ಮಾಸದ ಕೊನೆಯ ಸೋಮವಾರ ಆರಂಭವಾಗಿರುವ ಐತಿಹಾಸಿಕ ಕಡಲೆಕಾಯಿ ಪರಿಷೆಗೆ ಬಸವನಗುಡಿಯ ಸುತ್ತಮುತ್ತಲಿನ ರಸ್ತೆಗಳು ಜನ ಜಾತ್ರೆಯಿಂದ ಮುಳುಗಿಹೋಗಿವೆ. 2 ದಿನಗಳಲ್ಲಿ ಆರು ಲಕ್ಷಕ್ಕೂ ಹೆಚ್ಚು ಜನ ಭೇಟಿ ನೀಡಿದ್ದಾರೆ. ಬಸವನಗುಡಿ ಮುಖ್ಯರಸ್ತೆ ಹಾಗೂ ಸುತ್ತಮುತ್ತಲಿನ ರಸ್ತೆಗಳಲ್ಲಿ ಕಡಲೆಕಾಯಿ ಪರಿಷೆಯ ಸಂಭ್ರಮ ಮೂರು ದಿನದಿಂದ ತುಂಬಿ ತುಳುಕುತ್ತಿದೆ. ಈ ವರ್ಷ ಅಧಿಕೃತವಾಗಿಯೇ 5 ದಿನ ಪರಿಷೆಯನ್ನು ಧಾರ್ಮಿಕ ಪರಿಷತ್ ಆಯೋಜಿಸಿದೆ. ನ.17ರ ಸೋಮವಾರ ಪರಿಷೆ ಆರಂಭವಾಗಿದ್ದರೂ, ಶನಿವಾರದಿಂದಲೇ ಜಾತ್ರೆ ಸಡಗರ ಆರಂಭವಾಗಿತ್ತು.

ದೊಡ್ಡ ಬಸವಣ್ಣನೊಂದಿಗೆ ದೊಡ್ಡ ಗಣಪತಿ, ಕಾರಂಜಿ ಆಂಜನೇಯನ ದರ್ಶನ ಪಡೆದ ಜನರು ಜಾತ್ರೆಯ ಸೊಬಗನ್ನು ಸವಿದರು. ಸೋಮವಾರದಿಂದ ಬುಧವಾರದವರೆಗೆ ಬೆಳಿಗ್ಗೆಯಿಂದಲೂ ಜನರು ಪರಿಷೆಗೆ ಬಂದು ಕಡಲೆಕಾಯಿ ಖರೀದಿ ನಡೆಸಿದರು. ಸಂಜೆಯ ವೇಳೆಯಲ್ಲಿ ಕಾಲಿಡಲೂ ಸಾಧ್ಯವಿಲ್ಲದಷ್ಟು ಜನರಾಶಿ ಬಸವನಗುಡಿ ಮುಖ್ಯ ರಸ್ತೆಯಲ್ಲಿ ಕಂಡುಬಂದಿತು. ಕಡಲಕಾಯಿ ಪರಿಷೆಯಲ್ಲಿ ಮೊದಲನೇ ಬಾರಿಗೆ ವಿಶೇಷ ದೀಪಾಲಂಕಾರ ಹಾಗೂ ಹೂವಿನ ಅಲಂಕಾರ ಮಾಡಲಾಗಿದ್ದು, ಭಕ್ತರನ್ನು ಆಕರ್ಷಿಸುತ್ತಿದೆ. ನಾರ್ತ್ ರೋಡ್, ಕೆ.ಆರ್. ರಸ್ತೆ, ಆಶ್ರಮ ವೃತ್ತ, ಡಿವಿಜಿ ರಸ್ತೆ, ಗಾಂಧಿ ಬಜಾರ್ ಮುಖ್ಯರಸ್ತೆ, ನೆಟ್ಟಕಲ್ಲಪ್ಪ ಸರ್ಕಲ್ ರಸ್ತೆ, ಎನ್.ಆರ್. ಕಾಲೋನಿ ರಸ್ತೆಯಲ್ಲಿನ ದೀಪಾಲಂಕಾರ ವಿವಿಧ ವಯೋಮಾನದವರನ್ನೂ ಸೆಳೆಯಿತು.

# ಬೆಂಗಳೂರು ಜಯನಗರ ಡೈರಿ ಸರ್ಕಲ್ ಎಟಿಎಂ ರಾಬರಿ ಕೇಸ್

### ದಕ್ಷಿಣ ವಿಭಾಗದ ಪೊಲೀಸರು ಪ್ರಕರಣ ದಾಖಲಾದಾಗಿನಿಂದ ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ

• **ಉದಯವಾಹಿನಿ, ಬೆಂಗಳೂರು**



ಉದಯವಾಹಿನಿ ಚಿತ್ರ

**ಬೆಂಗಳೂರು ಪೊಲೀಸ್ ಇಲಾಖೆಗೆ ದೊಡ್ಡ ಸವಾಲು**

**ಸಿಸಿಟಿವಿ ಪರಿಶೀಲನೆ**

ಜಯನಗರದ ಡೈರಿ ಸರ್ಕಲ್ ಬಳಿ ನಡೆದ ಎಟಿಎಂ ಕ್ಯಾಶ್ ರಾಬರಿ ಪ್ರಕರಣ ರಾಜ್ಯದ ಗಮನ ಸೆಳೆದಿದ್ದು, ಬೆಂಗಳೂರು ಪೊಲೀಸ್ ಇಲಾಖೆಗೆ ಈ ಪ್ರಕರಣ ದೊಡ್ಡ ಸವಾಲಾಗಿದೆ.

ದಕ್ಷಿಣ ವಿಭಾಗದ ಪೊಲೀಸರು ಪ್ರಕರಣ ದಾಖಲಾದಾಗಿನಿಂದ ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ. ನಗರ ಪೊಲೀಸ್ ಕಮಿಷನರ್ ಈ ಪ್ರಕರಣಕ್ಕೆ ವಿಶೇಷ ಪ್ರಾಮುಖ್ಯತೆ ನೀಡಿದ್ದು, ತನಿಖೆ ಚುರುಕುಗೊಂಡಿದೆ. ಈ ರಾಬರಿ ಗ್ಯಾಂಗ್ ಯಾರು, ವಾಹನಗಳು ಯಾವ ದಿಕ್ಕಿಗೆ ಹೋದವು, ಮತ್ತು ಒಳಗಿನ ಸಹಾಯ ಇತ್ತೇ ಎಂಬ ಅನುಮಾನಗಳಿಗೆ ಉತ್ತರ ಹುಡುಕಲು ಮೂರು-ನಾಲ್ಕು ವಿಶೇಷ ತಂಡಗಳನ್ನು ರಚಿಸಲಾಗಿದೆ.

**ಮುಂದುವರೆದ ತನಿಖೆ:** ಪೊಲೀಸರ ಪರಿಶೀಲನೆ ಮುಂದುವರೆದಿದೆ. ಪ್ರಾಥಮಿಕವಾಗಿ ಸಿಎಂಎಸ್ ಸಂಸ್ಥೆಯ ಸಿಬ್ಬಂದಿ ತನಿಖೆಯ ಪ್ರಮುಖ ಪಾತ್ರವಾಗಿದ್ದಾರೆ. ಘಟನೆಗೂ ಮುನ್ನ ಮತ್ತು ನಂತರ ಅವರ ಚಲನವಲನದಲ್ಲಿ ಯಾವುದೇ ಅನುಮಾನಾಸ್ಪದ ಅಂಶವಿದೆಯೇ ಎಂಬುದನ್ನು ಪೊಲೀಸರು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದಾರೆ. ಸಿಬ್ಬಂದಿ ಮನೆ ಬಿಟ್ಟು ಕರ್ತವ್ಯಕ್ಕೆ ಬಂದಾಗಿನಿಂದ ದರೋಡೆ ಸಂಭವಿಸುವವರೆಗೆ ಅವರ ಪ್ರತೀ ಚಲನವಲನಗಳನ್ನು ಪೊಲೀಸರು ಟ್ರೇಸ್ ಮಾಡುತ್ತಿದ್ದಾರೆ. ಜೊತೆಗೆ ಕಳೆದ ಕೆಲವು ದಿನಗಳಿಂದ ಅವರು ಯಾರೊಂದಿಗೆ ಸಂಪರ್ಕದಲ್ಲಿದ್ದರು, ಯಾರನ್ನು ಭೇಟಿ ಮಾಡಿದ್ದರು, ಯಾರ್ಯಾರನ್ನು ಭೇಟಿ ಮಾಡಿದ್ದರು ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕಲು ಮೊಬೈಲ್ ಫೋನ್‌ಗಳ ಕಾಲ್ ಡೀಟೇಲ್ಸ್, ವಾಟ್ಸಪ್ ಕರೆಗಳು, ಸ್ಥಳ ಮಾಹಿತಿ, ಸೇರಿ ಎಲ್ಲಾ ಡೇಟಾವನ್ನು ಪರಿಶೀಲನೆಗೆ ಒಳಪಡಿಸಲಾಗಿದೆ. ದರೋಡೆಕೋರರೊಂದಿಗೆ ಸಿಎಂಎಸ್ ಸಿಬ್ಬಂದಿ ಯಾರಾದರೂ ಸಂಪರ್ಕದಲ್ಲಿದ್ದಾರೇ ಎಂಬುದು ಈಗ ತನಿಖೆಯ ಪ್ರಮುಖ ಆಯಾಮವಾಗಿದೆ. ಹೊಸಕೋಟೆ, ಹೊಸೂರು, ತುಮಕೂರು ರಸ್ತೆಯ ಎಕ್ಸಿಟ್ ಪಾಯಿಂಟ್‌ಗಳು ಕನಕಪುರ ಮತ್ತು ಮೈಸೂರು ರಸ್ತೆ ಚೆಕ್‌ಪೋಸ್ಟ್‌ಗಳು ಸೇರಿ ಎಲ್ಲೆಡೆ ಬಿಗಿ ತಪಾಸಣೆ ಆರಂಭವಾಗಿದೆ. ಇನೋವಾ ಮಾದರಿಯ ವಾಹನಗಳ ಮೇಲೆ ಹೆಚ್ಚಿನ ಗಮನ ಹರಿಸಲಾಗಿದೆ. ಘಟನೆ ನಂತರ ಒಂದು ಗಂಟೆಯೊಳಗೆ ನಗರದಿಂದ ಹೊರಟ ವಾಹನಗಳ ಸಂಪೂರ್ಣ ಪಟ್ಟಿ ಸಂಗ್ರಹಿಸಿ ಅವುಗಳ ರಿಜಿಸ್ಟ್ರೇಷನ್, ಮಾದರಿ, ಬಣ್ಣಗಳು ಎಲ್ಲವೂ ಪರಿಶೀಲನೆಗೆ ಒಳಗಾಗಿವೆ. ಈ ಹಿನ್ನೆಲೆಯಲ್ಲಿ ಪೊಲೀಸರು ಎಲ್ಲೆಡೆ ಹದ್ದಿನ ಕಣ್ಣುನೆಟ್ಟಿದ್ದಾರೆ. ಈ ಪ್ರಕರಣದಲ್ಲಿ 7 ನಿಮಿಷದಲ್ಲಿ 7 ಕೋಟಿ ಲೂಟಿ ಮಾಡಿದ್ದು ಹೇಗೆ ಎಂಬುದು ಪೊಲೀಸರಿಗೆ ದೊಡ್ಡ ಪ್ರಶ್ನೆಯಾಗಿದೆ.

**ಟೋಲ್‌ಗೇಟ್‌ಗಳಲ್ಲಿನ ಸಿಸಿಟಿವಿ ಪರಿಶೀಲನೆ ಕೂಡ ನಡೆಯುತ್ತಿದೆ. ರಾಬರಿ ಗ್ಯಾಂಗ್ ಯಾವ ದಿಕ್ಕು ಹಿಡಿದು ನಗರದಿಂದ ಹೊರಟಿರಬಹುದು ಎಂಬ ಮಾಹಿತಿಯನ್ನು ಅರಿಸಿಕೊಳ್ಳಲು ಇದು ಮಹತ್ವದ ಸುಳಿವು ಆಗಲಿದೆ. ಈ ಪ್ರಕರಣದಲ್ಲಿ ಈಗಾಗಲೇ ಕೆಲವು ಸುಳಿವುಗಳು ಸಿಕ್ಕಿವೆ ಎಂದು ಪೊಲೀಸ್ ವಲಯ ತಿಳಿಸಿದ್ದರೂ, ಅವುಗಳನ್ನು ಬಹಿರಂಗಪಡಿಸಲು ನಿರಾಕರಿಸಿದೆ. ರಾಬರಿ ಗ್ಯಾಂಗ್ ಪತ್ತೆಗಾಗಿ ಬೆಂಗಳೂರಿನ ಪೊಲೀಸರು ಸತತ ಪ್ರಯತ್ನ ಮಾಡುತ್ತಿದ್ದು, ಶೀಘ್ರದಲ್ಲೇ ಮಹತ್ವದ ಮುಂದಿನ ಬೆಳವಣಿಗೆ ಇರುವ ಸಾಧ್ಯತೆಗಳಿವೆ.**

### ಎಕ್ಸಿಟ್ ಪಾಯಿಂಟ್‌ಗಳಲ್ಲಿ ನಿಗಾ

**ಟನೆ ನಡೆದ ಒಂದು ಗಂಟೆಯ ನಂತರ ನಗರದ ಹೊರವಲಯ ಮತ್ತು ಎಕ್ಸಿಟ್ ಪಾಯಿಂಟ್‌ಗಳು ಮೂಲಕ ಸಂಚರಿಸಿದ ಎಲ್ಲಾ ವಾಹನಗಳ ಮೇಲೂ ಪೊಲೀಸರು ಕಣ್ಣಿಟ್ಟಿದ್ದಾರೆ. ವಿಶೇಷವಾಗಿ ಇನೋವಾ ಕಾರುಗಳ ಮೇಲೆ ಹೆಚ್ಚು ಸಂಶಯ ವ್ಯಕ್ತವಾಗಿದ್ದು, ನಗರದಿಂದ ಹೊರಟ ವಾಹನಗಳ ಪಟ್ಟಿಯನ್ನು ಸಂಗ್ರಹಿಸಿ ಪರಿಶೀಲನೆ ನಡೆಸಲಾಗುತ್ತಿದೆ. ಹೊಸಕೋಟೆ, ಹೊಸೂರು ಮಾರ್ಗಗಳಲ್ಲಿನ ಚೆಕ್‌ಪೋಸ್ಟ್‌ಗಳಲ್ಲಿ ಸಂಚಾರಿ ಪೊಲೀಸರು ಮತ್ತು ಸ್ಥಳೀಯ ಪೊಲೀಸರು ಜಂಟಿಯಾಗಿ ವಾಹನ ತಪಾಸಣೆ ಮುಂದುವರೆಸಿದ್ದಾರೆ.**

## ವಾರ್ಡ್‌ಗಳ ಮರು ವಿಂಗಡಣೆ ಅಂತಿಮ ಅಧಿಸೂಚನೆ ಪ್ರಕಟ

• **ಉದಯವಾಹಿನಿ, ಬೆಂಗಳೂರು**


ಉದಯವಾಹಿನಿ ಚಿತ್ರ

**4 ಸಾವಿರಕ್ಕೂ ಅಧಿಕ ಆಕ್ಷೇಪಣೆ ಸಲ್ಲಿಕೆ**

ಗ್ರೇಟರ್ ಬೆಂಗಳೂರು ಪ್ರಾಧಿಕಾರದಡಿ ನೂತವಾಗಿ ರಚಿಸಲಾದ 5 ನಗರ ಪಾಲಿಕೆಗಳ ವಾರ್ಡ್‌ವಿಂಗಡಣೆಯ ಅಂತಿಮ ಅಧಿಸೂಚನೆಯನ್ನು ರಾಜ್ಯ ಸರ್ಕಾರ ಪ್ರಕಟಿಸಿದ್ದು, ಈ ಸಂಬಂಧ ನಗರಾಭಿವೃದ್ಧಿ ಇಲಾಖೆ ಅಧಿಸೂಚನೆ ಹೊರಡಿಸಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಅಸ್ತಿತ್ವಕ್ಕೆ ಬಂದ ನಂತರ ಸೆ.2ರಂದು ಜಿಬಿಎ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ವಾರ್ಡ್ ವಿಂಗಡಣಾ ಆಯೋಗ ರಚನೆ ಮಾಡಲಾಗಿತ್ತು. ಆಯೋಗದ ವರದಿ ಆಧಾರಿಸಿ ನಗರಾಭಿವೃದ್ಧಿ ಇಲಾಖೆಯು ಸೆ.30 ರಂದು ಐದು ನಗರ ಪಾಲಿಕೆಯ ವಾರ್ಡ್ ವಿಂಗಡಣೆಯ ಕರಡು ಅಧಿಸೂಚನೆ ಹೊರಡಿಸಿ ಆಕ್ಷೇಪಣೆ ಸಲ್ಲಿಕೆಗೆ 15 ದಿನ ಕಾಲಾವಕಾಶ ನೀಡಲಾಗಿತ್ತು. ಈ ಸಂಬಂಧ 4 ಸಾವಿರಕ್ಕೂ ಅಧಿಕ ಆಕ್ಷೇಪಣೆ ಸಲ್ಲಿಕೆಯಾಗಿದ್ದವು. ಆ ಆಕ್ಷೇಪಣೆಗಳನ್ನು ಪರಿಶೀಲನೆ ಮಾಡಿ ಇದೀಗ ಅಂತಿಮ ಅಧಿಸೂಚನೆ ಮೂಲಕ ವಾರ್ಡ್ ಸಂಖ್ಯೆಯನ್ನು ಅಂತಿಮಗೊಳಿಸಿದೆ.

ಬೆಂಗಳೂರು ಪಶ್ಚಿಮ ನಗರ ಪಾಲಿಕೆಯಲ್ಲಿ ಕರಡು ಅಧಿಸೂಚನೆಯಲ್ಲಿ 111 ವಾರ್ಡ್‌ಗಳಿದ್ದವು. ಅಂತಿಮ ಅಧಿಸೂಚನೆಯಲ್ಲಿ ಈ ಸಂಖ್ಯೆ 112ಕ್ಕೇರಿದೆ. ಇನ್ನುಳಿದ ನಾಲ್ಕು ನಗರ ಪಾಲಿಕೆಗಳ ವಾರ್ಡ್ ಸಂಖ್ಯೆಯಲ್ಲಿ ಬದಲಾವಣೆಯಾಗಿಲ್ಲ. 5 ನಗರ ಪಾಲಿಕೆಗಳಲ್ಲಿ ಒಟ್ಟಾರೆ 369 ವಾರ್ಡ್‌ಗಳಿವೆ. ಈ ಮೂಲಕ ಸೆಪ್ಟೆಂಬರ್ 10, 2020 ರಿಂದ ಬಾಕಿ ಉಳಿದಿದ್ದ ಪಾಲಿಕೆ ಚುನಾವಣೆಗಳ ನಡೆಸಲು ಸರ್ಕಾರವು ಒಂದು ಪ್ರಮುಖ ಅಡಚಣೆಯನ್ನು ತೆರವುಗೊಳಿಸಿದೆ.

ಸೆಪ್ಟೆಂಬರ್ 29 ರಂದು ಹೊರಡಿಸಲಾದ ಕರಡು ಅಧಿಸೂಚನೆಯು ಬೆಂಗಳೂರು ಕೇಂದ್ರದಲ್ಲಿ 63, ಬೆಂಗಳೂರು ಉತ್ತರದಲ್ಲಿ 72, ಬೆಂಗಳೂರು ಪೂರ್ವದಲ್ಲಿ 50, ಬೆಂಗಳೂರು ಪಶ್ಚಿಮದಲ್ಲಿ 111 ಬೆಂಗಳೂರು ದಕ್ಷಿಣದಲ್ಲಿ 72 ವಾರ್ಡ್‌ಗಳನ್ನು ಪ್ರಸ್ತಾಪಿಸಿತ್ತು. ಈ ಸಂಬಂಧ ಆಕ್ಷೇಪಣೆಗಳು, ಸಲಹೆಗಳನ್ನು ಆಹ್ವಾನಿಸಲಾಗಿತ್ತು. ಬೆಂಗಳೂರಿನ ಸ್ಥಳೀಯ ಸಂಸ್ಥೆಯ ಚುನಾವಣೆ ನಡೆದು ಬರೋಬ್ಬರಿ 10 ವರ್ಷ ಕಳೆದಿದ್ದು, 2015ರಲ್ಲಿ ಬಿಬಿಎಂಪಿಯ 198 ವಾರ್ಡ್‌ಗೆ ಚುನಾವಣೆ ನಡೆದಿತ್ತು. ಆಯ್ಕೆಯಾದ ಜನಪ್ರತಿನಿಧಿಗಳು ಐದು ವರ್ಷ ಆಡಳಿತ ನಡೆಸಿ 2020ರ ಸೆಪ್ಟೆಂಬರ್‌ಗೆ ಅಧಿಕಾರ ಪೂರ್ಣಗೊಳಿಸಿದ್ದರು.

ಆ ಬಳಿಕ 2 ಬಾರಿ ವಾರ್ಡ್ ವಿಂಗಡಣೆ ನಡೆಸಲಾಗಿತ್ತು. ಆದರೆ, ಚುನಾವಣೆ ನಡೆದಿರಲಿಲ್ಲ. ಇದೀಗ ಬಿಬಿಎಂಪಿ ವಿಸರ್ಜನೆ ಮಾಡಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆ ಮಾಡಿ, ಅದರಡಿ ಐದು ನಗರ ಪಾಲಿಕೆ ಸೃಷ್ಟಿ ಮಾಡಲಾಗಿದೆ. ಐದೂ ನಗರ ಪಾಲಿಕೆಗೆ ವಾರ್ಡ್ ವಿಂಗಡಣೆ ಅಂತಿಮಗೊಳಿಸಲಾಗಿದ್ದು, ವಾರ್ಡ್‌ಗೆ ಮೀಸಲಾತಿ ನಿಗದಿಪಡಿಸಿ ಚುನಾವಣೆ ಅಧಿಸೂಚನೆ ಹೊರಡಿಸುವುದಷ್ಟೇ ಬಾಕಿ ಇದೆ.

**ಬೆಂಗಳೂರಿನ ಜನಸಂಖ್ಯೆಯು 2011 ರಲ್ಲಿ 84 ಲಕ್ಷದಿಂದ 2025 ರಲ್ಲಿ ಅಂದಾಜು 144 ಲಕ್ಷಕ್ಕೆ ವೇಗವಾಗಿ ವಿಸ್ತರಿಸುತ್ತಿರುವುದರಿಂದ, ಪರಿಣಾಮಕಾರಿ ಆಡಳಿತಕ್ಕಾಗಿ ಉತ್ತಮ ನಿರ್ವಹಣೆ ಅತ್ಯಗತ್ಯವಾಗಿದೆ. ಅಂತಿಮ ಅಧಿಸೂಚನೆಯ ನಂತರ, ಸರ್ಕಾರವು ನವೆಂಬರ್ 30 ರ ಹೊತ್ತಿಗೆ ವಾರ್ಡ್‌ವಾರು ಮೀಸಲಾತಿ ಪಟ್ಟಿಯನ್ನೂ ಸಹ ಪೂರ್ಣಗೊಳಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.**

## ಬೀದಿ ನಾಯಿ ದಾಳಿಯಿಂದ ಮೃತಪಟ್ಟವರಿಗೆ 5 ಲಕ್ಷ ರೂ ಪರಿಹಾರ: ರಾಜ್ಯ ಸರ್ಕಾರ ಘೋಷಣೆ

• **ಉದಯವಾಹಿನಿ, ಬೆಂಗಳೂರು**



ಬೀದಿ ನಾಯಿಗಳ ದಾಳಿಗೆ ತುತ್ತಾಗಿ ಗಾಯಗೊಂಡವರಿಗೆ 5 ಸಾವಿರ ರೂ. ಹಾಗೂ ಮೃತಪಟ್ಟವರಿಗೆ 5 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ರಾಜ್ಯ ಸರಕಾರವು ಆದೇಶ ಹೊರಡಿಸಿದೆ. ಬೀದಿ ನಾಯಿಗಳ ದಾಳಿಗೆ ತುತ್ತಾಗಿ ಗಾಯಗೊಂಡವರಿಗೆ ನೀಡುವ ಪರಿಹಾರ ಹಣದಲ್ಲಿ ಚಿಕಿತ್ಸೆ ವೆಚ್ಚವಾಗಿ 1,500 ರೂ. ಗಾಯಗೊಂಡ ಸಂತ್ರಸ್ತರಿಗೆ 3,500 ರೂ. ಪಾವತಿಯಾಗಲಿದೆ.

ಬೀದಿ ನಾಯಿಗಳ ದಾಳಿಯಿಂದ ಮೃತಪಟ್ಟವರಿಗೆ ಅಥವಾ ರೇಬೀಸ್‌ನಿಂದ ಮೃತಪಟ್ಟವರಿಗೆ 5 ಲಕ್ಷ ರೂ. ಪರಿಹಾರ ನೀಡಲಾಗುತ್ತದೆ. ಇನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಕಡಿತಕ್ಕೆ ಒಳಗಾಗುವ ನಾಗರಿಕರಿಗೆ ಸಂಬಂಧಿಸಿದಂತೆ, ಪರಿಶೀಲನಾ, ಪರಿಹಾರಧನ ವಿತರಿಸುವ ಸಮಿತಿಯನ್ನು ರಚಿಸಲಾಗುತ್ತದೆ ಎಂದು ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಹಿರಿಯ ಕಾಂಗ್ರೆಸ್ ನಾಯಕ ಪಿ. ಚಿದಂಬರಂ ಅವರು ತಮಿಳುನಾಡಿನಲ್ಲಿ ನಾಯಿ ಕಡಿತ ಮತ್ತು ರೇಬೀಸ್ ಸಂಬಂಧಿತ ಸಾವುಗಳ ಸಂಖ್ಯೆಯಲ್ಲಿನ ಆತಂಕಕಾರಿ ಏರಿಕೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಈ ವರ್ಷವಷ್ಟೇ ರಾಜ್ಯದಲ್ಲಿ ಸುಮಾರು 5.25 ಲಕ್ಷ ನಾಯಿ ಕಡಿತ ಪ್ರಕರಣಗಳು ಮತ್ತು 28 ರೇಬೀಸ್‌ನಿಂದ ಸಾವುಗಳು ದಾಖಲಾಗಿವೆ ಎಂದು ದತ್ತಾಂಶ ಉಲ್ಲೇಖಿಸಿದ್ದಾರೆ. ನಾಯಿ ಪ್ರಿಯರ ಕಾಳಜಿಗಳು ಮಾನ್ಯವಾಗಿವೆ ಆದರೆ ಅವರು ಆತಂಕಕಾರಿ ಡೇಟಾವನ್ನು ಸಹ ಪರಿಗಣಿಸಬೇಕು.

ಬೀದಿ ನಾಯಿಗಳನ್ನು ಪ್ರತ್ಯೇಕಿಸುವುದು, ಅವುಗಳನ್ನು ಸಂತಾನಹರಣ ಮಾಡುವುದು ಮತ್ತು ಲಸಿಕೆ ಹಾಕುವುದನ್ನು ಬೆಂಬಲಿಸಬೇಕು ಎಂದು ತಿಳಿಸಿದ್ದಾರೆ.

ಕೆಲವು ಸಾರ್ವಜನಿಕ ಸ್ಥಳಗಳನ್ನು ಹೊರತುಪಡಿಸಿ, ಲಸಿಕೆ ಹಾಕಿದ ನಾಯಿಗಳನ್ನು ಮತ್ತೆ ಅವುಗಳ ವಾಸಸ್ಥಾನಗಳಿಗೆ ಬಿಡಲು ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ ಎಂದು ಅವರು ಹೇಳಿದರು. ಶ್ವಾನ ಪ್ರಿಯರು ನ್ಯಾಯಾಲಯದ ನಿರ್ದೇಶನಗಳನ್ನು ಅನುಷ್ಠಾನಗೊಳಿಸುವಲ್ಲಿ ಬೆಂಬಲ ಮತ್ತು ಸಹಾಯ ಮಾಡುವಂತೆ ಒತ್ತಾಯಿಸಿದ್ದಾರೆ.

## ಅನುಮತಿಯಿಲ್ಲದೆ ರಸ್ತೆ ಅಗೆಯುವವರಿಗೆ ದಂಡ ವಿಧಿಸಿ: ಅಧಿಕಾರಿಗಳಿಗೆ ಜಿಬಿಎ ಖಡಕ್ ಸೂಚನೆ

• **ಉದಯವಾಹಿನಿ, ಬೆಂಗಳೂರು**


ಉದಯವಾಹಿನಿ ಚಿತ್ರ

ಅನುಮತಿಯಿಲ್ಲದೆ ನಗರದಲ್ಲಿ ರಸ್ತೆ ಅಗೆಯುವವರಿಗೆ ದಂಡ ವಿಧಿಸುವಂತೆ ಅಧಿಕಾರಿಗಳಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರು ಖಡಕ್ ಸೂಚನೆ ನೀಡಿದ್ದಾರೆ.

ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ರಸ್ತೆ ಕತ್ತರಿಸುವಿಕೆಗೆ ಮಾರ್ಕ್ಸ್ ತಂತ್ರಾಂಶದ ಮೂಲಕ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ, ನಿಯಮಾನುಸಾರ ಏಕ ಗವಾಕ್ಷಿ ಪದ್ಧತಿಯಲ್ಲಿ ಅನುಮತಿ ನೀಡಬೇಕು ಎಂದು ಸೂಚನೆ ನೀಡಿದರು.

ಇದೇ ವೇಳೆ ಆಸ್ತಿ ತೆರಿಗೆಯನ್ನು ಸಮಯಕ್ಕೆ ಸರಿಯಾಗಿ ಸಂಗ್ರಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಾಕಿ ಇರುವ ತೆರಿಗೆ ಬಾಕಿಗಳನ್ನು ಸಂಗ್ರಹಿಸಲು ಕ್ರಮ ಕೈಗೊಳ್ಳಿ. ತೆರಿಗೆ ಪಾವತಿಸದೆ ವಂಚಿಸುವವರಿಗೆ ನೋಟಿಸ್ ನೀಡಿ, ನೋಟಿಸ್'ಗೂ ಪ್ರತಿಕ್ರಿಯಿಸದಿದ್ದರೆ ಅವರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಹೇಳಿದರು. ಖಾತಾ ಪರಿವರ್ತನೆ ಕುರಿತು ಮಾತನಾಡಿ, ಬಿ-ಖಾತಾದಿಂದ ಎ-ಖಾತಾ ಪರಿವರ್ತನೆಗೆ ಬಂದಿರುವ ಅರ್ಜಿಗಳನ್ನು ಪಾಲಿಕೆವಾರು ಪರಿಶೀಲಿಸಿ, ನಿಯಮಾನುಸಾರ ಇತ್ಯರ್ಥಪಡಿಸಬೇಕು.

ಜೊತೆಗೆ ಇ-ಖಾತಾ ಪಡೆಯಲು ಬಂದಿರುವ ಅರ್ಜಿಗಳನ್ನು ಕಾಲಮಿತಿಯೊಳಗಾಗಿ ವಿಲೇವಾರಿ ಮಾಡಲು ಹೇಳಿದರು. ವೈಟ್-ಟಾಪಿಂಗ್ ಯೋಜನೆಯ ಕುರಿತು ಮಾತನಾಡಿ, 17 ಪ್ಯಾಕೇಜ್‌ಗಳಲ್ಲಿ 140 ರಸ್ತೆಗಳ (220.68 ಕಿ.ಮೀ) ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಪೈಕಿ 39 (79.08 ಕಿ.ಮೀ) ಕೆಲಸ ಪೂರ್ಣಗೊಂಡಿದೆ. 101 ರಸ್ತೆಗಳಲ್ಲಿ (141.59 ಕಿ.ಮೀ) ವೈಟ್ ಟಾಪಿಂಗ್ ಕೆಲಸ ಪ್ರಗತಿಯಲ್ಲಿದೆ ಎಂದು ಹೇಳಿದರು.

ಇದೇ ವೇಳೆ ವೈಟ್-ಟಾಪಿಂಗ್ ಕೆಲಸವನ್ನು ನಿರ್ವಹಿಸುವಾಗ ನಗರ ನಿಗಮಗಳು ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯೂಎಸ್‌ಎಸ್ಬಿ) ನಡುವೆ ಉತ್ತಮ ಸಮನ್ವಯ ಸಾಧಿಸುವಂತೆಯೂ ಕರೆ ನೀಡಿದರು.

**ವಾಹನ ಪಾರ್ಕಿಂಗ್‌ಗೆ ಸಂಬಂಧಿಸಿದ ವಿಷಯಗಳ ಕುರಿತು ಮಾತನಾಡಿ, ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಅನುಪಯುಕ್ತ ವಾಹನಗಳನ್ನು ಟೋಯಿಂಗ್ ಮಾಡಲು ತಕ್ಷಣ ಟೆಂಡರ್ ಕರೆದು ಯಂತ್ರಗಳನ್ನು ಖರೀದಿಸಬೇಕು. ಸಂಚಾರ ಪೊಲೀಸರೊಂದಿಗೆ ಸಮನ್ವಯ ಸಾಧಿಸಿ, ಟೋಯಿಂಗ್ ಮಾಡುವ ವಾಹನಗಳಿಗಾಗಿ ಪಾಲಿಕೆವಾರು ನಿರ್ದಿಷ್ಟ ಸ್ಥಳ ಗುರುತಿಸಬೇಕು ಎಂದು ತಿಳಿಸಿದರು.**

## ಮುಡಾ ಅಧಿಕಾರಿ ದಿನೇಶ್ ಕುಮಾರ್ ವಿರುದ್ಧ ಪ್ರಾಸಿಕ್ಯೂಷನ್ ದೂರು ದಾಖಲು

• **ಉದಯವಾಹಿನಿ, ಬೆಂಗಳೂರು**



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಡಾ ಮಾಜಿ ಆಯುಕ್ತರಾಗಿದ್ದ ಜಿ.ಟಿ.ದಿನೇಶ್ ಕುಮಾರ್ ವಿರುದ್ಧ ಜಾರಿ ನಿರ್ದೇಶನಾಲಯವು ಪ್ರಾಸಿಕ್ಯೂಷನ್ ದೂರು ದಾಖಲಿಸಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ದೂರು ದಾಖಲಿಸಿರುವ ಜಾರಿ ನಿರ್ದೇಶನಾಲಯವು (ಇ.ಡಿ), ದಿನೇಶ್ ಕುಮಾರ್ ಅವರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು, ಅಕ್ರಮವಾಗಿ ನೂರಾರು ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆ' ಎಂದು ವಿವರಿಸಿದೆ. ಮುಡಾ ನಿವೇಶನಗಳ ಹಂಚಿಕೆಯಲ್ಲಿ ಕಾನೂನು, ಸರ್ಕಾರಿ ಆದೇಶಗಳು, ಮಾರ್ಗಸೂಚಿಗಳ ಉಲ್ಲಂಘನೆಯಾಗಿರುವುದು ತನಿಖೆಯಿಂದ ತಿಳಿದುಬಂದಿದೆ ಎಂದು ತಿಳಿಸಿದೆ. ಅಕ್ರಮ ಹಂಚಿಕೆಗಳಿಗೆ ಬದಲಾಗಿ ದಿನೇಶ್ ಅವರು, ನಗದು, ಬ್ಯಾಂಕ್ ವರ್ಗಾವಣೆ ಮತ್ತು ಚರ ಮತ್ತು ಸ್ಥಿರ ಆಸ್ತಿಗಳ ರೂಪದಲ್ಲಿ ಲಂಚ ಸ್ವೀಕರಿಸಿರುವ, ಆ ಲಂಚವನ್ನು ಸಂಬಂಧಿಕರು, ಸಹಚರರ ಬ್ಯಾಂಕ್ ಖಾತೆ ಮೂಲಕ ವರ್ಗಾಯಿಸಿರುವ ಕುರಿತು ಪುರಾವೆಗಳೂ ಇವೆ ಎಂದು ತಿಳಿಸಿದೆ. ಮುಡಾ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನೇಶ್ ಕುಮಾರ್ ಅವರನ್ನು ಸೆಪ್ಟೆಂಬರ್ 16, 2025 ರಂದು ಬಂಧಿಸಲಾಯಿತು. ದಿನೇಶ್ ಅವರು ಇನ್ನೂ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಪ್ರಕರಣ ಸಂಬಂಧ ಇಡಿ ಅಧಿಕಾರಿಗಳು ಇದೂವರೆಗೆ ಅಕ್ರಮವಾಗಿ ಹಂಚಿಕೆಯಾದ 283 ಮುಡಾ ನಿವೇಶನಗಳು ಮತ್ತು 450 ಕೋಟಿ ರೂ. ಮೌಲ್ಯದ ಮೂರು ಸ್ಥಿರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ.

## ಹಳದಿ ಮಾರ್ಗಕ್ಕೆ ಶೀಘ್ರದಲ್ಲೇ 6ನೇ ರೈಲಿನ ಸೆಟ್

• **ಉದಯವಾಹಿನಿ, ಬೆಂಗಳೂರು**



ನಮ್ಮ ಮೆಟ್ರೋ ಹಳದಿ ಮಾರ್ಗಕ್ಕೆ ಶೀಘ್ರದಲ್ಲೇ 6ನೇ ರೈಲಿನ ಸೆಟ್ ಬರುವ ನಿರೀಕ್ಷೆ ಇದ್ದು, ಮುಂದಿನ ತಿಂಗಳಿನಿಂದ ಕಾಯುವ ಅವಧಿ 12 – 13 ನಿಮಿಷಕ್ಕೆ ತಗ್ಗಲಿದೆ. ಪಶ್ಚಿಮ ಬಂಗಾಳದ ಟಿಟಾಗರ್ ರೈಲ್ ಸಿಸ್ಟಮ್ಸ್ ಲಿಮಿಟೆಡ್‌ನಿಂದ ಆರು ಬೋಗಿಗಳು ರವಾನೆಯಾಗಿದ್ದು,

ಡಿಸೆಂಬರ್ ಮೊದಲ ವಾರದೊಳಗೆ ಹೆಬ್ಬಗೋಡಿ ಡಿಪೊಗೆ ತಲುಪಲಿದೆ. ಡಿಸೆಂಬರ್ ಅಂತ್ಯದ ವೇಳೆಗೆ ಈ ರೈಲು ಸೇವೆ ಲಭ್ಯವಾಗಲಿದೆ. 19.15 ಕಿ.ಮೀ ಉದ್ದದ ಆರ್.ವಿ.ರಸ್ತೆ-ಬೊಮ್ಮಸಂದ್ರ ಮೆಟ್ರೋ ಮಾರ್ಗದಲ್ಲಿ ಬೆಳಗ್ಗೆ 8 ರಿಂದ ಮಧ್ಯಾಹ್ನದವರೆಗೆ ಮತ್ತು ಸಂಜೆ 4 ರಿಂದ ರಾತ್ರಿ 9 ರವರೆಗೆ ಪ್ರತಿ 15 ನಿಮಿಷಕ್ಕೊಂದು ರೈಲು ಸಂಚರಿಸುತ್ತಿವೆ.

**ಹೊಸ 8 ರೈಲುಗಳ ಸೇರ್ಪಡೆ ಬಳಿಕ 10 ನಿಮಿಷಕ್ಕೊಂದು ರೈಲು:** ಟಿಟಾಗರ್ ಕಂಪನಿಯು ಡಿಸೆಂಬರ್ ಅಂತ್ಯಕ್ಕೆ ಇನ್ನೂ ಎರಡು ರೈಲುಗಳನ್ನು ಪೂರೈಸುವ ಸಾಧ್ಯತೆ ಇದೆ. ಎಂಟು ರೈಲುಗಳ ಸೇರ್ಪಡೆ ಬಳಿಕ ಜನದಟ್ಟಣೆ ಸಮಯದಲ್ಲಿ 10 ನಿಮಿಷಕ್ಕೊಂದು ರೈಲು ಲಭ್ಯವಾಗಲಿದೆ ಎನ್ನುತ್ತಾರೆ ಬಿಎಂಆರ್‌ಸಿಎಲ್ ಅಧಿಕಾರಿಗಳು. ಟಿಟಾಗರ್ ಸಂಸ್ಥೆಯು ಚೀನಾದ ಸಿಆರ್ ಆರ್‌ಸಿ ನಾನ್‌ಜಿಂಗ್ ಪುಜೆನ್ ಕಂಪನಿ ಲಿಮಿಟೆಡ್ ಒಪ್ಪಂದದಡಿಯಲ್ಲಿ ರೈಲುಗಳನ್ನು ತಯಾರಿಸುತ್ತಿದೆ. 1,578 ಕೋಟಿ ರೂ. ಒಪ್ಪಂದದೊಂದಿಗೆ ಆರು ಬೋಗಿಗಳ 36 ರೈಲುಗಳನ್ನು ಸಿದ್ಧಪಡಿಸುತ್ತಿದೆ.

# ಬೆಂಗಳೂರಲ್ಲಿ ಪ್ರಯಾಣಿಕರ ಸುರಕ್ಷತೆಗೆ ಪೊಲೀಸ್ ಇಲಾಖೆ ಕ್ರಮ

### ಇನ್ಮುಂದೆ ಕ್ಯಾಬ್‌ಗಳಲ್ಲಿ 112 ಸಹಾಯವಾಣಿ ಸ್ಟಿಕ್ಕರ್ ಅಂಟಿಸುವುದು ಕಡ್ಡಾಯ

• **ಉದಯವಾಹಿನಿ, ಬೆಂಗಳೂರು**


ಉದಯವಾಹಿನಿ ಚಿತ್ರ

**ಹೊಸ ನಿಯಮ ಜಾರಿ**

ನಗರದಲ್ಲಿ ಹಲವರು ಕ್ಯಾಬ್ ಮತ್ತು ಆಟೋ, ಬೈಕ್ ನಂತಹ ಸಾಧನಗಳಿಗೆ ಹೆಚ್ಚಾಗಿ ನೆಚ್ಚಿಕೊಂಡಿದ್ದಾರೆ. ಜೊತೆಗೆ ಅವುಗಳ ಚಾಲನೆ ಮಾಡುವವರ ಮೇಲೆ ಪ್ರಯಾಣಿಕರಿಂದ ದೂರು ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ. ಹಲ್ಲೆ, ಮಾರಾಮಾರಿ, ಅನುಚಿತ ವರ್ತನೆ ಬಗ್ಗೆ ಪ್ರಕರಣ ದಾಖಲಾಗುತ್ತಲೇ ಇರುವ ಹಿನ್ನೆಲೆ, ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡಲು ಬೆಂಗಳೂರು ಪೊಲೀಸ್ ಇಲಾಖೆ ಮಹತ್ವದ ಕ್ರಮವೊಂದನ್ನು ಕೈಗೊಂಡಿದೆ.

ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಸಂಚರಿಸುವ ಎಲ್ಲಾ ಕ್ಯಾಬ್‌ಗಳು ಕಡ್ಡಾಯವಾಗಿ 112 ತುರ್ತು ಸಹಾಯವಾಣಿ ಹಾಗೂ ಕರ್ನಾಟಕ ರಾಜ್ಯ ಪೊಲೀಸ್ ಮೊಬೈಲ್ ಅಪ್ಲಿಕೇಶನ್‌ನ ಮಾಹಿತಿ ಇರುವ ಸ್ಟಿಕ್ಕರ್‌ಗಳನ್ನು ಅಳವಡಿಸಬೇಕೆಂದು ನಗರ ಪೊಲೀಸ್ ಆಯುಕ್ತರಾದ ಸೀಮಂತ್ ಕುಮಾರ್ ಸಿಂಗ್ ಅವರು ಈ ಹೊಸ ನಿಯಮವನ್ನು ಜಾರಿಗೊಳಿಸಿದ್ದಾರೆ. ಇನ್ಮುಂದೆ ಖಾಸಗಿ ಕ್ಯಾಬ್‌ಗಳಲ್ಲಿ ಪ್ರಯಾಣಿಕರಿಗೆ ಸ್ಪಷ್ಟವಾಗಿ ಕಾಣುವಂತೆ ತುರ್ತು ಸಹಾಯದ ವಿವರಗಳನ್ನು ಪ್ರದರ್ಶಿಸಲು ಸೂಚನೆ ನೀಡಲಾಗಿದೆ. ಇದರಿಂದ ಅಪರಾಧಗಳನ್ನು ತಡೆಯಲು ಮತ್ತು ಸಂಚಾರ ನಿರ್ವಹಣೆಗೆ ಸಹಾಯವಾಗುತ್ತದೆ ಎಂದು ಹೇಳಲಾಗಿದೆ.

112 ತುರ್ತು ಸಹಾಯವಾಣಿ ಸ್ಟಿಕ್ಕರ್‌ಗಳನ್ನು ಕನ್ನಡ, ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಮುದ್ರಿಸಿ, ವಾಹನದ 2 ಬದಿಗಳಲ್ಲಿ ಅಳವಡಿಸುವಂತೆ ಕ್ಯಾಬ್ ಚಾಲಕರಿಗೆ ಸೂಚಿಸಲಾಗಿದೆ.

ಪೊಲೀಸರು ನೀಡಿರುವ ಈ ಸ್ಟಿಕ್ಕರ್ ವಿನ್ಯಾಸದಲ್ಲಿ 112 ಸಹಾಯವಾಣಿ ಸಂಖ್ಯೆಯ ಜೊತೆಗೆ, ಮೊಬೈಲ್ ಅಪ್ಲಿಕೇಶನ್‌ಗೆ ನೇರವಾಗಿ ಲಿಂಕ್ ಆಗುವ QR ಕೋಡ್ ಅನ್ನು ಸಹ ನೀಡಲಾಗಿದೆ.

### 112 ತುರ್ತು ಸಹಾಯವಾಣಿ ಹೇಗೆ ಕೆಲಸ ಮಾಡುತ್ತೆ?

**112 ತುರ್ತು ಸಹಾಯವಾಣಿಯು ಪೊಲೀಸ್ ಕಮಿಷನರ್ ಕಚೇರಿಯಿಂದ ಕಾರ್ಯನಿರ್ವಹಿಸುತ್ತದೆ. 112ಗೆಕರೆ ಮಾಡಿದ 15 ನಿಮಿಷಗಳ ಒಳಗೆ ಪೊಲೀಸರು ಕರೆ ಮಾಡಿದಾವರ ಬಳಿ ಬಂದು ಅವರಿಗೆ ಸಹಾಯ ಮಾಡುತ್ತಾರೆ ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ನಿರ್ಭಯಾ ನಿಧಿ ಯೋಜನೆಯಡಿ ಈ ಏಕೀಕೃತ ಸಹಾಯವಾಣಿ ಸಂಖ್ಯೆಯನ್ನು ಜಾರಿಗೆ ತರಲಾಗಿದೆ. ರಾತ್ರಿ ವೇಳೆ ಒಂಟಿಯಾಗಿ ಪ್ರಯಾಣಿಸುವ ಮಹಿಳೆಯರಿಗೆ ಯಾರಾದರೂ ತೊಂದರೆ ನೀಡಿದರೆ, ಈ ಸಂಖ್ಯೆಗೆ ಕರೆ ಮಾಡಿ ತಕ್ಷಣ ಸಹಾಯ ಪಡೆಯಬಹುದಾಗಿದೆ.**

ಸಂಚಾರ ಅಧಿಕಾರಿಗಳ ಮಾಹಿತಿ ಪ್ರಕಾರ, ಈಗಾಗಲೇ 12,000ಕ್ಕೂ ಹೆಚ್ಚು ಕ್ಯಾಬ್‌ಗಳನ್ನು ಈ ಹೊಸ ನಿಯಮದ ಪಾಲನೆಗಾಗಿ ಶಾರ್ಟ್‌ಲಿಸ್ಟ್ ಮಾಡಲಾಗಿದೆ. ಉಳಿದ ಎಲ್ಲಾ ವಾಹನಗಳು ನಿಗದಿತ ಗಡುವಿನೊಳಗೆ ಈ ಸ್ಟಿಕ್ಕರ್‌ಗಳನ್ನು ಅಳವಡಿಸಿಕೊಳ್ಳಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

**QR ಕೋಡ್ ಮತ್ತು KSP ಆ್ಯಪ್‌ನ ವಿಶೇಷತೆ ಏನು?**

ಪೊಲೀಸರು ವಿತರಿಸಿರುವ ಸ್ಟಿಕ್ಕರ್ ಟೆಂಪ್ಲೇಟ್‌ನಲ್ಲಿ 112 ಸಹಾಯವಾಣಿ ಸಂಖ್ಯೆಯ ಜೊತೆಗೆ, ಬಳಕೆದಾರರನ್ನು ನೇರವಾಗಿ ಕೆಎಸ್‌ಪಿ ಮೊಬೈಲ್ ಅಪ್ಲಿಕೇಶನ್‌ಗೆ ಕೊಂಡೊಯ್ಯುವ QR ಕೋಡ್ ಅನ್ನು ಸಹ ನೀಡಲಾಗಿದೆ. ಒಂಟಿಯಾಗಿ ಅಥವಾ ದೂರದ ಸ್ಥಳಗಳಿಗೆ ಪ್ರಯಾಣಿಸುವವರು ನಿರ್ಭೀತಿಯಿಂದ ಇನ್ಮುಂದೆ ಪ್ರಯಾಣಿಸಬಹುದಾಗಿದೆ.

ಕೆಎಸ್‌ಪಿ ಮೊಬೈಲ್ ಅಪ್ಲಿಕೇಶನ್ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಅಧಿಕೃತ ಆ್ಯಪ್ ಇದರ ಮೂಲಕ ನಾಗರಿಕರು ಎಸ್ ಓಎಸ್ ಸಂದೇಶ ಕಳುಹಿಸಬಹುದು. ಕಳೆದುಹೋದ ವಸ್ತುಗಳ ಬಗ್ಗೆ ದೂರು ನೀಡಬಹುದು. ಈ ಆ್ಯಪ್ ಮೂಲಕವೇ ಟ್ರಾಫಿಕ್ ದಂಡವನ್ನು ಸಹ ಪಾವತಿಸಬಹುದಾಗಿದೆ.

# ನಾನು ಜೆಡಿಎಸ್‌ನಲ್ಲೇ ಇದ್ದಿದ್ದರೆ ಮುಖ್ಯಮಂತ್ರಿ ಆಗುತ್ತಿರಲಿಲ್ಲ

## ■ ಸಹಕಾರಿ ಸಂಘಗಳ ನೇಮಕಾತಿಗಳಲ್ಲಿ ಸಹಕಾರ ಪದವಿ ಪಡೆದವರಿಗೆ ಆದ್ಯತೆ: ಸಿಎಂ ಸಿದ್ದರಾಮಯ್ಯ ಘೋಷಣೆ

• ಉದಯವಾಹಿನಿ, ಚಾಮರಾಜನಗರ

ಸಹಕಾರ ಸಂಘದ ನೇಮಕಾತಿಗಳಲ್ಲಿ ಸಹಕಾರ ಡಿಪ್ಲೊಮೋ, ಪದವಿ ಪಡೆದವರಿಗೆ ಆದ್ಯತೆ ನೀಡಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ. 72ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಉದ್ಘಾಟಿಸಿ, ಸಮಾರೋಪ ಮಾತುಗಳನ್ನಾಡಿದರು. ಪಠ್ಯಗಳಲ್ಲಿ ಸಹಕಾರಿ ತತ್ವದ ಮಹತ್ವವನ್ನು ಅಳವಡಿಸಲಾಗುವುದು ಎಂದು ತಿಳಿಸಿದರು.

ಗ್ರಾಮೀಣ ಭಾರತದ ಆರ್ಥಿಕ ಅಭಿವೃದ್ಧಿಗೆ ಪ್ರತೀ ಗ್ರಾಮದಲ್ಲಿ ಒಂದು ಶಾಲೆ, ಒಂದು ಗ್ರಾಮ ಪಂಚಾಯ್ತಿ, ಒಂದು ಸಹಕಾರ ಸಂಘ ಅತ್ಯಗತ್ಯ ಎನ್ನುವುದು ನೆಹರೂ ಅವರ ದೃಷ್ಟಿಯಾಗಿತ್ತು. ಇವರ ಈ ದೂರದೃಷ್ಟಿಯ ಕಾರಣಕ್ಕೆ ದೇಶದಲ್ಲಿ ಸಹಕಾರ ಚಳವಳಿ ಗಟ್ಟಿಯಾಯಿತು ಎಂದು ತಿಳಿಸಿದರು.

ಇಂದು ರಾಜ್ಯದಲ್ಲಿ ಕೃಷಿ, ಹೈನುಗಾರಿಕೆ, ಕೈಗಾರಿಕೆ, ಬ್ಯಾಂಕಿಂಗ್ ಸೇರಿ ಹಲವಾರು ಕ್ಷೇತ್ರಗಳಲ್ಲಿ ಸಹಕಾರಿ ಚಳವಳಿ, ಸಹಕಾರಿ ಸಂಘಗಳು ಬೆಳೆಯುತ್ತಲೇ ಇವೆ. ಇದು ಆರೋಗ್ಯಕಾರಿ ಬೆಳವಣಿಗೆ ಎಂದರು. ನಾನು ಮುಖ್ಯಮಂತ್ರಿ ಆದಾಗಿನಿಂದ ಎಲ್ಲಾ ಜಾತಿ, ಎಲ್ಲಾ ಧರ್ಮದ ಜನರ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಿ ಜಾರಿ ಮಾಡುತ್ತಿದ್ದೇವೆ. ಚಾಮರಾಜನಗರ ಜಿಲ್ಲೆಯ ಎಲ್ಲಾ ಜಾತಿಯ, ಎಲ್ಲಾ ಧರ್ಮದವರೂ ನನಗೆ ಸಹಕಾರ ಕೊಟ್ಟಿದ್ದಾರೆ.

ಹೀಗಾಗಿ ಚಾಮರಾಜನಗರ ಜಿಲ್ಲೆಯನ್ನು ನಾನು ಯಾವತ್ತೂ ಮರೆಯುವುದಿಲ್ಲ ಎಂದರು. ಚಾಮರಾಜನಗರಕ್ಕೆ ಅನೇಕ ಸಾರಿ ಬಂದಿದ್ದೀನಿ. ಈ ಜಿಲ್ಲೆಗೆ ಬಂದ್ರೆ ಮಂತ್ರಿ ಸ್ಥಾನ ಹೋಗ್ತದೆ ಅನ್ನೋ ಕೆಟ್ಟ ಮೌಢ್ಯ ಇದೆ. ಆದರೆ ಇಲ್ಲಿಗೆ ಬಂದು ಹೋದಷ್ಟೂ ನನ್ನ ಸ್ಥಾನ ಮಾತ್ರವಲ್ಲ, ನಮ್ಮ ಪಕ್ಷದ ಅಧಿಕಾರವೂ ಮತ್ತೆ ಮತ್ತೆ ಗಟ್ಟಿ ಆಗಿದೆ ಎಂದರು.



ನಾನು ಜೆಡಿಎಸ್ ನಲ್ಲೇ ಇದ್ದಿದ್ದರೆ ಮುಖ್ಯಮಂತ್ರಿ ಆಗುತ್ತಿರಲಿಲ್ಲ. ದೇವೇಗೌಡರು ಮತ್ತು ಅವರ ಮಕ್ಕಳು ನನ್ನನ್ನು ಮುಖ್ಯಮಂತ್ರಿ ಮಾಡಲು ಬಿಡುತ್ತಿರಲಿಲ್ಲ. ಸಹಕಾರಿ ಚಳವಳಿಯಲ್ಲಿದ್ದ ಜಿ.ಟಿ.ದೇವೇಗೌಡರು ಈಗಲೂ ಜೆಡಿಎಸ್ ನಲ್ಲಿ ಇದ್ದಾರೆ. ಆದರೆ ನನ್ನ ಪರವಾಗಿಯೇ ಇದ್ದಾರೆ. ಜಿ.ಟಿ.ದೇವೇಗೌಡರು 2006ರವರೆಗೂ ನನ್ನ ಜೊತೆಗೇ ಇದ್ದರು. ಜೆಡಿಎಸ್ ನಿಂದ ನನ್ನನ್ನು ಉಚ್ಚಾಟಿಸಿದ ಮೇಲೆ ಜಿ.ಟಿ.ದೇವೇಗೌಡರು ಅಲ್ಲೇ ಉಳಿದು ಬಿಟ್ಟರು. ಈಗ ಮತ್ತೆ ಒಂದು ರೀತಿಯಲ್ಲಿ ನಮ್ಮ ಜೊತೆಗೇ ಇದ್ದಾರೆ.

– ಸಿದ್ದರಾಮಯ್ಯ, ಸಿಎಂ

**ಹೆಚ್ಚುವರಿ ಹಣ ಹಾಲು ಉತ್ಪಾದಕರಿಗೇ ಹೋಗಬೇಕು**

ನಾನು ಪಶು ಸಂಗೋಪನಾ ಸಚಿವನಾಗಿದ್ದಾಗ ಹಾಲು ಉತ್ಪಾದಕರ ಸಹಕಾರ ಸಂಘಗಳ ಸ್ವಾಯತ್ತತೆ ಮತ್ತು ಸ್ವಾವಲಂಬನೆಗೆ ಪೂರ್ಣ ಸಹಕಾರ ನೀಡಿದ್ದೆ. ಈಗ ಒಂದು ದಿನಕ್ಕೆ ಒಂದು ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ನಾನು ಹಾಲು ಉತ್ಪಾದಕರ ಅನುಕೂಲಕ್ಕಾಗಿ ಲೀಟರ್‌ಗೆ 5ರೂ.ನಂತೆ ಒಂದು ದಿನಕ್ಕೆ 5 ಕೋಟಿ ರೂಪಾಯಿ ಸಹಾಯ ಧನವನ್ನು ರೈತರಿಗೆ ನಮ್ಮ ಸರ್ಕಾರದಿಂದ ನೀಡಲಾಗುತ್ತಿದೆ ಎಂದರು. ನಾವು ಎರಡು ಬಾರಿ ಹಾಲಿನ ದರವನ್ನು ಹೆಚ್ಚಿಸಿದರೂ ಆ ಹೆಚ್ಚುವರಿ ಹಣ ಹಾಲು ಉತ್ಪಾದಕರಿಗೇ ಹೋಗಬೇಕು ಎಂದು ಸ್ಪಷ್ಟ ಸೂಚನೆ ನೀಡಿದ್ದೇನೆ ಎಂದರು.

# ಬಸ್ಸಿಗಾಗಿ ಶಾಲಾ ಕಾಲೇಜು ವಿದ್ಯಾರ್ಥಿಗಳ ಪ್ರತಿಭಟನೆ

• ಉದಯವಾಹಿನಿ ಗುಂಡ್ಲುಪೇಟೆ

ಸಮರ್ಪಕ ಸಾರಿಗೆ ಬಸ್ಸಿಗಾಗಿ ಆಗ್ರಹಿಸಿ ತಾಲ್ಲೂಕಿನ ದೇಶಿಪುರ ಗ್ರಾಮದ ಶಾಲಾ ಕಾಲೇಜು ವಿದ್ಯಾರ್ಥಿಗಳು ಬಸ್ ತಡೆದು ಪ್ರತಿಭಟಿಸಿದರು. ದೇಶಿಪುರ ಗ್ರಾಮದಿಂದ ಪಟ್ಟಣಕ್ಕೆ ಶಾಲಾ ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳು ಸಮರ್ಪಕ ಬಸ್ ಸೌಲಭ್ಯ ಇಲ್ಲದ ಕಾರಣ ಸಮಸ್ಯೆಗೆ ಸಿಲುಕಿದ್ದರು.

**ದೇಶಿಪುರ ಗ್ರಾಮದಲ್ಲಿ ಘಟನೆ**

ಶಾಲಾ ಕಾಲೇಜುಗಳಿಗೆ ತೆರಳಲು ಸಾರಿಗೆ ಸಂಸ್ಥೆಯ ಬಸ್ಸುಗಳನ್ನೆ ಅವಲಂಬಿಸಿರುವ ವಿದ್ಯಾರ್ಥಿಗಳಿಗೆ ಸರಿಯಾಗಿ ಬಸ್ ವ್ಯವಸ್ಥೆ ಇಲ್ಲದ ಕಾರಣ ಗೋಳಾಡುವಂತಾಗಿದೆ ಎಂದು ಪೋಷಕರು ಡಿಪೋ ವ್ಯವಸ್ಥಾಪಕರ ವಿರುದ್ಧ ಆಕ್ರೋಶ ಹೊರಹಾಕಿದರು. ಡಿಪೋ ವ್ಯವಸ್ಥಾಪಕರ ವಿರುದ್ಧ ಧಿಕ್ಕಾರದ ಘೋಷಣೆಗಳನ್ನ ಕೂಗಿದ ವಿದ್ಯಾರ್ಥಿಗಳು ಶಾಸಕರ ಮಾತಿಗೂ ಬೆಲೆಕೊಡದೆ ವಿದ್ಯಾರ್ಥಿಗಳ ಓದಿಗೆ ಅಡ್ಡಿಪಡಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಪ್ರತಿಭಟನಾ ಸ್ಥಳಕ್ಕೆ ದೌಡಾಯಿಸಿದ ಡಿಪೋ ವ್ಯವಸ್ಥಾಪಕ ತ್ಯಾಗರಾಜು ಮುಂದಿನ ದಿನಗಳಲ್ಲಿ ಸಮರ್ಪಕ ಬಸ್ ಸಂಚಾರ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದ ಬಳಿಕ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ತೆರಳಿದರು.




ಉದಯವಾಹಿನಿ ಚಿತ್ರ

ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಸಮಸ್ಯೆಯಾಗದಂತೆ ಕ್ರಮವಹಿಸಲಾಗುವುದು, ದೇಶಿಪುರ ಗ್ರಾಮಕ್ಕೆ ಈಗಾಗಲೇ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆ ವೇಳೆ ಬಸ್ಸುಗಳ ಸಂಪರ್ಕ ವ್ಯವಸ್ಥೆಯಿದ್ದು ವಿದ್ಯಾರ್ಥಿಗಳಿಗೆ ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡಲಾಗುವುದು.

–ತ್ಯಾಗರಾಜು
ಡಿಪೋ ವ್ಯವಸ್ಥಾಪಕರು, ಗುಂಡ್ಲುಪೇಟೆ

ಸಕಾಲಕ್ಕೆ ಸಾರಿಗೆ ಬಸ್ ಸಂಪರ್ಕವಿಲ್ಲದೆ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಸಮಸ್ಯೆಯಾಗಿತ್ತು ಈ ಕುರಿತು ಡಿಪೋ ವ್ಯವಸ್ಥಾಪಕರಿಗೆ ಹಲವು ಬಾರಿ ಮನವಿ ಮಾಡಿದ್ದರೂ ಸಹ ಸ್ಪಂದಿಸದ ಕಾರಣ ತಡೆಯೊಡ್ಡಬೇಕಾಯಿತು, ಮುಂದಿನ ದಿನಗಳಲ್ಲಿ ಇಂತಹ ಸನ್ನಿವೇಶಗಳು ಮರುಕಳಿಸಿದರೆ ಕೆಎಸ್‌ಆರ್‌ಟಿಸಿ ಡಿಪೋ ವ್ಯವಸ್ಥಾಪಕರ ಕಚೇರಿ ಮುಂಭಾಗವೇ ಪ್ರತಿಭಟನೆ ನಡೆಸಬೇಕಾಗುತ್ತದೆ.

–ಗಿರೀಶ್, ದೇಶಿಪುರ ಗ್ರಾಮಸ್ಥ

# 256 ಕೋಟಿ ಯೋಜನೆಗೆ ಅನುಮೋದನೆ

• ಉದಯವಾಹಿನಿ, ಸೋಮವಾರಪೇಟೆ

ತಾಲ್ಲೂಕಿನಲ್ಲಿ 2025–26ನೇ ಸಾಲಿನ ವಾರ್ಷಿಕ ಕರಡು ಅಭಿವೃದ್ಧಿ ಯೋಜನೆಯಲ್ಲಿ 256.86 ಕೋಟಿ ಅನುದಾನಕ್ಕೆ ಕ್ರಿಯಾ ಯೋಜನೆಗೆ, ಪ್ರಥಮ ಬಾರಿಗೆ ಶಾಸಕ ಡಾ. ಮಂತರ್ ಗೌಡ ಅಧ್ಯಕ್ಷತೆಯಲ್ಲಿ ನಡೆದ ತಾಲ್ಲೂಕು ಯೋಜನೆ, ಅಭಿವೃದ್ಧಿ ಸಮಿತಿ ಸಭೆಯಲ್ಲಿ ಅನುಮೋದನೆ ಲಭಿಸಿತು.

ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಸಭೆಯಲ್ಲಿ ಕ್ರಿಯಯೋಜನೆಗೆ ಅನುಮೋದನೆಯ ಪಡೆದ ನಂತರ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಶಾಸಕ ಮಂತರ್ ಗೌಡ ತಿಳಿಸಿದರು ಗ್ರಾಮ ಪಂಚಾಯಿತಿಗಳು ಅಭಿವೃದ್ಧಿಗೆ ಪೂರಕವಾಗಿ ಕ್ರಿಯಾಯೋಜನೆ ತಯಾರಿಸಬೇಕು. ಉದ್ಯೋಗ ಖಾತ್ರಿ ಯೋಜನೆಯ ಮೂಲಕ ಕನಿಷ್ಠ 2 ಕೋಟಿಯಷ್ಟು ವಾರ್ಷಿಕ ಪ್ರಗತಿ ಸಾಧಿಸಬೇಕು. ಗ್ರಾಮ ಸಭೆ ಹೆಚ್ಚು ಮಹತ್ವ ಪಡೆದಿದ್ದು, ಸದಸ್ಯರು ತಮ್ಮ ಅಧಿಕಾರ ಅರಿತು ಕೆಲಸ ಮಾಡಬೇಕೆಂದು ಅವರು ಸೂಚಿಸಿದರು. ದೊಡ್ಡಮಳೆ ಪಂಚಾಯಿತಿ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಕಾಮಗಾರಿ ಪೂರ್ಣಗೊಂಡಿಲ್ಲ. 2 ಕೊಳವೆ ಬಾವಿಗಳು ಸ್ಥಗಿತಗೊಂಡಿವೆ ಎಂದು ಗೋಪಾಲಕೃಷ್ಣ ಹೇಳಿದರು. ಬೆಟ್ಟದಳ್ಳಿ ಭಾಗದಲ್ಲಿ ಪೈಪ್‌ಲೈನ್ ಅಳವಡಿಸಿದ್ದರೂ ಟ್ಯಾಂಕ್‌ಗಳ ನಿರ್ಮಾಣ ನಡೆದಿಲ್ಲ ಎಂದು ತಮ್ಮಯ್ಯ ದೂರಿದರು. ಕಾಮಗಾರಿ ಪೂರ್ಣಗೊಳ್ಳದೇ ದಾಖಲಾತಿಗಳಿಗೆ ಸಹಿ ಹಾಕುವುದು ಬೇಡ ಮತ್ತು ಪಂಚಾಯಿತಿಗಳಿಗೆ ವಹಿಸಿಕೊಳ್ಳಬೇಡಿ ಎಂದು ಸಲಹೆ ನೀಡಿದ ಶಾಸಕರು, ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪಂಚಾಯಿತಿ ಕುಡಿಯುವ ನೀರು ಸರಬರಾಜು ಇಲಾಖೆಯ ಎಂಜಿನಿಯರ್ ಟಿ.ಪಿ. ವೀರೇಂದ್ರ ಅವರಿಗೆ ಸೂಚಿಸಿದರು.



ಉದಯವಾಹಿನಿ ಚಿತ್ರ

**ಜಾಬ್ ಕಾರ್ಡ್ ಮಾಡಿಸುವ ಬಗ್ಗೆ ಅಭಿಯಾನ ನಡೆಸಬೇಕು**


ಉದ್ಯೋಗ ಖಾತ್ರಿ ಮೂಲಕ ಸಣ್ಣಪುಟ್ಟ ರಸ್ತೆ ನವೀಕರಣ, ಚರಂಡಿ, ಕೆರೆಗಳ ಹೂಳೆತ್ತುವ ಕಾಮಗಾರಿ ನಡೆಸಬೇಕು. ಜಾಬ್ ಕಾರ್ಡ್ ಮಾಡಿಸುವ ಬಗ್ಗೆ ಅಭಿಯಾನ ನಡೆಸಬೇಕು ಪಂಚಾಯಿತಿಗೆ ಆದಾಯಕ್ಕಾಗಿ ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸಬೇಕೆಂದು ಶಾಸಕರು ಸಲಹೆ ನೀಡಿದರು.

# ಮಿನಿ ನ್ಯೂಸ್

## ಅವೈಜ್ಞಾನಿಕ ಕಾಮಗಾರಿಯಿಂದ ಕೆರೆಗಳಿಗೆ ನೀರು ತುಂಬಿಸಲು ಅಸಾಧ್ಯ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ 110 ಕೆರೆಗಳಿಗೆ ನೀರು ತುಂಬಿಸುವ ವಿಚಾರವು ಮುನ್ನೆಲೆಗೆ ಬಂದ ಹಿನ್ನೆಲೆ ಪೈಲ್‌ಲೈನ್ ಮೂಲಕ ನೀರುಹರಿಸುವ ವಿಚಾರ ಚರ್ಚೆಗೆ ಬಂದಿದೆ, ಆದರೆ ಪೈಲ್ ಲೈನ್ ಅಳವಡಿಕೆ ವಿಚಾರ ಅವೈಜ್ಞಾನಿಕವಾದುದು ಇದರಿಂದ ಅಂತರ್ಜಲ ಅಭಿವೃದ್ಧಿ ಅಸಾಧ್ಯ ಎಂದು ಜೆಡಿಎಸ್ ಮುಖಂಡ ಕಡಬೂರು ಮಂಜುನಾಥ್ ಅಪಸ್ವರ ಎತ್ತಿದ್ದಾರೆ. ಕೆರೆಗಳಿಗೆ ನೀರು ತುಂಬಿಸಲು ಹಾಗೂ ಅಂತರ್ಜಲ ವೃದ್ಧಿಗೆ ಸಹಕಾರಿಯಾಗುವ ನಿಟ್ಟಿನಲ್ಲಿ ವೈಜ್ಞಾನಿಕ ಚಿಂತನೆಗೆ ಮುಂದಾಗಬೇಕಿದೆ, ಪೈಪ್ ಲೈನ್ ಅಳವಡಿಕೆ ಒಂದು ಸೀಮಿತ ಹಳ್ಳ ಕೊಳ್ಳಗಳನ್ನ ತುಂಬಿಸಲು ಹಾಗೂ ಕೃಷಿ ಚಟುವಟಿಕೆಗೆ ಪೂರಕವಾಗಿರುವ ಕೃಷಿ ಹೊಂಡಕ್ಕೆ ಬಳಕೆ ಮಾಡಲಷ್ಟೇ ಸಹಕಾರಿಯಾಗಿದೆಯೇ ಹೊರತು ಅಂತರ್ಜಲ ಅಭಿವೃದ್ಧಿಗೆ ಪೂರಕವಾಗಿಲ್ಲ ಎಂದು ವಿರೋಧ ವ್ಯಕ್ತಪಡಿಸಿದ್ದಾರೆ.




ತಾಲ್ಲೂಕಿನ ರೈತರ ಹಿತಾಸಕ್ತಿ ಜೊತೆಗೆ ಅಂತರ್ಜಲ ಪುನರ್ಭಿವೃದ್ಧಿಗೆ ಗಮನಹರಿಸಬೇಕಿರುವ ಸಂಧರ್ಭ ಬಂದೊದಗಿದೆ, ವೈಜ್ಞಾನಿಕ ಹಾಗೂ ಅವೈಜ್ಞಾನಿಕ ಚಿಂತನೆಗಳಿಗೆ ಗ್ರಾಸವಾಗದೆ ಪ್ರಸ್ತುತ ಸ್ಥಿತಿಗತಿ ಅವಲೋಕಿಸಬೇಕು, ಎಂದು ಚಕಾರ ಎತ್ತಿದ್ದಾರೆ. ದಿವಂಗತ ಎಚ್. ಎಸ್.ಮಹಾದೇವಪ್ರಸಾದ್ ಅವರ ಅವಧಿಯಲ್ಲಿ ಪೈಪುಗಳನ್ನ ಅಳವಡಿಸಿ ನೀರು ಹರಿಸಲು ಯೋಜನೆ ರೂಪಿಸಲಾಗಿತ್ತಾದರು ರೈತ ಸಂಘ ವಿರೋಧ ವ್ಯಕ್ತಪಡಿಸಿತ್ತು ಅದರಂತೆ ಬಿಜೆಪಿ ಶಾಸಕ ನಿರಂಜನ್ ಅವಧಿಯಲ್ಲೂ ವಿರೋಧ ಮಾಡಲಾಗಿ ಗ್ರಾವಿಟಿ ಮೂಲಕವೇ ನೀರು ಹರಿಸಲು ಕ್ರಮ ಕೈಗೊಳ್ಳಲಾಗಿತ್ತು ಇದರಿಂದ ಕೆರೆಗಳಿಗೆ ನೀರು ಹರಿಸುವ ಜೊತೆಯಲ್ಲೇ ಅಂತರ್ಜಲ ವೃದ್ಧಿಗೆ ಅನುಕೂಲವಾಗಿತ್ತು, ಅದರಂತೆ ಹಾಲಿ ಶಾಸಕರು ಪೈಪ್‌ಲೈನ್ ಅಳವಡಿಕೆ ವಿಚಾರದಿಂದ ಹೊರ ಬರಬೇಕು ಎಂದು ಮನವಿ ಮಾಡಿದ್ದಾರೆ.

## 450 ಮೆಟ್ಟಿಲು ಹತ್ತಿ ಇಂಡಿಯಾ ಬುಕ್ ಆಫ್ ರೆಕಾರ್ಡ್‌ಗೆ ಸೇರಿದ 2 ವರ್ಷದ ಮಗು

• ಉದಯವಾಹಿನಿ, ತುಮಕೂರು

ತಾಲ್ಲೂಕು ಪಂಡಿತನಹಳ್ಳಿ ಬಳಿಯಿರುವ ಮಂದಾರಗಿರಿ ಬೆಟ್ಟದಲ್ಲಿರುವ ಗುರು ಮಂದಿರ ದೇವಾಲಯದ 450 ಮೆಟ್ಟಿಲುಗಳನ್ನು 23 ನಿಮಿಷ 8 ಸೆಕೆಂಡುಗಳಲ್ಲಿ ಹತ್ತುವ ಮೂಲಕ ಇಂಡಿಯಾ ಬುಕ್ ಆಫ್ ರೆಕಾರ್ಡ್ ಪ್ರಶಸ್ತಿಗೆ ಪಾತ್ರವಾದ ಎರಡು ವರ್ಷದ ಭುವನ್ ರೆಡ್ಡಿ. ಅನುಷಾ ಮತ್ತು ರೆಡ್ಡಿ ಜಗದೀಶ್ ದಂಪತಿ ಪುತ್ರನಾದ ಭುವನ್ ರೆಡ್ಡಿಗೆ ಇಂಡಿಯಾ ಬುಕ್ ಆಫ್ ರೆಕಾರ್ಡ್ ಕೀರ್ತಿಗೆ ಪಾತ್ರನಾಗಿರುವ ಈ ಮಗು. ಭಾರತೀಯ ವಿಶ್ವ ದಾಖಲೆಯ ಪ್ರಮಾಣ ಪತ್ರವನ್ನು ಸಹ ಕಳದ ಜನವರಿಯಲ್ಲಿ ಮುಡಿಗೆರಿಸಿಕೊಂಡಿದ್ದ. ಈ ಪ್ರಶಸ್ತಿ ಪಡೆಯುವಾಗ ಭುವನ್ ರೆಡ್ಡಿಗೆ 1 ವರ್ಷ 4 ತಿಂಗಳಾಗಿತ್ತು, ಚಿಕ್ಕ ವಯಸ್ಸಿನಲ್ಲಿಯೇ ಪ್ರಾಯೋಗಿಕವಾಗಿ ಬಹು ಕಲಿಕಾ ಚಟುವಟಿಕೆಗಳೊಂದಿಗೆ ಅದ್ಭುತ ಸಾಧನೆಗಳನ್ನು ಡಿ. ಭುವನ್ ರೆಡ್ಡಿ ಮಾಡಿದ್ದಾನೆ. ಇಂಡಿಯನ್ ಬುಕ್ ಆ ರೆಕಾರ್ಡ್ ಬರಿಗಾಲಿನಲ್ಲಿ ನಡೆದ ಮೊದಲ ಭಾರತೀಯ ಮಗು ಎಂಬ ಕೀರ್ತಿಗೆ ಭುವನ್ ರೆಡ್ಡಿ ಪಾತ್ರನಾಗಿದ್ದಾನೆ. ನ್ಯಾಯಾಧೀಶರಾದ ಕೆ. ಮಾಧವ ರೆಡ್ಡಿ, ಡಾ. ಜೆ. ಪಾವನಿ, ಡಾ. ಕೆ. ಸ್ವರ್ಣಶ್ರೀ ಅವರು ಹೈದರಾಬಾದ್‌ನಲ್ಲಿ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ತೀರ್ಪು ನೀಡಿದ್ದಾರೆ. ಮುಂಬರುವ ವರ್ಷಗಳಲ್ಲಿ ಭುವನ್‌ರೆಡ್ಡಿ ಇನ್ನಷ್ಟು ಸ್ಫೂರ್ತಿದಾಯಕ ಮೈಲಿಗಲ್ಲುಗಳನ್ನು ಸಾಧಿಸಲಿ ಎಂದು ಹಾರೈಸಿದ್ದಾರೆ.



## ಸರ್ಕಾರಿ ಜಾಗ ಒತ್ತುವರಿ ತೆರವಿಗೆ ಆಗ್ರಹ

• ಉದಯವಾಹಿನಿ, ಬಂಗಾರಪೇಟೆ

ತಾಲ್ಲೂಕಿನ ಮಾಗೊಂದಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ರಾಮಚಂದ್ರಪುರದ ವಸತಿ ರಹಿತರ ವಸತಿ ಸೌಕರ್ಯಕ್ಕಾಗಿ ಮೀಸಲಿಟ್ಟಿದ್ದ ಸರ್ಕಾರಿ ಗೋಮಾಳವನ್ನು ಕೆಲವರು ಒತ್ತುವರಿ ಮಾಡಿಕೊಂಡು, ಶೆಡ್ ನಿರ್ಮಿಸಲು ಮುಂದಾಗಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದರು.

ರಾಮಚಂದ್ರಪುರ ಗ್ರಾಮದ ಸರ್ವೆ ನಂಬರ್ 20ರಲ್ಲಿ 8.16 ಎಕರೆ ಸರ್ಕಾರಿ ಗೋಮಾಳ ಜಾಗವಿದೆ. ಈ ಪೈಕಿ 4.20 ಎಕರೆ ಜಮೀನುನ್ನು ನಾಲ್ವರಿಗೆ ಹಂಚಿಕೆ ಮಾಡಲಾಗಿದೆ. ಉಳಿದ 3.36 ಎಕರೆಯನ್ನು ಪಂಚಾಯಿತಿ ವ್ಯಾಪ್ತಿಯಲ್ಲಿ ಮನೆ ಇಲ್ಲದವರಿಗೆ ಹಂಚಿಕೆ ಮಾಡಲು ಕಾಯ್ದಿರಿಸಲಾಗಿದೆ. ಈ ಜಾಗವನ್ನು ಕೆಲವರು ಏಕಾಏಕಿ ಒತ್ತುವರಿ ಮಾಡಿಕೊಂಡು ಸಮತಟ್ಟು ಮಾಡಿ, ಶೆಡ್‌ಗಳ ನಿರ್ಮಾಣಕ್ಕೆ ಮುಂದಾಗಿದ್ದರು. ಈ ವಿಷಯ ತಿಳಿದು ಸ್ಥಳಕ್ಕೆ ಬಂದ ಪಂಚಾಯಿತಿ ಅಧಿಕಾರಿಗಳು, ಕಾಮಗಾರಿ ನಡೆಸದಂತೆ ಎಚ್ಚರಿಕೆ ನೀಡಿದರು ಗ್ರಾಮ ಪಂಚಾಯಿತಿ ಸದಸ್ಯ ಕುಪೇಂದ್ರಕುಮಾರ್ ಮಾತನಾಡಿ, ತಹಶೀಲ್ದಾರ್, ಕೆಲವು ಅಧಿಕಾರಿಗಳ ಕುಮ್ಮಕ್ಕಿನಿಂದ ಸ್ಥಳೀಯರು ಭೂಮಿ ಒತ್ತುವರಿ ಮಾಡಿಕೊಳ್ಳುತ್ತಿದ್ದಾರೆ. ಈ ಜಮೀನಿನ ಯಾವುದೇ ದಾಖಲಾತಿ ಹೊಂದಿರದಿದ್ದರೂ, ಐವರು ಪಂಚಾಯಿತಿಯಿಂದ ಇ–ಸ್ವತ್ತು ಮಾಡಿಸಿಕೊಂಡು ನಿವೇಶನ ಮಾಡಿಕೊಂಡಿದ್ದಾರೆ. ಈ ಕುರಿತು ಗೊತ್ತಿದ್ದರೂ, ಕಂದಾಯ ಅಧಿಕಾರಿಗಳು ತಟಸ್ಥ ಧೋರಣೆ ಅನುಸರಿಸುತ್ತಿದ್ದಾರೆ ಎಂದು ದೂರಿದರು.

# ದೇವರಹಳ್ಳಿ ರೈತರ ಜಮೀನಿನಲ್ಲಿ ಹುಲಿ ಹೆಜ್ಜೆ ಗುರುತು ಪತ್ತೆ: ಆತಂಕದಲ್ಲಿ ಗ್ರಾಮಸ್ಥರು

• ಉದಯವಾಹಿನಿ, ಗುಂಡ್ಲುಪೇಟೆ

ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ಗೋಪಾಲಸ್ವಾಮಿ ಬೆಟ್ಟ ವಲಯಕ್ಕೆ ಸೇರಿದ ದೇವರಹಳ್ಳಿ ಗ್ರಾಮದ ರೈತರೊಬ್ಬರ ಜಮೀನಿನಲ್ಲಿ ವ್ಯಾಘ್ರನ ಹೆಜ್ಜೆ ಗುರುತು ಪತ್ತೆಯಾಗಿದ್ದು ತಾಯಿಹುಲಿ ಜೊತೆಯಲ್ಲಿ ಮರಿಗಳು ಇರಬಹುದು ಎಂಬುದಾಗಿ ಶಂಕಿಸಲಾಗಿದೆ.



ಉದಯವಾಹಿನಿ ಚಿತ್ರ

ಗ್ರಾಮದ ಸನಿಹದಲ್ಲೇ ವ್ಯಾಘ್ರನ ಹೆಜ್ಜೆ ಗುರುತು ಪತ್ತೆ ಆಗಿರುವುದು ಆತಂಕಕಾರಿ ಸಂಗತಿಯಾಗಿದೆ, ಮೇಲ್ನೋಟಕ್ಕೆ ಮರಿಗಳೊಟ್ಟಿಗೆ ಸಂಚರಿಸಿರಬಹುದು ಎಂಬ ಗುಮಾನಿ ಇರುವುದರಿಂದ ಕೂಂಬಿಂಗ್ ಕಾರ್ಯಾಚರಣೆ ನಡೆಸಿ ಹುಲಿ ಪತ್ತೆಗೆ ಮುಂದಾಗಬೇಕು ಹಾಗೂ ರಾತ್ರಿ ವೇಳೆ ಗ್ರಾಮದ ಮಹದೇಶ್ವರ ದೇವಸ್ಥಾನದಿಂದ ಹೊಸಹಳ್ಳಿ ಕಾಲೋನಿ ಸುತ್ತಲಿನ ವ್ಯಾಪ್ತಿಯಲ್ಲಿ ಗಸ್ತು ನಡೆಸಬೇಕು.

–ಎ. ಶಿವಪ್ಪ, ರೈತ ಮುಖಂಡ ದೇವರಹಳ್ಳಿ



ರೈತರ ಜಮೀನಿನಲ್ಲಿ ಹುಲಿಯ ಹೆಜ್ಜೆ ಗುರುತು ಪತ್ತೆ ಆಗಿರುವುದಾಗಿ ಮಾಹಿತಿ ದೊರೆತಿದ್ದು ಸಿಬ್ಬಂದಿಗಳಿಂದ ಸ್ಪಷ್ಟತೆ ಪಡೆದುಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗುವುದು. ರೈತರ ಜಮೀನಿಗೆ ಈಗಾಗಲೇ ಆ ವ್ಯಾಪ್ತಿಯ ಗಸ್ತು ಸಿಬ್ಬಂದಿ ತೆರಳಿದ್ದು ಪರಿಶೀಲನೆಗೆ ಮುಂದಾಗಿದ್ದಾರೆ.

–ಮಲ್ಲೇಶ್, ವಲಯ ಅರಣ್ಯಾಧಿಕಾರಿ ಜಿ.ಎಸ್.ಬೆಟ್ಟ ವಲಯ

ಈಗಾಗಲೇ ಇಂಗಲವಾಡಿ, ಕಲ್ಲಹಳ್ಳಿ, ಮಂಚಹಳ್ಳಿ ಸೇರಿದಂತೆ ಹಲವೆಡೆ ಕಾಣಿಸಿಕೊಳ್ಳುತ್ತಿದ್ದ ವ್ಯಾಘ್ರ ರೈತರನ್ನ ಗ್ರಾಮಸ್ಥರನ್ನ ಬೆಚ್ಚಿಬೀಳಿಸಿದ್ದು, ದೇವರಹಳ್ಳಿ ಸುತ್ತಲಿನ ವ್ಯಾಪ್ತಿಯಲ್ಲಿ ವ್ಯಾಘ್ರ ಮರಿಯೊಟ್ಟಿಗೆ ಸಂಚರಿಸಿರುವುದು ಆತಂಕಕ್ಕೆ ಕಾರಣವಾಗಿದೆ. ಗ್ರಾಮದ ರೈತ ಮಲ್ಲಪ್ಪ ಎಂಬವರ ಜಮೀನಿನಲ್ಲಿ ಹುಲಿ ಹೆಜ್ಜೆ ಗುರುತು ಪತ್ತೆಯಾಗಿರುವುದು ಭಯದ ವಾತಾವರಣ ಸೃಷ್ಟಿಸಿದೆ. ಹುಲಿ ಹೆಜ್ಜೆ ಗುರುತು ಪತ್ತೆಯಾಗಿರುವ ಕುರಿತು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿರುವುದಾಗಿ ರೈತ ಮುಖಂಡ ಶಿವಪ್ಪ ತಿಳಿಸಿದ್ದು ವ್ಯಾಘ್ರನ ಚಲನವಲನದ ಮೇಲೆ ನಿಗಾವಹಿಸಲು ಕ್ಯಾಮರಾ ಅಳವಡಿಸಬೇಕು ಎಂದು ಆಗ್ರಹಿಸಿದ್ದಾರೆ.

# ಜಿಂಕೆ ಬೇಟೆಯಾಡಿ ಮಾಂಸ ಪಾಲು ಹಾಕುತ್ತಿದ್ದ ಇಬ್ಬರ ಬಂಧನ

• ಉದಯವಾಹಿನಿ, ಕೊಳ್ಳೇಗಾಲ

ಜಿಂಕೆಯನ್ನು ಬೇಟೆಯಾಡಿ ಅದರ ಮಾಂಸವನ್ನು ತುಂಡು ಮಾಡಿ ಪಾಲು ಹಾಕುತ್ತಿದ್ದ ಇಬ್ಬರನ್ನು ಬಂಧಿಸಿ 41 ಕೆಜಿ ಮಾಂಸ, ಒಂದು ತಲೆ, ಐದು ಕಾಲುಗಳು, ಒಂದು ಮಚ್ಚು, 4 ಚೂರಿಗಳು, 3ಮೋಟಾರ್ ಬೈಕ್ ಗಳನ್ನು ವಶಪಡಿಸಿಕೊಂಡಿರುವ ಘಟನೆ ತಾಲ್ಲೂಕಿನ ದೊಡ್ಡಿಂದುವಾಡಿ ಕಬಿನಿ ಚಾನೆಲ್ ಬಳಿ ಜರುಗಿದೆ. ತಾಲ್ಲೂಕಿನ ಇಕ್ಕಡಹಳ್ಳಿ ಗ್ರಾಮದ ಮಹದೇವ (42), ದೊಡ್ಡಿಂದುವಾಡಿ ಗ್ರಾಮದ ಕಿರಣ್ (30) ಬಂಧಿತ ಆರೋಪಿಗಳು.ಈ ಇಬ್ಬರು ಸೇರಿದಂತೆ ಐವರು ಆರೋಪಿತರು ಉಗನಿಯ ಸತ್ತೆಗಾಲದ ಕಾಡಂಚಿನಲ್ಲಿ ಸುಮಾರು 6 ಕ್ಕೂ ಹೆಚ್ಚು ಜಿಂಕೆಯನ್ನು ಬೇಟೆಯಾಡಿ ತಂದು ದೊಡ್ಡಿಂದುವಾಡಿ ಕಬಿನಿ ಚಾನೆಲ್ ಬಳಿ ಖಾಸಗಿ ಜಮೀನಿನಲ್ಲಿ ಜಿಂಕೆಯನ್ನು ತುಂಡು ಮಾಡಿ ಅದರ ಮಾಂಸವನ್ನು ಪಾಲು ಹಾಕುತ್ತಿದ್ದರು. ಈ ಬಗ್ಗೆ ಬಂದ ಖಚಿತ ಮಾಹಿತಿಯನ್ನು ಆಧರಿಸಿ ಕಾರ್ಯ ಪ್ರವೃತ್ತರಾದ ಕೊಳ್ಳೇಗಾಲ ಅರಣ್ಯ ಸಂಚಾರಿ ದಳದ ಪೊಲೀಸರು, ಕೂಡಲೆ ಮಡಿಕೇರಿ ಅರಣ್ಯ ಘಟಕದ ಪ್ರಭಾರ ಪೊಲೀಸ್ ಅಧೀಕ್ಷಕ ಸುದರ್ಶನ್ ರವರ ಮಾರ್ಗದರ್ಶನದಲ್ಲಿ ದಾಳಿ ನಡೆಸಿ ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ. ನಂತರ ಸ್ಥಳದಲ್ಲಿ ಪರಿಶೀಲನೆ ನಡೆಸಿದ ಪೊಲೀಸರು 41 ಕೆಜಿ ಜಿಂಕೆಯ ಮಾಂಸ, ಒಂದು ಮಚ್ಚು, 4 ಚೂರಿಗಳು , 3 ಮೋಟಾರ್ ಬೈಕ್‌ಗಳನ್ನು ವಶಪಡಿಸಿಕೊಂಡು ವನ್ಯಜೀವಿ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಉಳಿದ ಆರೋಪಿಗಳು ಪೊಲೀಸರನ್ನು ಕಂಡು ಸ್ಥಳದಿಂದ ಪರಾರಿಯಾಗಿದ್ದಾರೆ. ದಾಳಿಯಲ್ಲಿ ಪಿಎಸ್‌ಐ ವಿಜಯರಾಜ್,ಮುಖ್ಯ ಪೇದೆಗಳಾದ ಸ್ವಾಮಿ, ಬಸವರಾಜು, ರಾಮಚಂದ್ರ, ಜಮಿಲ್, ಪ್ರಭಾಕರ ಹಾಗೂ ಮಹಿಳಾ ಮುಖ್ಯ ಪೇದೆ ಲತಾ ಮತ್ತು ಪೇದೆ ಬಸವರಾಜು ರವರು ಭಾಗವಹಿಸಿದ್ದರು.



ಉದಯವಾಹಿನಿ ಚಿತ್ರ

# ಮಕ್ಕಳು ಕಡೆಗಣಿಸಿದರೆ ಜೀವನಾಂಶಕ್ಕೆ ಅರ್ಜಿ ಸಲ್ಲಿಸಬಹುದು

• ಉದಯವಾಹಿನಿ, ಬೆಳಕವಾಡಿ

ಇತ್ತೀಚೆಗೆ ಹಿರಿಯ ನಾಗರೀಕರನ್ನು ಕಡೆಗಾಣಿಸುವುದರಿಂದ ಮನೆಯಲ್ಲಿ ಹಿರಿಯರ ಮಾರ್ಗದರ್ಶನ ಇಲ್ಲದೆ ವಿಚ್ಛೇದನ ಪ್ರಕರಣಗಳು ಹೆಚ್ಚಾಗಿವೆ. ಮಕ್ಕಳು ತಂದೆ ತಾಯಿಯನ್ನು ಕಡೆಗಣಿಸಿದರೆ ನ್ಯಾಯಾಲಯದಲ್ಲಿ ಜೀವನಾಂಶಕ್ಕಾಗಿ ಅರ್ಜಿ ಸಲ್ಲಿಸಬಹುದು ಎಂದು ಜೆಎಂಎಫ್‌ಸಿ ಹಿರಿಯ ಸಿವಿಲ್ ನ್ಯಾಯಾಧೀಶ ಎಂ. ಮಹೇಂದ್ರ ತಿಳಿಸಿದರು.

ಗ್ರಾಮದ ಪೊಲೀಸ್ ಠಾಣೆ ಆವರಣದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಮತ್ತು ಪೊಲೀಸ್ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಹಿರಿಯ ನಾಗರಿಕರ ಪ್ರಕರಣಗಳನ್ನು ಬೇಗ ಇತ್ಯರ್ಥ ಪಡಿಸಬೇಕು ಎಂದು ಕಾನೂನು ತಿದ್ದುಪಡಿಯಾಗಿದೆ. ಕಡ್ಡಾಯವಾಗಿ ಕ್ರಯಪತ್ರ, ಮರಣಶಾಸನ ಪತ್ರ ರಿಜಿಸ್ಟರ್ ಆಗಬೇಕು. ಇಲ್ಲವಾದರೆ ಅದಕ್ಕೆ ಬೆಲೆ ಇರುವುದಿಲ್ಲ. ಚೆಕ್‌ಗೆ ಸಹಿ ಮಾಡಿ ಮೋಸ ಹೋಗಿ ಆರೋಗ್ಯ ಹಾಳು ಮಾಡಿ ಕೊಳ್ಳಬೇಡಿ ಎಂದು ಸಲಹೆ ನೀಡಿದರು.

ಸರ್ಕಾರದಿಂದ ವೃದ್ಧಾಪ್ಯ ವೇತನ, ಬಸ್‌ಗಳಲ್ಲಿ ರಿಯಾಯಿತಿ ದರದಲ್ಲಿ ಪಾಸ್ ಸಿಗುತ್ತದೆ ಆಸ್ತಿಗೆ ಸಹಿ ಮಾಡಿ ಅನ್ಯಾಯಕ್ಕೆ ಒಳಗಾಗಿದ್ದರೆ ಉಪವಿಭಾಗಾಧಿಕಾರಿಗೆ ಅರ್ಜಿ ಹಾಕಿದರೆ ಅದನ್ನು ರದ್ದು ಮಾಡುತ್ತಾರೆ, ಉಚಿತವಾಗಿ ಕಾನೂನು ಸೇವಾ ಸಮಿತಿಯಿಂದ ಅನ್ಯಾಯಕ್ಕೆ ಒಳಗಾಗಿರುವ ಹಿರಿಯ ನಾಗರೀಕರಿಗೆ ನ್ಯಾಯ ದೊರಕಿಸಿ ಕೊಡುವ ಕಾರ್ಯವನ್ನು ಒದಗಿಸಿದೆ. ಸದುಪಯೋಗ ಪಡಿಸಿಕೊಳ್ಳಿ ಎಂದರು.

ಪಿಎಸ್‌ಐ ಬಿ.ವಿ.ಪ್ರಕಾಶ್ ಮಾತನಾಡಿ, ಮಕ್ಕಳಿಗಾಗಿ ಆಸ್ತಿಯನ್ನು ಮಾಡಬೇಡಿ. ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ. ಆಗ ಮಕ್ಕಳು ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ನಿಮಗೆ ತೊಂದರೆ ಬಂದರೆ ನಿಮ್ಮ ಜತೆಗೆ ನಾವು ಇದ್ದೇವೆ ಎಂದರು.



ಉದಯವಾಹಿನಿ ಚಿತ್ರ

ಹಿರಿಯ ನಾಗರಿಕರು ಯೋಗ ವಾಯುವಿಹಾರ ಮಿತ ಆಹಾರ ಸೇವನೆ ಮಾಡಿ ಆರೋಗ್ಯ ಚೆನ್ನಾಗಿ ಇಟ್ಟುಕೊಳ್ಳಿ.

– ಎಂ.ಮಹೇಂದ್ರ, ಹಿರಿಯ ಸಿವಿಲ್ ನ್ಯಾಯಾಧೀಶ

# ರಾಮನಗರ: ಸಭೆಯಲ್ಲಿ 42 ಪ್ರಕರಣಗಳು ಇತ್ಯರ್ಥ

• ಉದಯವಾಹಿನಿ, ಮಾಗಡಿ

ಪಟ್ಟಣದಲ್ಲಿ ನಡೆದ ಸಾರ್ವಜನಿಕರ ದೂರು ಅರ್ಜಿಗಳ ವಿಚಾರಣೆ ಹಾಗೂ ವಿಲೇವಾರಿ ಸಭೆಯಲ್ಲಿ ಒಟ್ಟು 42 ಪ್ರಕರಣಗಳನ್ನು ಸ್ಥಳದಲ್ಲೇ ಇತ್ಯರ್ಥಗೊಳಿಸಲಾಯಿತು ಎಂದು ಉಪ ಲೋಕಾಯುಕ್ತ ನ್ಯಾ. ಕೆ.ಎನ್.ಫಣೀಂದ್ರ ತಿಳಿಸಿದರು. ಪಟ್ಟಣದ ಡೂಮ್ ಲೈಟ್ ವೃತ್ತದ ಡಾ.ಶಿವಕುಮಾರ ಸ್ವಾಮೀಜಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಖಾಸಗಿ ಹಾಗೂ ವಯಕ್ತಿಕ 49 ಪ್ರಕರಣಗಳನ್ನು ವಿಚಾರಣೆ ನಡೆಸಲಾಯಿತು. ಅದರಲ್ಲಿ 42 ಪ್ರಕರಣಗಳನ್ನು ಸ್ಥಳದಲ್ಲೇ ಇತ್ಯರ್ಥಗೊಳಿಸಲಾಯಿತು. ವಿಚಾರಣೆಯ ತೀರ್ಮಾನದಲ್ಲಿ ಅಸಮಾಧಾನವಿರುವ ಕೆಲವು ಪ್ರಕರಣಗಳನ್ನು ಉಪವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು ಹಾಗೂ ಇತರೆ ನ್ಯಾಯಾಲಯದ ಮೊರೆ ಹೋಗಲು ಸಲಹೆ ನೀಡಲಾಯಿತು ಎಂದರು. ಪ್ರತಿಯೊಂದು ಪ್ರಕರಣದಲ್ಲೂ ನಾಲ್ಕರಿಂದ ಐದು ಜನ ವಿರುದ್ಧದವರು ಇದ್ದರು. ಮಾಗಡಿ ತಾಲ್ಲೂಕಿಗೆ ಸಂಬಂಧಿಸಿದ ಕೆರೆ, ರಸ್ತೆ ಒತ್ತುವರಿ, ಶಾಲಾ ಬಸ್ ಹಾಗೂ ಸಾರ್ವಜನಿಕರಿಗೆ ಸಂಬಂಧಿಸಿದ ಪ್ರಕರಣಗಳಿದ್ದು, ತನಿಖಾಧಿಕಾರಿಗಳ ವರದಿ ಇಲ್ಲದೆ ತೀರ್ಮಾನಿಸುವ ಅಸಾಧ್ಯ. ಹಾಗಾಗಿ ಪ್ರಕರಣವನ್ನು ತನಿಖೆಗೆ ಒಳಪಡಿಸಿ, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಪರಿಶೀಲನೆ ನಡೆಸಿ ಅವುಗಳ ವಿಚಾರಣೆ ಮಾಡಲಾಗುವುದು ಎಂದರು. ಸಮಾಜದಲ್ಲಿ ಶಾಶ್ವತವಾಗಿ ಉಳಿಯುವುದು ಉತ್ತಮವಾಗಿ ಮಾಡಿದ ಕೆಲಸ. ಹಾಗಾಗಿ ಸರ್ಕಾರಿ ಅಧಿಕಾರಿಗಳು, ನೌಕರರು ಸಾರ್ವಜನಿಕರಿಗೆ ಅನುಕೂಲವಾಗುವ ಕೆಲಸ ಮಾಡಿ ಅವರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಿ ಎಂದು ಕಿವಿಮಾತು ಹೇಳಿದರು.

ಪ್ರತಿ ಇಲಾಖೆಯಲ್ಲಿ ಸಿಗುವ ಸೌಲಭ್ಯವನ್ನು ಅಧಿಕಾರಿಗಳು ನೋಟಿಸ್ ಬೋರ್ಡ್‌ನಲ್ಲಿ ಹಾಕಬೇಕು. ಈ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ಸಿಇಒ ಗಮನಹರಿಸಬೇಕು. ಅಧಿಕಾರಿಗಳು ಜನತೆಗೆ ಉತ್ತಮ ಆಡಳಿತ ಒದಗಿಸಿದರೆ ಇಲಾಖೆಯ ಮೇಲೆ ಜನತೆಗೆ ನಂಬಿಕೆ ಬರುತ್ತದೆ. ಅಧಿಕಾರಿಗಳು ಕರ್ತವ್ಯದಲ್ಲಿ ಲೋಪ ಎಸಗದಂತೆ ಕಾರ್ಯ ನಿರ್ವಹಿಸಿ ಎಂದು ಸೂಚಿಸಿದರು. 1984ರಲ್ಲಿ ಲೋಕಾಯುಕ್ತ ಜಾರಿಗೆ ಬಂದಿದೆ. ಸಾರ್ವಜನಿಕರು ನಮಗೆ ದೂರು ಸಲ್ಲಿಸಿದರೆ ತನಿಖೆ ಕೈಗೊಂಡು ಕಾನೂನು ಕ್ರಮ ಕೈಗೊಳ್ಳುತ್ತೇವೆ. ನಾನು ರಾಜ್ಯದ ಉಪಲೋಕಾಯುಕ್ತರಾಗಿ ಕರ್ತವ್ಯಕ್ಕೆ ಸೇರಿದಾಗಿನಿಂದ 2,500 ಕ್ಕೂ ಹೆಚ್ಚು ಅರ್ಜಿಗಳು ಬಂದಿವೆ. ಅವುಗಳನ್ನು ತಾಲ್ಲೂಕು ಹಾಗೂ ಜಿಲ್ಲಾ ಹಂತದಲ್ಲಿ ಸಭೆ ನಡೆಸಿ ಬಗೆಹರಿಸುವ ಕೆಲಸ ಮಾಡಲಾಗುತ್ತಿದೆ' ಎಂದರು.




ಉದಯವಾಹಿನಿ ಚಿತ್ರ

# ಮುಸ್ಲಿಮರ ಮಕ್ಕಳಿಗೆ ತಿಂದು ಕೊಬ್ಬು, ಪಾಕಿಸ್ತಾನಕ್ಕೆ ಕಳುಹಿಸಿ: ಯತ್ನಾಳ್

## ● ಸಿದ್ದರಾಮಯ್ಯ ಸರ್ಕಾರ ಮುಸ್ಲಿಂ ರಕ್ಷಕರು, ಪ್ರಧಾನಿ ಮೋದಿಯಿರುವವರೆಗೂ ದೇಶಕ್ಕೆ ರಕ್ಷಣೆ: ಶಾಸಕ

• ಉದಯವಾಹಿನಿ, ಮೈಸೂರು

ಈ ದೇಶ ಉದ್ದಾರ ಆಗಬೇಕೆಂದರೆ ಭಾರತದಲ್ಲಿರುವ ಮುಸಲ್ಮಾನರನ್ನ ಪಾಕಿಸ್ತಾನಕ್ಕೆ ಕಳಿಸಬೇಕು ಮತ್ತು ಪಾಕಿಸ್ತಾನದಲ್ಲಿರುವ ಹಿಂದೂಗಳನ್ನು ಭಾರತಕ್ಕೆ ಕರೆತರಬೇಕು ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮೈಸೂರಿನಲ್ಲಿ ಮಾತನಾಡಿದರು. ಮೈಸೂರಿನಲ್ಲಿ ಹಿಂದೂ ಜಾಗೃತ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರಣಿ ವಿವಾದಾತ್ಮಕ ಹೇಳಿಕೆಗಳ ಮೂಲಕ ಮುಸ್ಲಿಂ ಸಮುದಾಯ, ರಾಜ್ಯ ಸರ್ಕಾರ, ಕೆಲವು ಮಠಾಧೀಶರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ದೆಹಲಿ ಬಾಂಬ್ ಸ್ಫೋಟ ಪ್ರಕರಣದ ಬಗ್ಗೆ ಮಾತನಾಡಿದ ಯತ್ನಾಳ್, ಹಿಂದೂಗಳು ಜಾಗೃತರಾಗಿ ಇರದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ. ದೆಹಲಿಯಲ್ಲಿ ಬಾಂಬ್ ಸ್ಫೋಟ ಮಾಡಿದವರು ಅವಿದ್ಯಾವಂತರಲ್ಲ, ಅವರೆಲ್ಲರೂ ವೈದ್ಯರು. ಮತಾಂಧತೆಯನ್ನು ಮೈಗೂಡಿಸಿಕೊಂಡಿದ್ದಾರೆ. ಆದರೆ, ಯಾವೊಬ್ಬ ಮುಸ್ಲಿಂ ನಾಯಕರೂ ಈ ಕೃತ್ಯವನ್ನು ಖಂಡಿಸುತ್ತಿಲ್ಲ. ನರೇಂದ್ರ ಮೋದಿ ಪ್ರಧಾನಿಯಾಗಿರುವುದರಿಂದ ದೇಶಕ್ಕೆ ರಕ್ಷಣೆ ಇದೆ ಎಂದು ಹೇಳಿದರು.

ಕರ್ನಾಟಕದಲ್ಲಿ ಭಯೋತ್ಪಾದಕರನ್ನು ರಕ್ಷಣೆ ಮಾಡುವ ಸರ್ಕಾರವಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮುಂದಿನ ಜನ್ಮದಲ್ಲಿ ಮುಸಲ್ಮಾನನಾಗಿ ಹುಟ್ಟುತ್ತೇನೆ ಎನ್ನುತ್ತಾರೆ. ಅವರ ಸುಪುತ್ರ, ನಮ್ಮ ತಂದೆ ಮಹಾರಾಜರಿಗಿಂತ ಹೆಚ್ಚು ಕೆಲಸ ಮಾಡಿದ್ದಾರೆ ಎನ್ನುತ್ತಾರೆ. ಆದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸರಿಸಾಟಿಯಾಗಿ ಯಾರೂ ಇಲ್ಲ ಎಂದು ಕಾಂಗ್ರೆಸ್ ಸರ್ಕಾರದ ವಿರುದ್ಧ ಯತ್ನಾಳ್ ಕಿಡಿಕಾರಿದರು.

**ಕರ್ನಾಟಕದಲ್ಲಿ ಪೊಲೀಸ್ ಇಲಾಖೆ ಗಟ್ಟಿಯಾಗ್ಬೇಕು:** ಮುಸ್ಲಿಂ ಮಕ್ಕಳಿಗೆ ತಿಂದು ಬಹಳ ಹೆಚ್ಚಾಗಿದೆ, ಈ ಸೂ... ಮಕ್ಕಳು ಸುಧಾರಣೆ ಆಗಲ್ಲ, ಇವರನ್ನು ಇಸ್ರೇಲ್ ಮಾದರಿಯಲ್ಲಿ ಇಡಬೇಕು. ಮದ್ದೂರಿನಲ್ಲಿ ಗಣಪತಿ ಮೆರವಣಿಗೆಗೆ ಕಲ್ಲು ಹೊಡೆಯುತ್ತಾರೆ, ನಾಗಮಂಗಲದಲ್ಲಿ ಪೆಟ್ರೋಲ್ ಬಾಂಬ್ ಹಾಕುತ್ತಾರೆ. ನಾನು ಸಿಎಂ ಆಗಿದ್ದರೆ ಮದ್ದೂರಿನ ಮಸೀದಿಯನ್ನೇ ಬಂದ್ ಮಾಡಿಸುತ್ತಿದ್ದೆ. ಪೊಲೀಸರ ಮೇಲೆ ಹಲ್ಲೆ ಮಾಡಿದವರಿಗೆ 'ಜನ್ನತ್'ಗೆ ಕಳುಹಿಸುತ್ತಿದ್ದೆ. ಉತ್ತರ ಪ್ರದೇಶದ ರೀತಿ ನಮ್ಮ ಪೊಲೀಸ್ ಇಲಾಖೆಯನ್ನು ಗಟ್ಟಿಗೊಳಿಸಬೇಕು, ಎಂದು ಯತ್ನಾಳ್ ಗುಡುಗಿದರು.

**2028 ಹಿಂದೂ ರಾಜ್ಯ:** ಎಂ.ಬಿ. ಪಾಟೀಲ್ ಮತ್ತೆ ಲಿಂಗಾಯತ ಧರ್ಮ ಒಡೆಯಲು ಹೊರಟಿದ್ದಾರೆ. ಬಸವಣ್ಣ ಹಿಂದೂ ಧರ್ಮವನ್ನು ಟೀಕಿಸಲಿಲ್ಲ, ಕೇವಲ ಮೂಢನಂಬಿಕೆಗಳನ್ನು ವಿರೋಧಿಸಿದರು. ಆದರೆ ಕೆಲವರು ಬಸವಣ್ಣನನ್ನು ನಕಲಿ ನಕ್ಸಲೈಟ್ ರೀತಿ ಬಿಂಬಿಸುತ್ತಿದ್ದಾರೆ, ಎಂದು ಆರೋಪಿಸಿದರು. 2028ರೊಳಗೆ ರಾಜ್ಯದಲ್ಲಿ ಹಿಂದೂಪರ ಸರ್ಕಾರ ತರಲು ಶ್ರಮಿಸೋಣ. ತ್ರಿವರ್ಣ ಧ್ವಜಕ್ಕಿಂತ ಸ್ವಲ್ಪ ಕೆಳಗೆ ಭಗವಾಧ್ವಜ ಹಾರಿಸುವ ಶಕ್ತಿ ಇರುವವರನ್ನು ಅಧಿಕಾರಕ್ಕೆ ತನ್ನಿ ಎಂದರು. ಆನಂತರ ಸಚಿವ ಜಮೀರ್ ಅಹ್ಮದ್ ಖಾನ್ 400 ಜನರಿಗೆ ಪಿಎಸ್‌ಐ ತರಬೇತಿ ಕೊಡಿಸಿದ್ದಾರೆ. ಆದರೆ ಹಿಂದುಳಿದ ವರ್ಗಗಳ ನಾಯಕ ಎನ್ನುವ ಸಿದ್ದರಾಮಯ್ಯ ಎಷ್ಟು ಜನ ಹಿಂದುಳಿದ, ದಲಿತ ನಿರುದ್ಯೋಗಿಗಳಿಗೆ ತರಬೇತಿ ಕೊಡಿಸಿದ್ದಾರೆ? ಎಂದು ಯತ್ನಾಳ್ ಹೇಳಿದರು.



ನಿಜಗುಣಾನಂದ ಎಂಬ ಸ್ವಾಮೀಜಿ, ವಿಭೂತಿಯನ್ನು ಹಸುವಿನ ಬೆರಣಿಯಿಂದ ಯಾಕೆ ಮಾಡಬೇಕು ಎನ್ನುತ್ತಾನೆ. ಅವನಿಗೆ ಹಂದಿ, ನಾಯಿಯಿಂದ ಮಾಡಿಸಿಕೋ ಎಂದು ಸಲಹೆ ಕೊಟ್ಟಿದ್ದೇನೆ. ಸಾಣೇಹಳ್ಳಿ ಸ್ವಾಮೀಜಿ, ನಿಜಗುಣಾನಂದ ಸ್ವಾಮೀಜಿಯಂತಹ ಲಂಪಟರು ಬಾಯಿಗೆ ಬಂದಂತೆ ಮಾತನಾಡುತ್ತಾರೆ. ಸನಾತನ ಧರ್ಮವನ್ನು ಗೌರವಿಸದ ಇಂತಹ ಸ್ವಾಮೀಜಿಗಳು ಕೇಸರಿ ಬಿಟ್ಟು ಹಸಿರು ವಸ್ತ್ರ ಹಾಕಿಕೊಳ್ಳಲಿ. ಇಂತಹ ಅಯೋಗ್ಯರ ಕಾಲಿಗೆ ಬೀಳಬೇಡಿ.

-ಬಸನಗೌಡ ಪಾಟೀಲ್ ಯತ್ನಾಳ್, ಶಾಸಕ

**ಅಡ್ಜಸ್ಟ್‌ಮೆಂಟ್ ರಾಜಕಾರಣವಿದೆ**

ಸಿದ್ದರಾಮಯ್ಯ, ಡಿಕೆಶಿವಕುಮಾರ್ ಬಗ್ಗೆ ವಿಜಯೇಂದ್ರ ಒಂದು ದಿನವೂ ಮಾತನಾಡಿಲ್ಲ. ಆರ್.ಸಿ. ಬಿ ಕಾಲ್ತುಳಿತ ಆದಾಗಲೂ ಮಾತನಾಡಿಲ್ಲ. ಹಿಂದೂ ವಿರೋಧಿ ಬಜೆಟ್ ಮಂಡಿಸಿದರು ಆಗಲೂ ಮಾತನಾಡಿಲ್ಲ. ಸಿದ್ದರಾಮಯ್ಯಗೆ ಹೊಗಳಿ ಧನ್ಯವಾದ ಹೇಳಿದರು. ಈ ರೀತಿಯ ವಿರೋಧ ಪಕ್ಷ ಯಾಕೆ ಬೇಕು ಅನ್ನೋದು ಜನರ ಅಭಿಪ್ರಾಯ. ಬಿಜೆಪಿ ನಾಯಕತ್ವ ಬದಲಾಗಬೇಕು ಸದಾನಂದ ಗೌಡರ ಸಲಹೆ ಪಡೆದ ಅಂತ ವಿಜಯೇಂದ್ರ ಹೇಳ್ತಾರೆ ಎಲ್ಲಾ ಸುಳ್ಳು ಇವ್ರು, ತಮ್ಮೇಗೌಡ, ಪ್ರೀತಮ್ ಗೌಡ, ರುದ್ರೇಶ್ ಇಂತವರ ಸಲಹೆ ಪಡೆಯುತ್ತಾರೆ ಅಷ್ಟೇ ಹೀಗಾಗಿ ಇಂತವರ ಬದಲಾವಣೆ ಆಗ್ಬೇಕು ಎಂದು ಮೈಸೂರಿನಲ್ಲಿ ಯತ್ನಾಳ್ ಹೇಳಿದರು.

ಅಂತರಾಳದಿಂದ... EDITORIAL

# ಕಾಶ್ಮೀರಿಗಳನ್ನು ಉಗ್ರರಿಗೆ ಒಪ್ಪಿಸದಿರೋಣ

ಈಗಾಗಲೇ ಹಲವರನ್ನು ಬಂಧಿಸಲಾಗಿದೆ. ಕೆಲವರನ್ನು ವಿಚಾರಣೆ ನಡೆಸಿದ ಎನ್‌ಐಎ ಬಳಿಕ ಬಿಡುಗಡೆಯನ್ನೂ ಮಾಡಿದೆ. ಆದರೆ ಮಾಧ್ಯಮಗಳು ತನಿಖೆ ಪೂರ್ತಿಯಾಗುವ ಮೊದಲೇ ಇಡೀ ಕಾಶ್ಮೀರಿಗಳನ್ನು ಸ್ಫೋಟಕ್ಕೆ ಹೊಣೆಗಾರರನ್ನಾಗಿ ಮಾಡಲು ಪ್ರಯತ್ನಿಸುತ್ತಿದೆ. ಊಹಾಪೋಹಗಳ ವರದಿಗಳನ್ನು ಹರಿಯ ಬಿಟ್ಟು ಒಂದು ನಿರ್ದಿಷ್ಟ ಪ್ರದೇಶದ, ನಿರ್ದಿಷ್ಟ ಸಮುದಾಯದ ಜನರನ್ನು ಅಪರಾಧಿಗಳನ್ನಾಗಿ ಘೋಷಿಸಿ ಅವರಿಗೆ ಶಿಕ್ಷೆ ನೀಡುವ ಪ್ರಯತ್ನ ನಡೆಸುತ್ತಿದೆ. ಇದರ ಪರಿಣಾಮವಾಗಿ, ಕಾಶ್ಮೀರದ ಹೊರಗೆ ವಿದ್ಯಾಭ್ಯಾಸ ನಡೆಸುತ್ತಿರುವ ಕಾಶ್ಮೀರಿಗಳನ್ನು ಅನುಮಾನದ



ಕಣ್ಣಿನಿಂದ ನೋಡಲಾಗುತ್ತಿದೆ ಮಾತ್ರವಲ್ಲ, ಅವರನ್ನು ಭಯೋತ್ಪಾದಕರಂತೆ ಚಿತ್ರಿಸುವ ಪ್ರಯತ್ನ ನಡೆಯುತ್ತಿದೆ. ಪರಿಣಾಮವಾಗಿ ಅವರ ಮೇಲೆ ಕೆಲವೆಡೆ ದಾಳಿಗಳೂ ನಡೆದಿವೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಉಮರ್ ಅಬ್ದುಲ್ಲಾ ಅವರು ಕೇಂದ್ರ ಗೃಹ ಸಚಿವರಿಗೆ ಮೇಲಿನ ಮನವಿಯನ್ನು ಮಾಡಿದ್ದಾರೆ.ಇಬ್ಬರು ಕಾಶ್ಮೀರಿ ವೈದ್ಯರ ಬಂಧನದ ಬಳಿಕ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಓದುತ್ತಿರುವ

ಕಾಶ್ಮೀರಿ ವೈದ್ಯರು ಆತಂಕದಿಂದ ದಿನ ಕಳೆಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಭದ್ರತೆಯ ಹೆಸರಿನಲ್ಲಿ ಕಿರುಕುಳ ನೀಡುವುದು, ತಾರತಮ್ಯ ಎಸಗುವುದು, ಅಪಮಾನಿಸುವುದು ದಿನ ನಿತ್ಯ ನಡೆಯುತ್ತಿವೆಎಂದು ಅವರು ಆರೋಪಿಸುತ್ತಿದ್ದಾರೆ. ಸ್ಥಳೀಯ ಅಂಗಡಿಗಳು ಅವರಿಗೆ ದಿನಸಿ ವಸ್ತುಗಳನ್ನೂ ನಿರಾಕರಿಸುತ್ತಿವೆ ಎಂದು ಕೆಲವು ವಿದ್ಯಾರ್ಥಿಗಳು ಮಾಧ್ಯಮಗಳ ಮುಂದೆ ಅಳಲು ತೋಡಿಕೊಂಡಿದ್ದಾರೆ. ಫರೀದಾಬಾದ್‌ನಲ್ಲಿ ಸ್ಥಳೀಯ ಪೊಲೀಸರು ಕಾಶ್ಮೀರಿ ವಿದ್ಯಾರ್ಥಿಗಳನ್ನೇ ಗುರಿಯಾಗಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಸುಮಾರು 2,000 ವಿದ್ಯಾರ್ಥಿಗಳಿಗೆ ಅವರು ತನಿಖೆಯ ಹೆಸರಿನಲ್ಲಿ ಕಿರುಕುಗಳನ್ನು ನೀಡಿದ್ದಾರೆ ಎನ್ನುವ ಆರೋಪ ಕೇಳಿ ಬಂದಿದೆ. ಇಂತಹ ಅವಮಾನ, ಹಿಂಸೆ, ದೌರ್ಜನ್ಯಗಳು ಕಾಶ್ಮೀರಿಗಳಿಗೆ ಹೊಸದೇನೂ ಅಲ್ಲ. ಕಾಶ್ಮೀರದಲ್ಲಿ ಉಗ್ರವಾದಿಗಳು ನಡೆಸುತ್ತಾ ಬರುವ ಎಲ್ಲಾ ಕೃತ್ಯಗಳ ಹೊಣೆಗಳನ್ನು ಇವರ ತಲೆಗೆ ಕಟ್ಟಿ ಅವರನ್ನು ನಾವು ಶಿಕ್ಷಿಸುತ್ತಾ ಬಂದಿದ್ದೇವೆ. ಇಷ್ಟಾದರೂ ಕಾಶ್ಮೀರಿಗಳು ಭಾರತದೊಂದಿಗೆ ಗುರುತಿಸುವುದಕ್ಕೆ ಇಷ್ಟ ಪಡುತ್ತಿದ್ದಾರೆ. ಕಳೆದ ಒಂದು ದಶಕದಲ್ಲಿ ಕಾಶ್ಮೀರಿಗಳನ್ನು ಭಾರತದ ವಿರುದ್ಧ ಎತ್ತಿಕಟ್ಟಲು ಉಗ್ರರು ಶತಪ್ರಯತ್ನ ನಡೆಸುತ್ತಾ ಬಂದಿದ್ದಾರೆ. ಆದರೆ ಕಾಶ್ಮೀರಿಗಳು ಆ ಪ್ರಯತ್ನವನ್ನು ವಿಫಲಗೊಳಿಸುತ್ತಲೇ ಬರುತ್ತಿದ್ದಾರೆ. ಒಂದೆಡೆ ಉಗ್ರವಾದಿಗಳ ಹಿಂಸಾಚಾರ, ಮಗದೊಂದೆಡೆ ಪೊಲೀಸರ, ಸೇನೆಯ ಅನುಮಾನದ ಕಣ್ಣುಗಳು. ಇವುಗಳ ನಡುವೆ ಕಾಶ್ಮೀರಿಗಳು ತಮ್ಮ ಭಾರತದ ಮೇಲಿನ ಪ್ರೇಮವನ್ನು ಸಾಬೀತುಪಡಿಸಬೇಕಾಗಿದೆ. ಕಾಶ್ಮೀರದ ಹೊರಗಡೆ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿರುವ ವಿದ್ಯಾರ್ಥಿಗಳು ಭಾರತ–ಕಾಶ್ಮೀರದ ನಡುವಿನ ಕೊಂಡಿಗಳಾಗಿದ್ದಾರೆ, ಸೇತುವೆಗಳಾಗಿದ್ದಾರೆ. ಅವರನ್ನು ಅನುಮಾನಿಸಿ ಅವರ ಮೇಲೆ ದಾಳಿ ನಡೆಸುವುದೆಂದರೆ ಆ ಸೇತುವೆಗಳನ್ನು ನಾವೇ ಧ್ವಂಸಗೊಳಿಸಿದಂತೆ.

**ದಿಲ್ಲಿ ಸ್ಫೋಟಕ್ಕೆ ಕಾರಣರಾಗಿರುವ ಎಲ್ಲರ ಮೇಲೂ ಕಠಿಣ ಕ್ರಮ ಕೈಗೊಳ್ಳಬೇಕು. ಆದರೆ ಇದರ ಹೆಸರಿನಲ್ಲಿ ಅಮಾಯಕ ನಾಗರಿಕರನ್ನು ಅನುಮಾನದಿಂದ ನೋಡುವುದನ್ನು ತಪ್ಪಿಸಬೇಕು. ಎಲ್ಲಾ ಕಾಶ್ಮೀರಿಗಳನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಅವರ ಮೇಲೆ ದೌರ್ಜನ್ಯವೆಸಗಬಾರದು ಹೀಗೆಂದು ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಉಮರ್ ಅಬ್ದುಲ್ಲಾ ಭಾರತ ಸರಕಾರಕ್ಕೆ ಮನವಿ ಮಾಡಿದ್ದಾರೆ. ನ. 10ರಂದು ದಿಲ್ಲಿಯಲ್ಲಿ ನಡೆದ ಸ್ಫೋಟದ ಬಳಿಕ ಇಬ್ಬರು ಕಾಶ್ಮೀರಿ ವೈದ್ಯರನ್ನು ಬಂಧಿಸಲಾಗಿದೆ. ಸ್ಫೋಟದಲ್ಲಿ ಕಾಶ್ಮೀರದಲ್ಲಿರುವ ಉಗ್ರರ ಕೈವಾಡಗಳನ್ನು ಶಂಕಿಸಲಾಗಿದ್ದು ಈ ದಿಕ್ಕಿನಲ್ಲಿ ತನಿಖೆ ನಡೆಯುತ್ತಿದೆ.**

ಪೆಹಲ್ಗಾಮ್ ದಾಳಿಯ ಸಂದರ್ಭವನ್ನೇ ತೆಗೆದುಕೊಳ್ಳೋಣ. ಭದ್ರತಾ ವೈಫಲ್ಯದ ಲಾಭ ಪಡೆದು ನಾಲ್ಕು ಮಂದಿ ಉಗ್ರರು ಭಾರತದ ಪ್ರವಾಸಿಗರ ಮೇಲೆ ಯದ್ವಾತದ್ವಾ ಗುಂಡಿನ ಸುರಿಮಳೆಗೈದರು. ಈ ಸಂದರ್ಭದಲ್ಲಿ ತಮ್ಮ ಜೀವವನ್ನು ಒತ್ತೆಯಿಟ್ಟು ಸ್ಥಳೀಯ ಕಾಶ್ಮೀರಿಗಳು ಪ್ರವಾಸಿಗರನ್ನು ರಕ್ಷಿಸಿದರು. ಉಗ್ರರ ವಿರುದ್ಧ ಹೋರಾಡುತ್ತಲೇ ಓರ್ವ ಕಾಶ್ಮೀರಿ ಹುತಾತ್ಮನಾದ. ಅಂದು ಸ್ಥಳೀಯ ಕಾಶ್ಮೀರಿಗಳು ಪ್ರವಾಸಿಗರ ನೆರವಿಗೆ ಧಾವಿಸದೇ ಇದ್ದರೆ ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚುತ್ತಿತ್ತು. ತಮ್ಮನ್ನು ರಕ್ಷಿಸಿದ ಕಾಶ್ಮೀರಿಗಳ ಬಗ್ಗೆ ಪ್ರವಾಸಿಗರೇ ಕೃತಜ್ಞತೆಯ ಮಾತುಗಳನ್ನಾಡಿದ್ದಾರೆ. ಘಟನೆ ನಡೆದ ಒಂದು ಗಂಟೆಯ ಬಳಿಕ ಭದ್ರತಾ ಸಿಬ್ಬಂದಿ ಆಗಮಿಸಿದರು.ಅಲ್ಲಿಯವರೆಗೆ ಪ್ರವಾಸಿಗರನ್ನು ಕಾಪಾಡಿದ್ದು, ಅವರಿಗೆ ಧೈರ್ಯ ಹೇಳಿದ್ದು ಸ್ಥಳೀಯ ಕಾಶ್ಮೀರಿಗಳಾಗಿದ್ದರು.

ಒಂದು ವೇಳೆ ಕಾಶ್ಮೀರಿಗಳೆಲ್ಲ ಉಗ್ರವಾದಿಗಳಾಗಿದ್ದರೆ ಇದು ಸಾಧ್ಯವಾಗುತ್ತಿತ್ತೆ? ಇಂದು ಕಾಶ್ಮೀರದಲ್ಲಿ ಉಗ್ರವಾದಿಗಳ ಸಂಖ್ಯೆ ಬೆರಳೆಣಿಕೆಯಷ್ಟೇ ಇದೆ. ಇವರಿಗೆ ಹೋಲಿಸಿದರೆ, ಭಾರತದ ಒಳಗೆ ಗೋವಿನ ಹೆಸರಿನಲ್ಲಿ, ಹಿಂದುತ್ವದ ಹೆಸರಿನಲ್ಲಿ ಜಾತಿಯ ಹೆಸರಿನಲ್ಲಿ ಹಿಂಸಾಚಾರಗಳನ್ನು ನಡೆಸುವ, ಕೊಲೆಗಳನ್ನು ಮಾಡುವ ಉಗ್ರವಾದಿಗಳ ದೊಡ್ಡ ಪಡೆಯೇ ಇದೆ. ಉತ್ತರ ಪ್ರದೇಶ ಇದಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಇಲ್ಲಿ ಅಲ್ಪಸಂಖ್ಯಾತರ ಮೇಲೆ ಹಿಂದುತ್ವದ ಹೆಸರಿನಲ್ಲಿ ಪದೇ ಪದೇ ದಾಳಿಗಳು ನಡೆಯುತ್ತಿವೆ. ಇಲ್ಲಿ ನಡೆಯುವ ಗುಂಪುದಾಳಿಗಳು ಕಾಶ್ಮೀರದಲ್ಲಿಯೂ ನಡೆಯುವುದಿಲ್ಲ. ಹಾಗೆಂದು ಇಡೀ ಉತ್ತರ ಪ್ರದೇಶದ ಜನರನ್ನೇ ನಾವು ಅನುಮಾನಾಸ್ಪದವಾಗಿ ನೋಡಲು ಸಾಧ್ಯವೆ? ಮಣಿಪುರದಲ್ಲಿ ಕುಕಿ ಬುಡಕಟ್ಟು ಸಮುದಾಯದ ಮೇಲೆ ಬರ್ಬರ ಹಿಂಸಾಚಾರಗಳನ್ನು ನಡೆಸಿದ ಉಗ್ರರು ಕಾಶ್ಮೀರಿಗಳೇನೂ ಅಲ್ಲ.

---



• ಉದಯವಾಹಿನಿ, ವಿಶೇಷ

## ಆಯುರ್ವೇದ ಡಾಕ್ಟರ್ ಏನಂತಾರೆ?

# ಗರ್ಭಿಣಿಯರು ನೆಲ್ಲಿಕಾಯಿ ಸೇವಿಸಬಹುದೇ?



ನೆಲ್ಲಿಕಾಯಿ ಒಂದು ಸೂಪರ್‌ಫುಡ್, ಆದರೆ ಗರ್ಭಾವಸ್ಥೆಯಲ್ಲಿ ಇದನ್ನು ಸೇವಿಸಬಹುದೇ? ಅದನ್ನು ಸೇವಿಸುವ ಸರಿಯಾದ ವಿಧಾನದ ಬಗ್ಗೆ ಆಯುರ್ವೇದ ವೈದ್ಯರಿಂದ ತಿಳಿದುಕೊಳ್ಳಿ. ಗರ್ಭಾವಸ್ಥೆಯಲ್ಲಿ ಮಹಿಳೆಯರು ತಮ್ಮ ಆಹಾರದ ಬಗ್ಗೆ ವಿಶೇಷ ಕಾಳಜಿ ವಹಿಸುವಂತೆ ಸೂಚಿಸಲಾಗುತ್ತದೆ. ಧಾನ್ಯಗಳು, ಒಣಗಿದ ಹಣ್ಣುಗಳು, ಬೀಜಗಳು, ಹಸಿರು ಎಲೆ ತರಕಾರಿಗಳು ಮತ್ತು ಹಣ್ಣುಗಳನ್ನು ತಮ್ಮ ಗರ್ಭಧಾರಣೆಯ ಆಹಾರದಲ್ಲಿ ಸೇರಿಸಿ. ಇದು ತಾಯಿ ಮತ್ತು ಮಗುವಿಗೆ ಹಲವಾರು ಆರೋಗ್ಯ ಪ್ರಯೋಜನಗಳನ್ನು ಒದಗಿಸುತ್ತದೆ. ಗರ್ಭಾವಸ್ಥೆಯಲ್ಲಿ ನೆಲ್ಲಿಕಾಯಿ ಸೇವಿಸುವುದು ಪ್ರಯೋಜನಕಾರಿಯೇ ಎಂದು ಆಯುರ್ವೇದ ವೈದ್ಯರಿಂದ ತಿಳಿದುಕೊಳ್ಳಿ. ಗರ್ಭಾವಸ್ಥೆಯಲ್ಲಿ ನೆಲ್ಲಿಕಾಯಿ ಸೇವಿಸಬೇಕೇ? ಸಾಧ್ಯವಾದರೆ, ಎಷ್ಟು ಮತ್ತು ಅದನ್ನು ಹೇಗೆ ಸೇವಿಸಬೇಕು.

**ಗರ್ಭಾವಸ್ಥೆಯಲ್ಲಿ ಡಯೆಟ್ ಬಗ್ಗೆ ಕಾಳಜಿ ಮುಖ್ಯ ಏಕೆ:** ಗರ್ಭಾವಸ್ಥೆಯಲ್ಲಿ ಮಹಿಳೆಯರು ತಮ್ಮ ಆಹಾರದ ಬಗ್ಗೆ ವಿಶೇಷ ಕಾಳಜಿ ವಹಿಸುವಂತೆ ವೈದ್ಯರು ಸಲಹೆ ನೀಡುತ್ತಾರೆ. ಮಹಿಳೆಯರು ತಮ್ಮ ಗರ್ಭಧಾರಣೆಯ ಸಮಯದಲ್ಲಿ ಧಾನ್ಯಗಳು, ಡ್ರೈ ಫ್ರೂಟ್‌ಗಳು, ಬೀಜಗಳು, ಹಸಿರು ಎಲೆ ತರಕಾರಿಗಳು ಮತ್ತು ಹಣ್ಣುಗಳನ್ನು ತಮ್ಮ ಡಯೆಟ್‌ನಲ್ಲಿ ಸೇರಿಸಿಕೊಳ್ಳಬೇಕು. ಇದು ತಾಯಿ ಮಗುವಿಗೆ ಹಲವಾರು ಆರೋಗ್ಯ ಪ್ರಯೋಜನಗಳನ್ನು ಒದಗಿಸುತ್ತದೆ.

**ಗರ್ಭಾವಸ್ಥೆಯಲ್ಲಿ ನೆಲ್ಲಿಕಾಯಿ ಸೇವಿಸುವುದು ಪ್ರಯೋಜನಕಾರಿಯೇ:** ನಾವು ಆಶಾ ಆಯುರ್ವೇದ ನಿರ್ದೇಶಕಿ ಮತ್ತು ಸ್ತ್ರೀರೋಗತಜ್ಞೆ ಡಾ. ಚಂಚಲ್ ಶರ್ಮಾ ಅವರ ಪ್ರಕಾರ, ಗರ್ಭಾವಸ್ಥೆಯಲ್ಲಿ ನೆಲ್ಲಿಕಾಯಿಯನ್ನು ಹಲವು ವಿಧಗಳಲ್ಲಿ ಸೇವಿಸಬಹುದು. ಗರ್ಭಾವಸ್ಥೆಯಲ್ಲಿ ನೆಲ್ಲಿಕಾಯಿ ತಿನ್ನುವುದು ಪ್ರಯೋಜನಕಾರಿ. ಇದನ್ನು ಹಲವು ವಿಧಗಳಲ್ಲಿ ಸೇವಿಸಬಹುದು, ಆದರೆ ನಿಮ್ಮ ವೈದ್ಯರ ಸಲಹೆಯಂತೆ ಸೀಮಿತ ಪ್ರಮಾಣದಲ್ಲಿ ಸೇವಿಸಿ. ಗರ್ಭಾವಸ್ಥೆಯಲ್ಲಿ ನೆಲ್ಲಿಕಾಯಿ ರಕ್ತಹೀನತೆಯನ್ನು ನಿವಾರಿಸಲು ಸಹಾಯ ಮಾಡುತ್ತದೆ. ಇದು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

**ಸಂಶೋಧನೆ ಏನು ಹೇಳುತ್ತದೆ:** ಇಂಟರ್ನ್ಯಾಷನಲ್ ಜರ್ನಲ್ ಆಫ್ ರಿಸರ್ಚ್ ಪ್ರಕಾರ, ಗರ್ಭಿಣಿ ಮಹಿಳೆಯರಿಗೆ ನೆಲ್ಲಿಕಾಯಿ ಅನೇಕ ಪ್ರಯೋಜನಗಳನ್ನು ಹೊಂದಿದೆ. ನೆಲ್ಲಿಕಾಯಿ ತಿನ್ನುವುದು ಮಲಬದ್ಧತೆಯನ್ನು ನಿವಾರಿಸಲು ಮತ್ತು ರಕ್ತದೊತ್ತಡವನ್ನು ನಿಯಂತ್ರಿಸಲು ರಕ್ತವನ್ನು ನಿರ್ವಿಷಗೊಳಿಸಲು, ಬೆಳಗಿನ ಬೇನೆಯನ್ನು ಕಡಿಮೆ ಮಾಡಲು ಮತ್ತು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು, ಜೀರ್ಣಕ್ರಿಯೆಯನ್ನು ಸುಧಾರಿಸಲು, ರಕ್ತಹೀನತೆಯನ್ನು ತಡೆಗಟ್ಟಲು ಗರ್ಭಾವಸ್ಥೆಯ ಮಧುಮೇಹವನ್ನು ತಡೆಯಲು ಸಹಾಯ ಮಾಡುತ್ತದೆ.

ಅತಿಯಾದ ಸೇವನೆಯು ಮಲಬದ್ಧತೆ, ಅತಿಸಾರ, ಮತ್ತು ಅಜೀರ್ಣ ಮತ್ತು ನಿರ್ಜಲೀಕರಣಕ್ಕೂ ಕಾರಣವಾಗಬಹುದು. ಆದ್ದರಿಂದ ನೆಲ್ಲಿಕಾಯಿಯನ್ನು ಸೀಮಿತ ಪ್ರಮಾಣದಲ್ಲಿ ಸೇವಿಸಬೇಕು.

**ಗರ್ಭಾವಸ್ಥೆಯಲ್ಲಿ ನೆಲ್ಲಿಕಾಯಿಯನ್ನು ಹೇಗೆ ಸೇವಿಸುವುದು:** ತಾಜಾ ನೆಲ್ಲಿಕಾಯಿಯನ್ನು ಸೇವಿಸಿ ಗರ್ಭಾವಸ್ಥೆಯಲ್ಲಿ ತಾಜಾ ನೆಲ್ಲಿಕಾಯಿಯನ್ನು ಸೇವಿಸಬಹುದು. ಇದು ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಮತ್ತು ನೈಸರ್ಗಿಕವಾಗಿ ರಕ್ತವನ್ನು ಶುದ್ಧೀಕರಿಸಲು ಸಹಾಯ ಮಾಡುತ್ತದೆ, ದೇಹದಿಂದ ವಿಷವನ್ನು ತೆಗೆದುಹಾಕುತ್ತದೆ.

**ಜ್ಯೂಸ್ ಕುಡಿಯಿರಿ** – ಗರ್ಭಾವಸ್ಥೆಯಲ್ಲಿ ನೆಲ್ಲಿಕಾಯಿಯನ್ನು ಜ್ಯೂಸ್ ಆಗಿಯೂ ಸೇವಿಸಬಹುದು, ಆದರೆ ನೀರಿನಲ್ಲಿ ಬೆರೆಸಿದ ನಂತರವೇ ನೆಲ್ಲಿಕಾಯಿ ರಸವನ್ನು ಕುಡಿಯಲು ಜಾಗರೂಕರಾಗಿರಿ.

**ನೆಲ್ಲಿಕಾಯಿ ಪುಡಿ** – ನೆಲ್ಲಿಕಾಯಿ ಪುಡಿಯನ್ನು ಗರ್ಭಾವಸ್ಥೆಯಲ್ಲಿ ನೀರಿನೊಂದಿಗೆ ಬೆರೆಸಿ ಸೇವಿಸಬಹುದು. ಇದು ಅನೇಕ ಆರೋಗ್ಯ ಪ್ರಯೋಜನಗಳನ್ನು ನೀಡುತ್ತದೆ. ನಿಮ್ಮ ವೈದ್ಯರ ಸಲಹೆಯ ಪ್ರಕಾರ ನೆಲ್ಲಿಕಾಯಿ ಪುಡಿಯನ್ನು ಸೇವಿಸಲು ಮರೆಯಬೇಡಿ.

**ನೆಲ್ಲಿಕಾಯಿ ಕ್ಯಾಂಡಿ** – ನೀವು ಗರ್ಭಾವಸ್ಥೆಯಲ್ಲಿ ನೆಲ್ಲಿಕಾಯಿಯನ್ನು ಸಹ ಸೇವಿಸಬಹುದು. ನಿಮಗೆ ಮಧುಮೇಹ ಅಥವಾ ಗರ್ಭಾವಸ್ಥೆಯ ಮಧುಮೇಹ ಇದ್ದರೆ, ಸಕ್ಕರೆ ರಹಿತ ನೆಲ್ಲಿಕಾಯಿ ಕ್ಯಾಂಡಿಯನ್ನು ಬಳಸಿ.

**ಮುನ್ನೆಚ್ಚರಿಕೆಗಳು** – ಗರ್ಭಾವಸ್ಥೆಯಲ್ಲಿ ನೆಲ್ಲಿಕಾಯಿ ಸೇವಿಸುವುದು ಆರೋಗ್ಯಕ್ಕೆ ಪ್ರಯೋಜನಕಾರಿ, ಆದರೆ ಇದನ್ನು ಸೀಮಿತ ಪ್ರಮಾಣದಲ್ಲಿ ಸೇವಿಸಿ ಮತ್ತು ನೆಲ್ಲಿಕಾಯಿ ಸೇವಿಸುವ ಮೊದಲು ನಿಮ್ಮ ವೈದ್ಯರನ್ನು ಸಂಪರ್ಕಿಸಿ.

---

# ಹೆಲ್ದಿ ತಿಂಡಿಗೆ ಮೆಂತೆ–ಪಾಲಕ್ ಬಳಸಿ



ಬೆಳಗಿನ ಉಪಾಹಾರ ಮತ್ತು ಲಂಚ್ ಬಾಕ್ಸ್‌ಗೆ ಸೂಪರ್ ಫಾಸ್ಟ್ ರೆಸಿಪಿ! ಮೆಂತೆ–ಪಾಲಕ್ ಬಳಸಿ ಝಟ್ ಪಟ್ ತಯಾರಾಗುವ ಈ ತಿಂಡಿ ಟ್ರೈ ಮಾಡಿ. ಹೌದು, ಪ್ರತಿದಿನ ಬೆಳಗ್ಗೆ ಆಫೀಸ್, ಮಕ್ಕಳ ಶಾಲೆ ಹಾಗೂ ಮನೆ ಕೆಲಸಗಳ ನಡುವೆ ಯಾವ ತಿಂಡಿ ಮಾಡಬೇಕು ಎಂಬ ಗೊಂದಲ ಸಾಮಾನ್ಯ. ಇಂತಹ ಸಂದರ್ಭದಲ್ಲಿ ತ್ವರಿತವಾಗಿ, ಆರೋಗ್ಯಕರವಾಗಿ ಮತ್ತು ರುಚಿಕರವಾದ ತಿನಿಸು ತಯಾರಿಸಲು ಮೆಂತೆ–ಪಾಲಕ್ ಚಿಲ್ಲಾ ಅತ್ಯುತ್ತಮ ಆಯ್ಕೆಯಾಗಿದೆ. ಸಮಯ ಕಡಿಮೆ ಇದ್ದಾಗ ಇದು ಪೌಷ್ಟಿಕ ಮತ್ತು ಸರಳ ರೆಸಿಪಿಯಾಗಿದೆ. ಚಳಿಗಾಲದಲ್ಲಿ ತಾಜಾ ಮೆಂತೆ (ಮೆಂತ್ಯ) ಮತ್ತು ಪಾಲಕ್ (ಪಾಲಾಕ್) ಸುಲಭವಾಗಿ ಮಾರುಕಟ್ಟೆಗಳಲ್ಲಿ ಲಭ್ಯವಿರುತ್ತದೆ. ಇದರಿಂದ, ಈ ಚಿಲ್ಲಾವನ್ನು ಕೆಲವೇ ನಿಮಿಷಗಳಲ್ಲಿ ಸಿದ್ಧಪಡಿಸಬಹುದು. ಇದು ಪೌಷ್ಟಿಕಾಂಶಗಳಿಂದ ಸಮೃದ್ಧವಾಗಿದ್ದು, ಬೆಳಗಿನ ಉಪಾಹಾರಕ್ಕೆ ಪರಿಪೂರ್ಣವಾದ ಖಾದ್ಯವಾಗಿದೆ.

ತಾಜಾ ಮತ್ತು ಅಗ್ಗದ ಬೆಲೆಯಲ್ಲಿ ದೊರೆಯುವ ಮೆಂತೆ ಹಾಗೂ ಪಾಲಕ್ ಸೊಪ್ಪು ಆರೋಗ್ಯಕ್ಕೆ ಹಲವು ಲಾಭಗಳನ್ನು ನೀಡುತ್ತವೆ.

ಈ ಎರಡೂ ಸೊಪ್ಪುಗಳು ಚಳಿಗಾಲದ ಆಹಾರ ಪದ್ಧತಿಗೆ ಸೂಕ್ತವಾಗಿವೆ. ಮೆಂತೆ ಮತ್ತು ಪಾಲಕ್ ಎರಡೂ ಸಸ್ಯಗಳಲ್ಲಿ ಕಬ್ಬಿಣಾಂಶ, ನಾರಿನಂಶ (ಫೈಬರ್), ವಿಟಮಿನ್ ಎ, ಸಿ, ಕೆ ಮತ್ತು ಆಂಟಿಆಕ್ಸಿಡೆಂಟ್‌ಗಳು ಹೇರಳವಾಗಿವೆ. ಇವು ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಾಯಕವಾಗಿವೆ. ಈ ಸೊಪ್ಪುಗಳ ಜೊತೆಗೆ ಬೇಳೆ ಹಿಟ್ಟು ಸೇರಿಸಿದರೆ, ಪ್ರೋಟೀನ್ ಅಂಶವೂ ಹೆಚ್ಚಾಗುತ್ತದೆ. ಇದು ದೇಹಕ್ಕೆ ಅಗತ್ಯ ಪೋಷಕಾಂಶಗಳನ್ನು ಒದಗಿಸುವ ಮೂಲಕ ಸಮತೋಲಿತ ಆಹಾರವನ್ನು ನೀಡುತ್ತದೆ.

**ಮೆಂತೆ–ಪಾಲಕ್ ಚಿಲ್ಲಾಗೆ ಬೇಕಾಗುವ ಸಾಮಗ್ರಿಗಳು**

- ಮೆಂತೆ ಸೊಪ್ಪು – 1 ಕಪ್
- ಪಾಲಕ್ ಸೊಪ್ಪು – 1 ಕಪ್
- ಕಡಲೆ ಹಿಟ್ಟು – 2 ಕಪ್
- ಈರುಳ್ಳಿ – 1
- ಟೊಮೆಟೊ – 1
- ಶುಂಠಿ – 1 ಚಮಚ
- ಬೆಳ್ಳುಳ್ಳಿ – 1 ಚಮಚ
- ಅಜವಾನ – ಅರ್ಧ ಚಮಚ
- ಕೊತ್ತಂಬರಿ ಸೊಪ್ಪು – 3 ಚಮಚ
- ಗರಂ ಮಸಾಲಾ – ಅರ್ಧ ಚಮಚ
- ಅರಿಶಿನ ಪುಡಿ – ಅರ್ಧ ಚಮಚ
- ಧನಿಯಾ ಪುಡಿ – ಅರ್ಧ ಚಮಚ
- ಕೆಂಪು ಮೆಣಸಿನ ಪುಡಿ – ಅರ್ಧ
- ಹಸಿ ಮೆಣಸಿನಕಾಯಿ – 1
- ಉಪ್ಪು – ರುಚಿಗೆ ತಕ್ಕಷ್ಟು
- ನೀರು – ಅಗತ್ಯಕ್ಕೆ ತಕ್ಕಷ್ಟು
- ಎಣ್ಣೆ – ಅಗತ್ಯಕ್ಕೆ ತಕ್ಕಷ್ಟು

**ಮೆಂತೆ–ಪಾಲಕ್ ಚಿಲ್ಲಾ ತಯಾರಿಸುವ ಸರಳ ವಿಧಾನ**

– ಮೊದಲು, ಮೆಂತೆ ಮತ್ತು ಪಾಲಕ್ ಸೊಪ್ಪುಗಳನ್ನು ಚೆನ್ನಾಗಿ ತೊಳೆಯಿರಿ. ಬಳಿಕ ಸಣ್ಣಗೆ ಹೆಚ್ಚಿಟ್ಟುಕೊಳ್ಳಿ. – ಒಂದು ದೊಡ್ಡ ಪಾತ್ರೆಯಲ್ಲಿ ಕಡಲೆ ಹಿಟ್ಟು, ಹೆಚ್ಚಿದ ಮೆಂತೆ ಮತ್ತು ಪಾಲಕ್ ಸೊಪ್ಪನ್ನು ಸೇರಿಸಿ. – ನಂತರ, ಕೆಂಪು ಮೆಣಸಿನ ಪುಡಿ, ಅಜವಾನ, ಅರಿಶಿನ ಪುಡಿ, ಗರಂ ಮಸಾಲಾ ಮತ್ತು ಧನಿಯಾ ಪುಡಿ ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ. – ಇದರ ಜೊತೆಗೆ ಸಣ್ಣಗೆ ಹೆಚ್ಚಿದ ಟೊಮೆಟೊ, ಬೆಳ್ಳುಳ್ಳಿ, ತುರಿದ ಶುಂಠಿ, ಹೆಚ್ಚಿದ ಈರುಳ್ಳಿ, ಹಸಿ ಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು ಮತ್ತು ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ. – ಈಗ, ಸ್ವಲ್ಪ ಸ್ವಲ್ಪ ನೀರನ್ನು ಸೇರಿಸುತ್ತಾ, ದೋಸೆ ಹಿಟ್ಟಿಗಿಂತ ಸ್ವಲ್ಪ ಗಟ್ಟಿಯಾದ ಚೀಲಾ ಮಿಶ್ರಣವನ್ನು ತಯಾರಿಸಿ. ಇದು ಗಂಟಿಲ್ಲದೆ ನಯವಾಗಿರಲಿ. – ಬಳಿಕ ದೋಸೆ ತವಾ ಅಥವಾ ಪ್ಯಾನ್ ಅನ್ನು ಬಿಸಿ ಮಾಡಿ. ಅದರ ಮೇಲೆ ಒಂದು ಚಮಚ ಎಣ್ಣೆಯನ್ನು ಹಾಕಿ. ನಂತರ ಒಂದು ದೊಡ್ಡ ಚಮಚ ಹಿಟ್ಟನ್ನು ಹಾಕಿ ದೋಸೆಯಂತೆ ಹರಡಿ. – ಚಿಲ್ಲಾದ ಅಂಚುಗಳಿಗೆ ಒಂದು ಚಮಚ ಎಣ್ಣೆ ಹಾಕಿ. ಒಂದು ಬದಿ ಬೆಂದ ನಂತರ, ಇನ್ನೊಂದು ಬದಿಗೆ ತಿರುಗಿಸಿ ಚೆನ್ನಾಗಿ ಬೇಯಿಸಿ. – ಇಷ್ಟು ಮಾಡಿದರೆ ಸಾಕು, ಆರೋಗ್ಯಕರ ಮತ್ತು ರುಚಿಕರವಾದ ಮೆಂತೆ–ಪಾಲಕ್ ಚಿಲ್ಲಾ ಸಿದ್ಧ. – ಇದನ್ನು ಚಟ್ನಿ, ಸಾಸ್ ಅಥವಾ ಮೊಸರಿನೊಂದಿಗೆ ಲಂಚ್ ಬಾಕ್ಸ್‌ಗೆ ಪ್ಯಾಕ್ ಮಾಡಬಹುದು. ಅಲ್ಲದೆ, ಬೆಳಗಿನ ಉಪಹಾರಕ್ಕೆ ಸೇವಿಸಬಹುದು.

---

# ಗೋಡಂಬಿ ಗೇರುಬೀಜದ ಉಪಯೋಗಗಳು

ನಾವು ಉಪಯೋಗಿಸುವ ಗೋಡಂಬಿ, ಗೇರುಹಣ್ಣಿಗೆ ಅಂಟಿಕೊಂಡಂತೆ ಇರುತ್ತದೆ. ಗೇರುಹಣ್ಣು ಹಳದಿ ಹಾಗೂ ಕೆಂಪು ಬಣ್ಣಗಳಲ್ಲಿ ಬಿಡುತ್ತದೆ. ಗೇರುಬೀಜ ಈ ಹಣ್ಣಿಗೆ ಅಂಟಿ–ಕೊಂಡಿರುತ್ತದೆ. ಈಗೇರಿನ ಒಳಗಡೆ ಇರುವುದು ಗೇರು ಸೊಪ್ಪು ಇದನ್ನೇ ನಾವು ಗೋಡಂಬಿ ಎಂದುಕರೆಯುವುದು. ಇದರ ಮರ, ಬೇರು, ತೊಗಟೆ, ಎಲೆ, ಹೂ, ಹಣ್ಣು, ಎಲ್ಲವೂ ಔಷಧೀಯವಾಗಿ ಬಳಕೆ–ಯಾಗುತ್ತದೆ. ಇದರ ಬೇರು ವಿರೇಚನಗುಣವುಳ್ಳದ್ದಾಗಿದ್ದು, ತೊಗಟೆಯಿಂದ ಬರುವ ಕೆಂಪುರಸವು ತುರಿಕೆಯನ್ನು ನಿಲ್ಲಿಸುವಶಕ್ತಿಯುಳ್ಳದ್ದಾಗಿದೆ. ಇದು ಹೆಚ್ಚು ಕ್ಯಾಲೋರೀಸ್‌ಗಳನ್ನು ಹೊಂದಿದ್ದು, ಒಳ್ಳೆಯ ಕೊಲೆಸ್ಟ್ರಾಲ್ ಅನ್ನು ಶರೀರಕ್ಕೆ ಒದಗಿಸುವುದಲ್ಲದೆ, ಬಿ 5, 6, –1 2 ಇದರಲ್ಲಿ ಹೇರಳವಾಗಿವೆ. ಇದುಔಷಧೀಯಗಳ ಭಂಡಾರವೇ ಆಗಿದೆ.

ಗೇರುಹಣ್ಣನ್ನು ಸೌವಿ ಸತ್ತಿದರೆ, ಜಂತುಹುಳುಗಳನ್ನು ನಿಯಂತ್ರಿಸಬಹುದು. ಚರ್ಮರೋಗ, ಹುಣ್ಣುಗಳು, ಮೂಲವ್ಯಾಧಿ, ಆಮಶಂಕೆ ಇವುಗಳ ನಿವಾರಣೆಗೇರುಹಣ್ಣಿನ ಸೇವನೆಯಿಂದ ಸಾಧ್ಯವಾಗುತ್ತದೆ. ಈ ಹಣ್ಣಿನಲ್ಲಿ ವಿಟಮಿನ್ ಸಿ ಅಧಿಕವಾಗಿದ್ದು, ವಿಟಮಿನ್ ಸಿ ಕೊರತೆಯಿಂದ ಬರುವಂತಹ ಸಮಸ್ಯೆಗಳಿಗೆ ಉತ್ತಮ ಪರಿಹಾರವಾಗುತ್ತದೆ.

ವಸಡಿನಲ್ಲಿ ಉಂಟಾಗುವ ಹುಣ್ಣುಗಳ ನಿವಾರಣೆಗೆ ಈ ಗೇರುಹಣ್ಣನ್ನು ಸಕ್ಕರೆಪಾಕದಲ್ಲಿ ಕುದಿಸಿತೆಗೆದಿಟ್ಟುಕೊಂಡುತಿನ್ನುತ್ತಾ ಬಂದರೆ, ವಸಡಿನ ಹುಣ್ಣು ಗುಣವಾಗುತ್ತದೆ.

**ಹೃದಯಕ್ಕೆ ಹಿತಕರ:** ಬೇರೆ ಬೀಜಗಳಿಗೆ ಹೋಲಿಸಿದರೆ ಇದರಲ್ಲಿ ಕೊಬ್ಬಿನ ಅಂಶ ಕಡಿಮೆ ಇದೆ.

ರಕ್ತದ ಒತ್ತಡಕ್ಕೆ ಮೆಗ್ನಿಷಿಯಂ ಅಧಿಕವಾಗಿರುವುದರಿಂದ ರಕ್ತದ ಒತ್ತಡವನ್ನು ಕಡಿಮೆ ಮಾಡುತ್ತದೆ.

**ಕಪ್ಪುಕೂದಲಿಗೆ:** ತಾಮ್ರದಅಂಶ ಇದರಲ್ಲಿ ಅಧಿಕವಾಗಿರುವುದರಿಂದ ಕೂದಲಿಗೆ ಕಪ್ಪು ಬಣ್ಣವನ್ನು ಒದಗಿಸುತ್ತದೆ.

**8.ಮೂಳೆಗಳಿಗೆ:** ಕ್ಯಾಲ್ಸಿಯಂ ಮತ್ತು ಮೆಗ್ನಿಷಿಯಂ ಅಧಿ ಕವಾಗಿರುವುದರಿಂದ ಇದರನಿರಂತರಸೇವನೆಯಿಂದ ಮೂಳೆಗಳು ಗಟ್ಟಿಯಾಗುತ್ತವೆ. ನರಮಂಡಲವನ್ನು ಜೋಪಾನ ಮಾಡುವುದರ ಮುಖಾಂತರ ರಕ್ತನಾಳಗಳನ್ನು ಹಾಗೂ ಮಾಂಸಖಂಡಗಳನ್ನು ಸುಸ್ಥಿತಿಯಲ್ಲಿಡುತ್ತದೆ.

**ಅರೆತಲೆನೋವಿಗೆ:** ಅರೆತಲೆನೋವಿಗೆ ಇದು ಬಹಳ ಉಪಯೋಗಕರ.

**ತೂಕ 10. ಕೊಬ್ಬಿನ ಅಂಶಕ್ಕೆ:** ಕೊಬ್ಬಿನ ಅಂಶ ಇದರಲ್ಲಿ ಕಡಿಮೆ ಇರುವುದರಿಂದ ಹೆಚ್ಚಾಗದಂತೆ ಕಾಪಾಡುತ್ತದೆ. ಇದರಲ್ಲಿ ಒಳ್ಳೆಯ ಕೊಲೆಸ್ಟ್ರಾಲ್ ಜಾಸ್ತಿಮಾಡಿ, ಕೆಟ್ಟಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡುವುದರಿಂದ ಹೃದಯಕ್ಕೂಸಹಒಳ್ಳೆಯದು. ಗೌರಮ್ಮನ ಆರೋಗ್ಯಸೂತ್ರಗಳು ಪ್ರಿಸ್ಟ್ ಬುಕ್ಸ್ ಪ್ರೈವೇಟ್ ಲಿಮಿಟೆಡ್‌ವತಿಯಿಂದ ಪ್ರಕಟಣೆ

2.ಡಾ.ಗೌರಿ ಸುಬ್ರಮಣ್ಯ, ಆಯುರ್ವೇದ ತಜ್ಞರು ಮತ್ತುಧರ್ಮದರ್ಶಿಗಳು ಮುಕ್ತಿನಾಗ ದೇವಸ್ಥಾನ.



---


# ನವೆಂಬರ್ 28ರಂದು ಉಡುಪಿಗೆ ಪ್ರಧಾನಿ ಮೋದಿ

## ಬರ್ತಾರಾ; ಬಿ.ವೈ. ವಿಜಯೇಂದ್ರ ಹೇಳಿದ್ದೇನು?

• ಉದಯವಾಹಿನಿ, ಬೆಂಗಳೂರು

ಪ್ರಧಾನ ಮಂತ್ರಿ, ನರೇಂದ್ರ ಮೋದಿ ಅವರು ಇದೇ ನವೆಂಬರ್ 28ರಂದು ಉಡುಪಿ ಮಠಕ್ಕೆ ಭೇಟಿ ಕೊಡುತ್ತಾರೆಂಬ ಮಾಹಿತಿ ನಮಗೂ ಬಂದಿದೆ. ಬಹುತೇಕ ಬರುವ ಮಾಹಿತಿ ಇದ್ದು, ನಮ್ಮೆಲ್ಲ ಶಾಸಕರು, ಸಂಸದರ ನೇತೃತ್ವದಲ್ಲಿ ಪೂರ್ವತಯಾರಿ, ಚರ್ಚೆ ನಡೆಸಿದ್ದೇನೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

ಪರ್ಯಾಯ ಶ್ರೀ ಪುತ್ತಿಗೆ ಮಠ ಶ್ರೀ ಕೃಷ್ಣ ಮಠದಲ್ಲಿ ನಡೆಯುತ್ತಿರುವ ಬೃಹತ್ ಗೀತೋತ್ಸವದ ಅಂಗವಾಗಿ ನ. 28ರಂದು ನಡೆಯುವ ಲಕ್ಷ ಕಂಠ ಗೀತಾ ಪಾರಾಯಣ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿಯವರು ಆಗಮಿಸಲಿದ್ದಾರೆ ಎನ್ನಲಾಗಿತ್ತು. ಈ ಹಿನ್ನೆಲೆಯಲ್ಲಿ ವಿಜಯೇಂದ್ರ ಪ್ರತಿಯಿಸಿದ್ದಾರೆ.



ಬಿಹಾರ ಚುನಾವಣೆ ಬಳಿಕ ರಾಹುಲ್ ಗಾಂಧಿ ಕಾಣೆ ಬಿಹಾರ ಚುನಾವಣಾ ಫಲಿತಾಂಶದ ನಂತರ ರಾಹುಲ್ ಗಾಂಧಿ ಕಾಣೆಯಾಗಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವ್ಯಂಗ್ಯವಾಡಿದ್ದಾರೆ. ಬಿಹಾರ ಚುನಾವಣೆ ವೇಳೆ ರಾಹುಲ್ ಗಾಂಧಿ ಅವರು ಮತಗಳ್ಳತನದ ಹೆಸರಿನಲ್ಲಿ ಮತ ಪಡೆಯುವ ಪ್ರಯತ್ನ ಮಾಡಿದರು. ಬಿಹಾರ ಫಲಿತಾಂಶದ ನಂತರದಲ್ಲಿ ರಾಹುಲ್ ಗಾಂಧಿ ಒಂದು ರೀತಿ ಕಾಣೆಯಾಗಿದ್ದಾರೆ. ಮತದಾರರು ಆಶೀರ್ವಾದ ಮಾಡುವ ಭ್ರಮೆಯಲ್ಲಿ ಅವರಿದ್ದರು. ಬಿಹಾರದ ಪ್ರಜ್ಞಾವಂತ ಮತದಾರರು ಕಾಂಗ್ರೆಸ್ಸಿಗೆ ಕಪಾಳಮೋಕ್ಷ ಮಾಡಿದ್ದಾರೆ. ಇನ್ನಾದರೂ ರಾಹುಲ್ ಗಾಂಧಿ ಅವರು ಎಚ್ಚೆತ್ತುಕೊಂಡು ವಿಪಕ್ಷದ ನೆಲೆಯಲ್ಲಿ ಜವಾಬ್ದಾರಿಯಿಂದ ಕೆಲಸ ಮಾಡಿದರೆ ಅವರ ದೃಷ್ಟಿಯಿಂದ ಒಳ್ಳೆಯದು ಎಂದು ತಿಳಿಸಿದರು.

---




## ಶ್ರೀರಾಮನು ಲಕ್ಷ್ಮಣನನ್ನು ಸಂಧಿಸಿದ್ದು

• ಹಿಂದಿನ ಸಂಚಿಕೆಯಿಂದ 120 ನೆಯ ಅಧ್ಯಾಯ

ಅದನ್ನು ಕೇಳಿ ಸೀತೆಯು ನನ್ನ ಧ್ವನಿಯೆಂದೆಣಿಸಿ ಕಂಗೆಟ್ಟು ಲಕ್ಷ್ಮಣನನ್ನು ಕಳುಹಿಸಿರಬೇಕು. ಆತನು ಸೀತಾದೇವಿಯನ್ನು ಒಂಟಿಯಾಗಿ ಬಿಟ್ಟು ಇಲ್ಲಿಗೆ ಹೊರಟಿರಬೇಕು. ಈ ಸಮಯದಲ್ಲಿ ರಾಕ್ಷಸರು ಸೀತಾದೇವಿಯನ್ನು ಕೊಂದಿರಬೇಕು. ಮಾರೀಚನು ಮಾಯಾಮೃಗರೂಪವಾಗಿ ನನ್ನ ಆಶ್ರಮದ ಮುಂದೆ ಸುಳಿದಾಡಿ ಸೀತಾದೇವಿಗೆ ಆಸೆಯನ್ನು ಹುಟ್ಟಿಸಿ ನನ್ನನ್ನು ಆಶ್ರಮದಿಂದ ಬಹುದೂರ ಕರೆದುಕೊಂಡು ಹೋದನು ಸೀತಾದೇವಿಯನ್ನು ಬಿಟ್ಟು ಬಂದ ಲಕ್ಷ್ಮಣನಿಗೆ ವನದಲ್ಲಿ ಏನಾಯಿತೋ ! ಸೀತೆಗೆ ಏನಾಯಿತೋ! ನಾನು ಜನಸ್ಥಾನದಲ್ಲಿ ಬಹುಮಂದಿ ರಾಕ್ಷಸರನ್ನು ಕೊಂದು ರಾಕ್ಷಸರೊಡನೆ ವಿರೋಧವನ್ನು ಕಟ್ಟಿಕೊಂಡೆನು. ಈಗ ಬಹಳ ದುರ್ನಿಮಿತ್ತಗಳು ಕಂಡುಬರುತ್ತಿವೆ ಎಂದು ಚಿಂತಿಸುತ್ತ ಜನಸ್ಥಾನಕ್ಕೆ ಹಿಂದಿರುಗುತ್ತಿದ್ದನು. ಆಗ ಅಲ್ಲಿದ್ದ ಮೃಗಪಕ್ಷಿಗಳು ಅವನ ವಾಮ ಭಾಗಕ್ಕೆ ಬಂದು ಭಯಂಕರವಾದ ಧ್ವನಿಯನ್ನು ಮಾಡಿದವು. ಆ ದುರ್ನಿಮಿತ್ರಗಳನ್ನು ಕಂಡು ಅತಿ ಚಿಂತಾಕ್ರಾಂತನಾಗಿ ಜನಸ್ಥಾನದಲ್ಲಿ ಸೀತಾದೇವಿಯನ್ನೂ ಲಕ್ಷ್ಮಣನನ್ನೂ ಯಾವಾಗ ಕಾಣುವೆನೋ ಎಂದು ವೇಗದಿಂದ ಬರುತ್ತಿದ್ದನು. ಆಗ ಎದುರಿಗೆ ಮುಖಕಾಂತಿಗುಂದಿ ಬರುತ್ತಿದ್ದ ಲಕ್ಷ್ಮಣನನ್ನು ಕಂಡನು. ಲಕ್ಷ್ಮಣನು ಶ್ರೀರಾಮನ ಸಮೀಪಕ್ಕೆ ಬಂದು ಆತನನ್ನು ನೋಡಿ ದುಃಖಪರವಶನಾಗಿ ಚಿಂತೆಗೀಡಾದನು. ಆಮೇಲೆ ಶ್ರೀರಾಮನು ಅನೇಕ ರಾಕ್ಷಸರಿರುವ ವನಮಧ್ಯದಲ್ಲಿ ಸೀತಾದೇವಿಯನ್ನು ಏಕಾಕಿಯಾಗಿ ಬಿಟ್ಟು ಬಂದ ಲಕ್ಷ್ಮಣನನ್ನು ಕಂಡು ಸಂಶಯಪಟ್ಟು ಆತನ ಎಡದ ಕೈಯನ್ನು ಹಿಡಿದುಕೊಂಡು ಹೀಗೆಂದನು: ಲಕ್ಷ್ಮಣ, ನೀನು ಸೀತೆಯನ್ನು ಬಿಟ್ಟು ಬಂದದ್ದು ಅಕೃತ್ಯವಾಯಿತು ಸೀತಾದೇವಿಯು ಸುಖದಲ್ಲಿದ್ದಾಳೋ ಇಲ್ಲವೋ ತಿಳಿಯದು. ಲಕ್ಷ್ಮಣ, ನನ್ನ ಮನಸ್ಸಿಗೆ ರಾಕ್ಷಸರು ಸೀತಾದೇವಿಯನ್ನು ಭಕ್ಷಣಮಾಡಿದ ಹಾಗೆ ತೋರುತ್ತದೆ. ಹಾಗಿಲ್ಲದಿದ್ದರೆ ಅವಳನ್ನು ಯಾರಾದರೂ ಎತ್ತಿಕೊಂಡು ಹೋಗಿರಬೇಕು. ನನಗೆ ಅಮಂಗಲಸೂಚಕವಾದ ದುರ್ನಿಮಿತ್ರಗಳಾದವು. ಲಕ್ಷ್ಮಣ, ಸೀತಾದೇವಿಯನ್ನು ಜೀವಸಹಿತವಾಗಿ ಕಾಣುವೆವೋ ಕಾಣೆವೋ ತಿಳಿಯದು. ಮೃಗಪಕ್ಷಿಗಳು ಭಯಂಕರವಾಗಿ ಧ್ವನಿಮಾಡುತ್ತಿವೆ ಮಾಯಾಮೃಗರೂಪನಾದ ಮಾರೀಚನು ನನಗೆ ಆಸೆಯನ್ನು ಹುಟ್ಟಿಸಿ ಬಹುದೂರ ಕರೆದುಕೊಂಡು ಹೋಗಿ ನನ್ನ ಶರಹತಿಯಿಂದ ಮೃತನಾದನು.

ನನಗೂ ಸಂಚಾರದಿಂದ ಬಹಳ ಆಯಾಸವುಂಟಾಗಿದೆ. ಇನ್ನು ನನ್ನ ಮನಸ್ಸಿಗೆ ಆತಂಕ ತಪ್ಪದು. ನನ್ನ ಎಡಗಣ್ಣು 'ಬಹಳ ಹಾರುತ್ತಿದೆ. ಸೀತಾದೇವಿಯು ಮೃತಳಾಗಿರಬೇಕು. ಇಲ್ಲವೆ, ಆಕೆಯನ್ನು ಯಾರಾದರೂ ಅಪಹರಿಸಿಕೊಂಡು ಹೋಗಿರಬೇಕು. ಅಥವಾ ಆಕೆಗೆ ಏನಾದರೂ ಉಪದ್ರವ ಸಂಭವಿಸಿರಬೇಕು ಎಂದು ಹೇಳಿದನು.

**ಮುಂದುವರಿಯುವುದು...**

---



• ಉದಯವಾಹಿನಿ, ವಿಶೇಷ

## ಸ್ಮರಣಾರ್ಥ–ವೃಕ್ಷಮಾತೆ

# ಸಾಲುಮರದ ತಿಮ್ಮಕ್ಕ

ಬದುಕು ಕೆಲವರನ್ನು ಪ್ರಸಿದ್ಧರನ್ನಾಗಿಸುತ್ತದೆ, ಆದರೆ ಕೆಲವರ ಬದುಕೇ ಪ್ರಕೃತಿಗೆ ಪುನರುಜ್ಜೀವನ ನೀಡುವ ಪ್ರಜ್ಞೆಯ ಜ್ಯೋತಿಯಾಗಿ ಉಳಿಯುತ್ತದೆ. ಸಾಲುಮರದ ತಿಮ್ಮಕ್ಕ, ಅಂತಹ ವಿರಳ ಜೀವಿಗಳಲ್ಲಿ ಒಬ್ಬರು ಬದುಕನ್ನು ಸರಳವಾಗಿ ಬಾಳಿದ್ದರೂ, ಭೂಮಿಗೆ ಹಸಿರು ಉಡುಗೊರೆಯನ್ನು ನೀಡಿದ ಒಬ್ಬ ಅದ್ಭುತ ಮನುಷ್ಯಿ. ಮರಗಳನ್ನು ತಮ್ಮ ಮಕ್ಕಳಂತೆ ನೋಡಿಕೊಂಡವರು, ಮಣ್ಣಿನ ಸುಗಂಧದಲ್ಲಿ ಜೀವನ ಹುಡುಕಿದವರು, ಯಾವುದೇ ಆರ್ಭಟವಿಲ್ಲದೇ, ಯಾವ ಬೇಡಿಕೆಯಿಲ್ಲದೇ ನಾಲ್ಕೂ ದಿಕ್ಕಿಗೆ ಹಸಿರು ಹರಡಿದ ವೃಕ್ಷಮಾತೆ ತಿಮ್ಮಕ್ಕ ಇಂದು ನಮ್ಮಲ್ಲಿಲ್ಲ. ಆದರೆ ಅವರು ನೆಟ್ಟ ಮರಗಳ ತೇಲುವ ನೆರಳು, ಗಾಳಿಯಲಿ ಆಗಾಗ ಸದ್ದು ಮಾಡೋ ಎಲೆಗಳ ನಾದ ಇವೆಲ್ಲವೂ ಅವರ ನೆನಪನ್ನು ಸದಾಕಾಲ ಜೀವಂತವಾಗಿಟ್ಟಿವೆ.

ಅವರ ಜೀವನವನ್ನು ಅಳೆಯಬೇಕಾದರೆ ಅದು ನಕ್ಷತ್ರಗಳ ಸಂಖ್ಯೆಯಿಂದಲ್ಲ, ನೆಟ್ಟ ಮರಗಳ ಸಂಖ್ಯೆಯಿಂದಲ್ಲ, ಅವಳು ಬದಲಿಸಿದ ಮನಸುಗಳ ಸಂಖ್ಯೆಯಿಂದ. ಗಮನಕ್ಕೆ ಬಾರದವರಾಗಿದ್ದರೂ, ಬಿರುಗಾಳಿಗಳ ನಡುವೆ ಉದ್ದಗಲವಾಗಿ ನಿಂತ ಆಲದ ಮರಗಳಂತೆ ತಮಗೆ ತನ್ನದೇ ಆದ ಸ್ಥಿರವಾದ ಸ್ಥಾನವನ್ನು ಕಟ್ಟಿಕೊಂಡವರು.

**ತಿಮ್ಮಕ್ಕ ಅವರು ನಮಗೆ ಕಲಿಸಿದ ಪಾಠ ಸರಳ:** ಮನುಷ್ಯನ ಬದುಕು ದೈವಿಕವಾಗಬೇಕೆಂದರೆ, ಅವನು ಮರಗಳನ್ನು ಕಾಪಾಡಬೇಕು ಮತ್ತು ಪ್ರಕೃತಿಗೆ ಸೇವೆ ಮಾಡಬೇಕು. ಅವರು ಬದುಕಿದ ದಾರಿ ಕಷ್ಟದದ್ದಾಗಿತ್ತು, ಆದರೆ ಅವರ ನಂಬಿಕೆ ಹಸಿರು ಗಿಡದ ನಂಟಿನಷ್ಟು ದೃಢವಾಗಿತ್ತು. ಓರ್ವಳ ಜೀವನ, ಒಬ್ಬಳ ಶ್ರಮ ಬೆಳೆಸಿದ ನೂರಾರು ಮರಗಳು ಇಂದು ಅವರ ಮೌನದ ಆತ್ಮಚರಿತ್ರೆಯ ಪುಟಗಳಂತೆ ನಿಂತಿವೆ. ತಿಮ್ಮಕ್ಕ ಅವರ ಅಂತಿಮ ನಗು ಮಣ್ಣಿನಲ್ಲಿ ಕಲಸದರೂ, ಅವರು ಕೊಟ್ಟ ಹಸಿರು ಸ್ಪರ್ಶ, ಅವರು ಹರಡಿದ ಪರಿಸರ ಪ್ರೇಮ,ಅವರು ಬಿತ್ತಿದ ಮಾನವೀಯತೆಯ ಮೌಲ್ಯ ಇವುಗಳ ಬೆಳಕು ಎಂದಿಗೂ ನಿಶ್ಶೇಷವಾಗುವುದಿಲ್ಲ. ಇಂದು ನಾವು ಅವರಿಗೆ ವಿದಾಯ ಹೇಳುವಾಗ ಆಕಾಶದತ್ತ ನೋಡುವ ಕನ್ನಡಿಗಳು ಕಣ್ಣೀರಿನಿಂದ ನನೆಸಿದರೂ, ಭೂಮಿಯಲ್ಲಿರುವ ಪ್ರತಿಯೊಂದು ಎಲೆಯೂ ಅವರ ಹೆಸರನ್ನು ಮೃದುವಾಗಿ ಜಪಿಸುತ್ತಿದೆ. ಪ್ರಕೃತಿಗೆ ತಾಯಿಯಂತೆ ಹಾಲುಣಿಸಿದ ತಿಮ್ಮಕ್ಕ, ನೀವು ಹೋಗಿದ ದಾರಿ ಮಹಾನ್. ನೀವು ಬಿಟ್ಟಿರುವ ಮಾನವೀಯತೆ ಇನ್ನೂ ಮಹಾನ್. ನಿಮ್ಮ ಸ್ಮರಣೆ ನಮ್ಮ ಪ್ರತಿಯೊಂದು ಸಸಿಯಲ್ಲೂ, ಪ್ರತಿಯೊಂದು ನೆರಳಲ್ಲೂ, ಪ್ರತಿಯೊಂದು ಉಸಿರಲ್ಲೂ ಬದುಕಿರಲಿದೆ. **ಶಾಂತಿಯಾಗಿರಿ, ತಾಯೀ ನಿಮ್ಮ ಹಸಿರು ಕನಸುಗಳು ಎಂದಿಗೂ ಒಣಗದಿರಲಿ.**



☛ ವಿಶ್ವಾಸ್.ಡಿ.ಗೌಡ

ನೇಪಾಳದಲ್ಲಿ ಮತ್ತೆ ಭುಗಿಲೆದ್ದ ದಂಗೆ; Gen Z – ಕಮ್ಯುನಿಸ್ಟ್ ಪಕ್ಷದ ಯುವಕರ ನಡುವೆ ಘರ್ಷಣೆ, ಕರ್ಫ್ಯೂ ಜಾರಿ

# ನೇಪಾಳದ ಹಂಗಾಮಿ ಪ್ರಧಾನಿ, ಜೆನ್ ಜೀ ನಡುವೆ ಘರ್ಷಣೆ



**ಕಾಠ್ಮಂಡು:** ನೇಪಾಳ- ಭಾರತದ ಗಡಿ ಭಾಗದಲ್ಲಿರುವ ಬಾರಾ ಜಿಲ್ಲೆಯಲ್ಲಿ 'ಜೆನ್ ಝೀ' ಯುವಕರು, ಕಮ್ಯುನಿಸ್ಟ್ ಪಕ್ಷದ ಯುವಕರ ನಡುವೆ ಘರ್ಷಣೆ ನಡೆದಿದ್ದು, ಮತ್ತೆ ದಂಗೆ ಭುಗಿಲೆದ್ದಿದೆ. ಇದರ ಪರಿಣಾಮ ಬಾರಾ ಜಿಲ್ಲೆಯಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಬಾರಾ ಜಿಲ್ಲೆಯ ಸೈಮರ ವಿಮಾನ ನಿಲ್ದಾಣದ ಬಳಿ ನೂರಾರು ಯುವಕರು ಸೇರಿದ್ದು, ಕಮ್ಯುನಿಸ್ಟ್ ಪಕ್ಷದ ವಿರುದ್ಧ ಘೋಷಣೆ ಕೂಗಿದ್ದಾರೆ. ಅದ್ದರಿಂದ ಈ ಪ್ರದೇಶದಲ್ಲಿ ಬುಧವಾರ ಮಧ್ಯಾಹ್ನ 12.30ರಿಂದ ಗುರುವಾರ ಸ್ಥಳೀಯ ಕಾಲಮಾನ ರಾತ್ರಿ 8 ಗಂಟೆಯವರೆಗೆ ಕರ್ಫ್ಯೂ ಜಾರಿಯಲ್ಲಿರುತ್ತದೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ. ಸಿಪಿಎನ್-ಯುಎಂಎಲ್ ಪ್ರಧಾನ ಕಾರ್ಯದರ್ಶಿ ಶಂಕರ್ ಪೋಖರೆಲ್ ಮತ್ತು ಪಕ್ಷದ ಯುವ ನಾಯಕ ಮಹೇಶ್ ಬಾಸ್ನೆಟ್ ಅವರನ್ನು ಹೊತ್ತ ಬುದ್ಧ ಏರ್ ವಿಮಾನವು ಕಠ್ಮಂಡುವಿನಿಂದ ಸೈಮಾರಗೆ ತೆರಳುತ್ತಿದ್ದಾಗ ಘರ್ಷಣೆ ಭುಗಿಲೆದ್ದಿದೆ. ಘರ್ಷಣೆಯಲ್ಲಿ ಹಲವು 'ಜೆನ್ ಝೀ' ಬೆಂಬಲಿಗರು ಗಾಯಗೊಂಡಿದ್ದಾರೆ. ಈ ಸಂಬಂಧ ಆರು ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರ ವಿರುದ್ಧ ದೂರು ದಾಖಲಿಸಲಾಗಿತ್ತು. ಆದರೆ, ಪೊಲೀಸರು ದೂರಿನಲ್ಲಿ ಹೆಸರಿಸಲಾದವ್ಯಕ್ತಿಗಳನ್ನು ಬಂಧಿಸಲು ವಿಫಲರಾಗಿದ್ದಾರೆ ಎಂದು ಆರೋಪಿಸಿ ಜೆನ್‌ಜೀ ಪ್ರತಿಭಟನಾಕಾರರು ಗುರುವಾರ ಮತ್ತೆ ಬೀದಿಗಿಳಿದಿದ್ದಾರೆ. ನಮ್ಮ ಬೇಡಿಕೆ ಇಷ್ಟೇ ನಮ್ಮ ಮೇಲೆ ಕ್ರೂರವಾಗಿ ದಾಳಿ ಮಾಡಿ ಏಳು ಜನರನ್ನು ಬಂಧಿಸಬೇಕು. ನಮ್ಮ ಬೇಡಿಕೆಗಳು ಈಡೇರುವವರೆಗೂ ಬಾರಾ ಬಂದ್ ಆಗಿಯೇ ಇರುತ್ತದೆ ಎಂದು 'ಜೆನ್ ಝೀ' ನಾಯಕ ಸಮ್ರಾಟ್ ಉಪಾಧ್ಯಾಯ್ ಪಟ್ಟು ಹಿಡಿದಿದ್ದಾರೆ.

**ಪ್ರತಿಭಟನಾಕಾರರ ಮೇಲೆ ಲಾಠಿ ಚಾರ್ಜ್:** ಸಿಮಾರಾ ವಿಮಾನ ನಿಲ್ದಾಣದ ಬಳಿ ಹಿಂಸಾಚಾರ ಹೆಚ್ಚಾಗಿದ್ದು, ಪ್ರತಿಭಟನಾಕಾರರನ್ನು ಚದುರಿಸಲು ಪೊಲೀಸರು ಅಶ್ರುವಾಯು ಪ್ರಯೋಗಿಸಿದರು. ಲಾಠಿ ಚಾರ್ಜ್ ಮಾಡಿದರು. ವಿಮಾನ ನಿಲ್ದಾಣದ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು.

**ಕಾರ್ಕಿ ಹೇಳಿದ್ದೇನು?:** ಅನಗತ್ಯ ರಾಜಕೀಯ ಪ್ರಚೋದನೆಯಿಂದ ದೂರವಿರಿ. 2026ರ ಮಾರ್ಚ್ 5 ರಂದು ನಿಗದಿಯಾಗಿರುವ ಚುನಾವಣೆವರೆಗೂ, ಪ್ರಜಾಪ್ರಭುತ್ವ ಆಡಳಿತದ ಮೇಲೆ ದಯವಿಟ್ಟು ನಂಬಿಕೆ ಇಡಿ. ಶಾಂತಿ ಕಾಪಾಡಿ. ಶಾಂತಿ, ಸುವ್ಯವಸ್ಥೆಯನ್ನು ಕಾಪಾಡಲು ಅತ್ಯಂತ ಸಂಯಮ, ಸಿದ್ಧತೆಯೊಂದಿಗೆ ಕೆಲಸ ಮಾಡುವಂತೆ ನಾನು ಗೃಹ ಇಲಾಖೆ, ಭದ್ರತಾ ಏಜೆನ್ಸಿಗಳಿಗೆ ನಿರ್ದೇಶಿಸಿದ್ದೇನೆ ಎಂದು ನೇಪಾಳದ ಹಂಗಾಮಿ ಪ್ರಧಾನಿ ಸುಶೀಲಾ ಕಾರ್ಕಿ ಹೇಳಿದ್ದಾರೆ. ನೇಪಾಳದಲ್ಲಿ ಪರಿಸ್ಥಿತಿ ಸಹಜವಾಗಿದೆ. ಯಾರೂ ಗಂಭೀರವಾಗಿ ಗಾಯಗೊಂಡಿಲ್ಲ ಎಂದು ನೇಪಾಳ ಪೊಲೀಸ್ ವಕ್ತಾರ ಅಬಿ ನಾರಾಯಣ್ ಕಫ್ಲೆ ವಿದೇಶಿ ಮಾಧ್ಯಮ ಸಂಸ್ಥೆಗಳ ಮುಂದೆ ಮಾತನಾಡಿದ್ದಾರೆ.

**ರಾಜಕೀಯ ಸಂಘರ್ಷ**

**ನೇಪಾಳದಲ್ಲಿ ಮತ್ತೊಮ್ಮೆ ರಾಜಕೀಯ ಸಂಘರ್ಷ ಜೋರಾಗಿದೆ. ದಂಗೆ ಬಳಿಕ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಬಾರಾ ಜಿಲ್ಲೆಯ ಹಲವು ಭಾಗಗಳಲ್ಲಿ ಕರ್ಫ್ಯೂ ಜಾರಿ ಮಾಡಲಾಗಿದೆ. ಯುವ ಪ್ರತಿಭಟನಾಕಾರರು ಮತ್ತು ಪದಚ್ಯುತಗೊಂಡ ಮಾಜಿ ಪ್ರಧಾನಿ ಕೆ.ಪಿ. ಶರ್ಮಾ ಓಲಿ ಅವರ ಪಕ್ಷದ ಬೆಂಬಲಿಗರ ನಡುವೆ ಹೊಸದಾಗಿ ಘರ್ಷಣೆ ನಡೆದಿದೆ.**

**ಏನಿದು ? ಜೆನ್ ಜೀ ದಂಗೆ?**


**ಕಳೆದ ಸೆಪ್ಟೆಂಬರ್ 8 ಮತ್ತು 9 ರಂದು, ಹಿಂದಿನ ಸರ್ಕಾರವು ಸಾಮಾಜಿಕ ಮಾಧ್ಯಮದ ಮೇಲೆ ವಿಧಿಸಿದ್ದ ಸಂಕ್ಷಿಪ್ತ ನಿಷೇಧದ ವಿರುದ್ಧ ಭುಗಿಲೆದ್ದ ಜೆನ್‌ಜಿ ದಂಗೆಯಲ್ಲಿ ಕನಿಷ್ಠ 76 ಜನರು ಸಾವನ್ನಪ್ಪಿದ್ದರು. ಸೋಶಿಯಲ್ ಮೀಡಿಯಾ ಬಳಕೆ ಮೇಲೆ ಹೇರಿದ್ದ ನಿಷೇಧ ಕ್ರಮವು ಕೇವಲ ಒಂದು ನೆಪವಾಗಿದ್ದರೂ, ವರ್ಷಗಳ ಆರ್ಥಿಕ ಹಿಂಜರಿತ ಮತ್ತು ಬೇರೂರಿದ ಭ್ರಷ್ಟಾಚಾರದಿಂದಾಗಿ ಯುವಕರು ಪ್ರತಿಭಟನೆ ನಡೆಸಿದರು. ಈ ದಂಗೆಯ ಸಮಯದಲ್ಲಿ ಸಂಸತ್ತು, ನ್ಯಾಯಾಲಯಗಳು ಮತ್ತು ಸರ್ಕಾರಿ ಕಚೇರಿಗಳಿಗೆ ಬೆಂಕಿ ಹಚ್ಚಲಾಗಿದ್ದು, ನಾಲ್ಕು ಬಾರಿ ಪ್ರಧಾನಿಯಾಗಿದ್ದ 73 ವರ್ಷದ ಓಲಿ ಅವರನ್ನು ಪದಚ್ಯುತಗೊಳಿಸಲಾಗಿತ್ತು. ನಂತರ, 73 ವರ್ಷದ ಸುಶೀಲಾ ಕಾರ್ಕಿ ಅವರನ್ನು ಪ್ರಧಾನಿಯಾಗಿ ನೇಮಿಸಲಾಯಿತು.**

**ಮಾರ್ಚ್ 5 ರಂದು ಸಾರ್ವತ್ರಿಕ ಚುನಾವಣೆ**

## ಭಾರತ, ಪಾಕ್ ಮೇಲೆ ಶೇ 350ರಷ್ಟು ಸುಂಕ ವಿಧಿಸುವುದಾಗಿ ಬೆದರಿಕೆ ಹಾಕಿದ್ದೆ: ಟ್ರಂಪ್

**ನ್ಯೂಯಾರ್ಕ್:** ಯುದ್ಧವನ್ನು ಕೊನೆಗೊಳಿಸದಿದ್ದರೆ ಶೇ 350ರಷ್ಟು ಸುಂಕ ವಿಧಿಸುವುದಾಗಿ ಭಾರತ ಹಾಗೂ ಪಾಕಿಸ್ತಾನದ ಮೇಲೆ ಬೆದರಿಕೆ ಹಾಕಿದ್ದೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಬಳಿಕ ನನಗೆ ಕರೆ ಮಾಡಿದ ಭಾರತ ಪ್ರಧಾನಿ ನರೇಂದ್ರ ಮೋದಿ ನಾವು ಯುದ್ಧವನ್ನು ಮುಂದುವರಿಸುವುದಿಲ್ಲ ಎಂದು ಹೇಳಿರುವುದಾಗಿ ಟ್ರಂಪ್ ತಿಳಿಸಿದ್ದಾರೆ. ಭಾರತ ಹಾಗೂ ಪಾಕಿಸ್ತಾನ ನಡುವೆ ಯುದ್ಧವನ್ನು ಕೊನೆಗೊಳಿಸಿರುವುದಾಗಿ 60ಕ್ಕೂ ಹೆಚ್ಚು ಬಾರಿ ಟ್ರಂಪ್ ನುಡಿದಿದ್ದಾರೆ. ಆದರೆ ಮೂರನೇ ದೇಶದ ಮಧ್ಯಪ್ರವೇಶವನ್ನು ಭಾರತ ನಿರಾಕರಿಸುತ್ತಲೇ ಬಂದಿದೆ. ವಿವಾದವನ್ನು ಇತ್ಯರ್ಥಗೊಳಿಸುವುದು ಹೇಗೆ ಎಂಬುದು ನನಗೆ ಗೊತ್ತಿದೆ. ಈ ಹಿಂದೆಯೂ ಅದನ್ನು ಮಾಡಿದ್ದೆ. ಪರಮಾಣು ಸಾಮರ್ಥ್ಯದ ಭಾರತ, ಪಾಕಿಸ್ತಾನ ಸಹ ಯುದ್ಧ ನಡೆಸಲು ಬಯಸಿದ್ದವು ಎಂದು ಹೇಳಿದ್ದಾರೆ.

ನೀವು ಯುದ್ಧವನ್ನು ಮುಂದುವರಿಸಬಹುದು. ಆದರೆ ಶೇ 350ರಷ್ಟು ಸುಂಕ ವಿಧಿಸುವುದಾಗಿ ಬೆದರಿಕೆ ಹಾಕಿದ್ದೆ. ಯುದ್ಧ ನಿಲ್ಲಿಸಿದರೆ ಮಾತ್ರ ವ್ಯಾಪಾರ ಒಪ್ಪಂದವನ್ನು ಮಾಡಿಕೊಳ್ಳುತ್ತೇವೆ ಎಂದು ಎಚ್ಚರಿಸಿದ್ದೆ ಎಂದಿದ್ದಾರೆ. ನಾನು ಮಾಡಿದ್ದನ್ನು ಬೇರೆ ಯಾವ ಅಧ್ಯಕ್ಷರಿಂದಲೂ ಮಾಡಲು ಸಾಧ್ಯವಿಲ್ಲ. ಯುದ್ಧಗಳನ್ನು ಕೊನೆಗೊಳಿಸಲು ಸುಂಕ ವಿಧಾನವನ್ನು ಬಳಸಿದ್ದೇನೆ. ಎಂಟರಲ್ಲಿ ಐದು ಯುದ್ಧಗಳು ಹಣಕಾಸು, ವ್ಯಾಪಾರ ಹಾಗೂ ಸುಂಕಗಳ ಕಾರಣದಿಂದಾಗಿಯೇ ಅಂತ್ಯಗೊಂಡಿವೆ ಎಂದು ಹೇಳಿದ್ದಾರೆ. ಲಕ್ಷಾಂತರ ಜನರ ಪ್ರಾಣಗಳನ್ನು ಉಳಿಸಿದ್ದಕ್ಕಾಗಿ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಶರೀಫ್ ಕರೆ ಮಾಡಿ ತನ್ನನ್ನು ಅಭಿನಂದಿಸಿರುವುದಾಗಿ ಹೇಳಿದ್ದಾರೆ. ನಂತರ ಪ್ರಧಾನಿ ಮೋದಿ ಕರೆ ಮಾಡಿ ನಾವು ಯುದ್ಧವನ್ನು ನಿಲ್ಲಿಸುತ್ತೇವೆ ಎಂದು ಹೇಳಿದರು. ಬಳಿಕ ಮೋದಿಗೆ ಧನ್ಯವಾದ ಹೇಳಿ ಒಪ್ಪಂದ ಮಾಡಿಕೊಳ್ಳೋಣ ಎಂದು ಹೇಳಿರುವುದಾಗಿ ಟ್ರಂಪ್ ತಿಳಿಸಿದ್ದಾರೆ. 26 ಪ್ರವಾಸಿಗರ ಸಾವಿಗೆ ಕಾರಣವಾದ ಪೆಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ ಮೇ 7ರಂದು ಆಪರೇಷನ್ ಸಿಂಧೂರ ಕಾರ್ಯಾಚರಣೆ ನಡೆಸಿದ್ದ ಭಾರತ, ಪಾಕಿಸ್ತಾನದಲ್ಲಿ ಉಗ್ರರ ನೆಲೆಗಳನ್ನು ಧ್ವಂಸಗೊಳಿಸಿತ್ತು. ಬಳಿಕ ಉಭಯ ದೇಶಗಳ ನಡುವೆ ಸಂಘರ್ಷ ತೀವ್ರಗೊಂಡಿತ್ತು. ಮೇ 10ರಂದು ನಡೆದ ಡಿಜಿಎಂಒಗಳ ಮಟ್ಟದ ಮಾತುಕತೆಯಲ್ಲಿ ಕದನ ವಿರಾಮ ಏರ್ಪಟ್ಟಿತ್ತು.



# ಭಾರತದ ಬತ್ತಳಿಕೆಗೆ ಅಮೆರಿಕ ಅಸ್ತ್ರ

## ಜಾವೆಲಿನ್ ಕ್ಷಿಪಣಿ, ಎಕ್ಸ್‌ಕ್ಯಾಲಿಬರ್ ಪ್ರೊಜೆಕ್ಟೈಲ್ ಪೂರೈಕೆಗೆ ಒಪ್ಪಂದ

**ಹೊಸದಿಲ್ಲಿ:** ಭಾರತದ ರಕ್ಷಣಾ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ, ಅಮೆರಿಕವು ಸುಮಾರು 93 ದಶಲಕ್ಷ ಡಾಲರ್ (ಅಂದಾಜು 825 ಕೋಟಿ ರೂ.)ಮೌಲ್ಯದ ಜಾವೆಲಿನ್ ಕ್ಷಿಪಣಿ ವ್ಯವಸ್ಥೆ, ಎಕ್ಸ್‌ಕ್ಯಾಲಿಬರ್ ಪ್ರೊಜೆಕ್ಟೈಲ್‌ಗಳ ಮಾರಾಟಕ್ಕೆ ಅನುಮೋದನೆ ನೀಡಿದೆ. ಅಮೆರಿಕದ ರಕ್ಷಣಾ ಭದ್ರತಾ ಸಹಕಾರ ಸಂಸ್ಥೆ (ಡಿಎಸ್‌ಸಿಎ) ಈ ಕುರಿತು ಪ್ರಕಟಣೆ ಹೊರಡಿಸಿದ್ದು, ಅಮೆರಿಕದ ಸಂಸತ್ತಿಗೆ (ಕಾಂಗ್ರೆಸ್)ಅಗತ್ಯವಿರುವ ಪ್ರಮಾಣೀಕರಣವನ್ನು ಸಲ್ಲಿಸಿದೆ ಎಂದು ತಿಳಿಸಿದೆ.

ಈ ಪ್ರಸ್ತಾವಿತ ಮಾರಾಟವು ಅಮೆರಿಕ ಮತ್ತು ಭಾರತದ ನಡುವಿನ ಆಯಕಟ್ಟಿನ ಪಾಲುದಾರಿಕೆಯನ್ನು ಬಲಪಡಿಸಲು ಸಹಾಯ ಮಾಡುತ್ತದೆ ಎಂದು ಡಿಸೆಸ್‌ಸಿಎ ಹೇಳಿದೆ. ಇದು ಇಂಡೋ-ಪೆಸಿಫಿಕ್ ಮತ್ತು ದಕ್ಷಿಣ ಏಷ್ಯಾ ವಲಯಗಳಲ್ಲಿ ರಾಜಕೀಯ ಸ್ಥಿರತೆ, ಶಾಂತಿ, ಆರ್ಥಿಕ ಪ್ರಗತಿಗೆ ಭಾರತ ನೀಡುತ್ತಿರುವ ಮಹತ್ವವನ್ನು ಎತ್ತಿ ತೋರಿಸುತ್ತದೆ. ಈ ಒಪ್ಪಂದದಿಂದ ಭಾರತವು ಪ್ರಸ್ತುತ, ಭವಿಷ್ಯದ ಬೆದರಿಕೆಗಳನ್ನು ಎದುರಿಸುವ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲಿದ್ದು, ದೇಶೀಯ ರಕ್ಷಣೆಯನ್ನು ಬಲಪಡಿಸಿಕೊಳ್ಳಲಿದೆ ಎಂದು ಸಂಸ್ಥೆ ವಿಶ್ವಾಸ ವ್ಯಕ್ತಪಡಿಸಿದೆ .

**ಜಾವೆಲಿನ್ ಕ್ಷಿಪಣಿ ವ್ಯವಸ್ಥೆ:** ಮೊದಲ ಪ್ಯಾಕೇಜ್‌ನ ಮೌಲ್ಯ 45.7 ದಶಲಕ್ಷ ಡಾಲರ್ ಆಗಿದೆ . ಇದು ಎಫ್‌ಜಿಎಂ-148 ಜಾವೆಲಿನ್ ಕ್ಷಿಪಣಿಗಳು, 25 ಜಾವೆಲಿನ್ ಲೈಟ್‌ವೇಟ್ ಕಮಾಂಡ್ ಲಾಂಚ್ ಯುನಿಟ್‌ಗಳು, ತರಬೇತಿ ಉಪಕರಣಗಳು, ಮಿಸ್ಸೈಲ್ ಸಿಮ್ಯುಲೇಶನ್ ರೌಂಡ್‌ಗಳು, ಇತರ ಸಂಬಂಧಿತ ಲಾಜಿಸ್ಟಿಕ್ಸ್ ಹಾಗೂ ತಾಂತ್ರಿಕ ಬೆಂಬಲವನ್ನು ಒಳಗೊಂಡಿದೆ .



- **ಭಾರತಕ್ಕೆ ಅಮೆರಿಕದಿಂದ 93 ದಶಲಕ್ಷ ಡಾಲರ್ ಮೌಲ್ಯದ ಸೇನಾ ಉಪಕರಣಗಳ ಮಾರಾಟಕ್ಕೆ ಅನುಮೋದನೆ**
- **ಒಪ್ಪಂದದಲ್ಲಿ ಜಾವೆಲಿನ್ ಟ್ಯಾಂಕ್ ನಿರೋಧಕ ಕ್ಷಿಪಣಿಗಳು ಮತ್ತು ಎಕ್ಸ್‌ಕ್ಯಾಲಿಬರ್ ಪ್ರೊಜೆಕ್ಟೈಲ್‌ಗಳು ಸೇರಿವೆ**
- **ಮೊದಲ ಪ್ಯಾಕೇಜ್‌ನಲ್ಲಿದೆ 45.7 ದಶಲಕ್ಷ ಡಾಲರ್ ಮೌಲ್ಯದ ಜಾವೆಲಿನ್ ವ್ಯವಸ್ಥೆ**
- **ಎರಡನೇ ಪ್ಯಾಕೇಜ್‌ನಲ್ಲಿ 47.1 ದಶಲಕ್ಷ ಡಾಲರ್ ಮೌಲ್ಯದ 216 ಎಕ್ಸ್‌ಕ್ಯಾಲಿಬರ್ ಪ್ರೊಜೆಕ್ಟೈಲ್ ಲಭ್ಯ**
- **ಈ ಒಪ್ಪಂದವು ಭಾರತದ ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸಲಿದ್ದು, ಪ್ರಾದೇಶಿಕ ಸ್ಥಿರತೆಗೆ ಸಹಕಾರಿ ಎಂದ ಅಮೆರಿಕ**


### ಪ್ರಾದೇಶಿಕ ಸಮತೋಲನದಲ್ಲಿ ಬದಲಾವಣೆ ಇಲ್ಲ

**ಈ ಉಪಕರಣಗಳು ಮತ್ತು ಬೆಂಬಲದ ಮಾರಾಟವು ಈ ವಲಯದಲ್ಲಿನ ಮೂಲಭೂತ ಮಿಲಿಟರಿ ಸಮತೋಲನವನ್ನು ಬದಲಾಯಿಸುವುದಿಲ್ಲ ಎಂದು ಡಿಎಸ್‌ಸಿಎ ಸ್ಪಷ್ಟಪಡಿಸಿದೆ ಅಲ್ಲದೆ, ಈ ಮಾರಾಟದಿಂದ ಅಮೆರಿಕದ ರಕ್ಷಣಾ ಸನ್ನದ್ಧತೆಯ ಮೇಲೆ ಯಾವುದೇ ಪ್ರತಿಕೂಲ ಪರಿಣಾಮ ಬೀರುವುದಿಲ್ಲ ಎಂದು ಸಂಸ್ಥೆ ತಿಳಿಸಿದೆ. ಭಾರತೀಯ ಸೇನೆಯು ಈ ಹೊಸ ಅಸ್ತ್ರಗಳನ್ನು ಮತ್ತು ಸೇವೆಗಳನ್ನು ತನ್ನ ಸಶಸ್ತ್ರ ಪಡೆಗಳಿಗೆ ಸೇರ್ಪಡೆಗೊಳಿಸಲು ಯಾವುದೇ ರೀತಿಯಲ್ಲೂ ಕಷ್ಟವಾಗುವುದಿಲ್ಲ ಎಂದು ಅಮೆರಿಕ ವಿಶ್ವಾಸ ವ್ಯಕ್ತಪಡಿಸಿದೆ.**

**ಎಕ್ಸ್‌ಕ್ಯಾಲಿಬರ್ ಪ್ರೊಜೆಕ್ಟೈಲ್‌ಗಳು:** ಎರಡನೇ ಪ್ಯಾಕೇಜ್ 47.1 ದಶಲಕ್ಷ ಡಾಲರ್ ಮೌಲ್ಯದ್ದಾಗಿದ್ದು, 216 ಎಂ 982 ಎ1 ಎಕ್ಸ್‌ಕ್ಯಾಲಿಬರ್ ಟ್ಯಾಕ್ಟಿಕಲ್ ಪ್ರೊಜೆಕ್ಟೈಲ್‌ಗಳನ್ನು ಪೂರೈಸಲು ಭಾರತ ಮನವಿ ಮಾಡಿತ್ತು . ಇದರ ಜೊತೆಗೆ ಪೋರ್ಟಬಲ್ ಎಲೆಕ್ಟ್ರಾನಿಕ್ ಫೈರ್ ಕಂಟ್ರೋಲ್ ಸಿಸ್ಟಮ್ಸ್, ಪ್ರೈಮರ್‌ಗಳು, ಪ್ರೊಪೆಲ್ಲಂಟ್ ಚಾರ್ಜ್‌ಗಳು ಮತ್ತು ತಾಂತ್ರಿಕ ನೆರವು ಕೂಡ ಸೇರಿವೆ.

## ಭಾರತೀಯ ನಿಯೋಗ ಭೇಟಿಯಾದ ಬ್ರೆಜಿಲ್ ಅಧ್ಯಕ್ಷ ಲೂಲಾ

**ಬೆಲೆಮ್:** ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲೂಲಾಡ ಸಿಲ್ವಾ ಯುಎನ್ ಸಿಒಪಿ 30 ಹವಾಮಾನ ಶೃಂಗಸಭೆಯಲ್ಲಿ ಪರಿಸರ ಸಚಿವ ಭೂಪೇಂದರ್ ಯಾದವ್ ನೇತೃತ್ವದ ಭಾರತೀಯ ನಿಯೋಗವನ್ನು ಭೇಟಿಯಾದರು ಮತ್ತು ಅಂತಿಮ ಮಾರ್ಗಸೂಚಿಯನ್ನು ರೂಪಿಸಲು ಸಮಾಲೋಚಕರು ತೀವ್ರವಾಗಿ ಚರ್ಚಿಸುತ್ತಿರುವ ನಿರ್ಣಾಯಕ ವಿಷಯಗಳ ಬಗ್ಗೆ ಚರ್ಚಿಸಿದರು. ಚರ್ಚೆಗೆ ತಿಳಿದಿರುವ ಮೂಲಗಳ ಪ್ರಕಾರ, ಎರಡೂ ಕಡೆಯವರು ಪಳೆಯುಳಿಕೆ ಇಂಧನದ ಸಂಭಾವ್ಯ ಮಾರ್ಗಸೂಚಿಯ ಬಗ್ಗೆ ಚರ್ಚಿಸಿದರು.



ನಡೆಯುತ್ತಿರುವ ಸಿಒಪಿ- 30 ಸಮಯದಲ್ಲಿ ಅಧ್ಯಕ್ಷರು ಈ ವಿಷಯವನ್ನು ಒತ್ತಾಯಿಸುತ್ತಿದ್ದಾರೆ. ಲೂಲಾ ಮತ್ತು ಯಾದವ್ ಮಧ್ಯಾಹ್ನ ಭೇಟಿಯಾಗಿ ಕೆಲವು ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಿದರು. ಅವರು ಪ್ರಾಥಮಿಕವಾಗಿ ಪಳೆಯುಳಿಕೆ ಇಂಧನ ವಿಷಯದ ಬಗ್ಗೆ ಮಾತನಾಡಿದರು ಮತ್ತು ಈ ಶೃಂಗಸಭೆಯಲ್ಲಿಯೇ ಮಾರ್ಗಸೂಚಿಯನ್ನು ತರಬಹುದೇ ಎಂದು ಪರಿಶೀಲಿಸಿದರು ಎಂದು ಬ್ರೆಜಿಲ್ ಕಡೆಯ ಮೂಲವೊಂದು ಪಿಟಿಐಗೆ ತಿಳಿಸಿದೆ. ಮುಚ್ಚಿದ ಬಾಗಿಲಿನ ಸಭೆ ಸುಮಾರು 20 ನಿಮಿಷಗಳ ಕಾಲ ನಡೆಯಿತು ಮತ್ತು ಮಾತುಕತೆಯ ಸಮಯದಲ್ಲಿ ಎರಡೂ ಕಡೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಕಾಪ್-30 ರಲ್ಲಿ ಭಾರತದ ಪ್ರಮುಖ ಸಮಾಲೋಚಕ ಅಮನ್‌ದೀಪ್ ಗರ್ಗ್ ಕೂಡ ಸಭೆಯಲ್ಲಿ ಉಪಸ್ಥಿತರಿದ್ದರು. ಭಾರತದ ಕಡೆಯ ಅಧಿಕಾರಿಯೊಬ್ಬರು, ಅವರು ಸುಮಾರು 15-20 ನಿಮಿಷಗಳ ಕಾಲ ಭೇಟಿಯಾಗಿ ಅನೇಕ ವಿಷಯಗಳ ಬಗ್ಗೆ ಚರ್ಚಿಸಿದರು ಎಂದು ಹೇಳಿದರು. ಆದಾಗ್ಯೂ, ಸಭೆಯಲ್ಲಿ ಇಬ್ಬರು ನಾಯಕರು ಏನು ಚರ್ಚಿಸಿದ್ದಾರೆ ಎಂಬುದನ್ನು ಅವರು ಬಹಿರಂಗಪಡಿಸಲಿಲ್ಲ, ಆದರೆ ಪಳೆಯುಳಿಕೆ ಇಂಧನಗಳ ಕುರಿತು ಸಂಭವನೀಯ ಮಾರ್ಗಸೂಚಿಯ ಬಗ್ಗೆ ಚರ್ಚಿಸಿದ್ದಾರೆ ಎಂದು ಸೂಚಿಸಿದರು.ಲುಲಾ ಸಮಾನ ಮನಸ್ಸಿನ ಅಭಿವೃದ್ಧಿಶೀಲ ರಾಷ್ಟ್ರಗಳ ಸದಸ್ಯರನ್ನು ಭೇಟಿಯಾಗಿ ಪಳೆಯುಳಿಕೆ ಇಂಧನಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ ಎಂದು ತಿಳಿದುಬಂದಿದೆ. ಈಗಾಗಲೇ, 80 ಕ್ಕೂ ಹೆಚ್ಚು ದೇಶಗಳು ಪಳೆಯುಳಿಕೆ ಇಂಧನಗಳನ್ನು ಹಂತಹಂತವಾಗಿ ಹೊರಹಾಕಲು ಮಾರ್ಗಸೂಚಿಗಾಗಿ ಕರೆ ನೀಡಿವೆ. ಪಳೆಯುಳಿಕೆ ಇಂಧನ ಮಾರ್ಗಸೂಚಿಯು ಇಲ್ಲಿ 30 ಹವಾಮಾನ ಶೃಂಗಸಭೆಯ ಔಪಚಾರಿಕ ಕಾರ್ಯಸೂಚಿಯಲ್ಲಿಲ್ಲದಿದ್ದರೂ, ಬ್ರೆಜಿಲ್ ಅಧ್ಯಕ್ಷರು ತಮ್ಮ ಆರಂಭಿಕ ಹೇಳಿಕೆಯಲ್ಲಿ ಅದರ ಬಗ್ಗೆ ಮಾತನಾಡಿದ ನಂತರ ಪ್ರಮುಖ ಪಕ್ಷಗಳು ಅದರ ಬಗ್ಗೆ ಮಾತನಾಡುತ್ತಿವೆ.

## ಅಲ್ ಫಲಾಹ್ ವಿವಿ ಸಂಸ್ಥಾಪಕನ ಮನೆ ಧ್ವಂಸಕ್ಕೆ ಅಂತಿಮ ನೋಟೀಸ್




**ಮಹೌ:** ಟೆರರ್ ಹಬ್ ಎಂದೇ ಗುರುತಿಸಿಕೊಂಡಿರುವ ಅಲ್ ಫಲಾಹ್ ವಿವಿ ಸಂಸ್ಥಾಪಕ ಮಹಮದ್ ಜವಾದ್ ಆಹದ್ ಸಿದ್ದಿಕಿ ಅವರ ಪೂರ್ವಜರ ಮನೆ ಧ್ವಂಸಕ್ಕೆ ನೋಟೀಸ್ ಜಾರಿ ಮಾಡಲಾಗಿದೆ.

ಮಧ್ಯಪ್ರದೇಶದ ಮಹೌ ಕಂಟೋನ್ಮೆಂಟ್ ಮಂಡಳಿಯು, ಅಲ್-ಫಲಾಹ್ ವಿಶ್ವವಿದ್ಯಾಲಯದ ಅಧ್ಯಕ್ಷ ಮೊಹಮ್ಮದ್ ಜವಾದ್ ಅಹ್ಮದ್ ಸಿದ್ದಿಕಿ ಅವರ ಕುಟುಂಬಕ್ಕೆ ಸೇರಿದ ಮುಖೇರಿ ಮೊಹಲ್ಲಾದಲ್ಲಿರುವ ಅವರ ಪೂರ್ವಜರ ಮನೆಯಲ್ಲಿ ಅಕ್ರಮ ನಿರ್ಮಾಣ ಕಾಮಗಾರಿ ಮಾಡಲಾಗಿದೆ ಎಂದು ಆರೋಪಿಸಿದ ಅಂತಿಮ ಧ್ವಂಸ ನೋಟಿಸ್ ಜಾರಿ ಮಾಡಿದೆ. ಮೂರು ದಿನಗಳಲ್ಲಿ ಅನಧಿಕೃತ ರಚನೆಯನ್ನು ತೆಗೆದುಹಾಕುವಂತೆ ಮನೆಯ ನಿವಾಸಿಗಳು ಮತ್ತು ಕಾನೂನುಬದ್ಧ ವಾರಸುದಾರರಿಗೆ ಮಂಡಳಿ ನಿರ್ದೇಶನ ನೀಡಿದೆ, ಇದನ್ನು ಪಾಲಿಸಲು ವಿಫಲವಾದರೆ ಮಾಲೀಕರ ವೆಚ್ಚದಲ್ಲಿ ಧ್ವಂಸಕ್ಕೆ ಕಾರಣವಾಗುತ್ತದೆ ಎಂದು ಎಚ್ಚರಿಸಿದೆ. ಕಟ್ಟಡದ ಮೇಲೆ ಪ್ರಮುಖವಾಗಿ ಅಂಟಿಸಲಾದ ನೋಟಿಸ್‌ನಲ್ಲಿ, ಮನೆ ಹಲವಾರು ವರ್ಷಗಳಿಂದ ಅನಧಿಕೃತ ವಿಸ್ತರಣೆಗಳನ್ನು ಹೊಂದಿದೆ.

ಉಲ್ಲಂಘನೆಗಳನ್ನು ತಕ್ಷಣವೇ ತೆರವುಗೊಳಿಸದಿದ್ದರೆ ಇಲಾಖೆಯು ಈಗ ಕ್ರಮ ಕೈಗೊಳ್ಳುತ್ತದೆ ಎಂದು ಹೇಳಲಾಗಿದೆ.

ಅಧಿಕೃತ ದಾಖಲೆಗಳ ಪ್ರಕಾರ, ಆಸ್ತಿಯ ವಿವಾದ ಸುಮಾರು ಮೂರು ದಶಕಗಳಷ್ಟು ಹಳೆಯದು. ಕಂಟೋನ್ಮೆಂಟ್ ಮಂಡಳಿಯು ಈ ಹಿಂದೆ ಅಕ್ಟೋಬರ್ 23, 1996 ರಂದು ನೋಟಿಸ್ ನೀಡಿತ್ತು, ನಂತರ ನವೆಂಬರ್ 2, 1996 ರಂದು ಕಂಟೋನ್ಮೆಂಟ್ಸ್ ಕಾಯ್ದೆ, 1924ರ ಸೆಕ್ಷನ್ 185ರ ಅಡಿಯಲ್ಲಿ ಮತ್ತು ಮಾರ್ಚ್ 27, 1997 ರಂದು ಅದೇ ಕಾಯ್ದೆಯ ಸೆಕ್ಷನ್ 256 ರ ಅಡಿಯಲ್ಲಿ ಮತ್ತೊಂದು ನೋಟಿಸ್ ನೀಡಿತ್ತು.

ವರ್ಷಗಳಲ್ಲಿ ಪುನರಾವರ್ತಿತ ನಿರ್ದೇಶನಗಳ ಹೊರತಾಗಿಯೂ, ಅನಧಿಕೃತ ನಿರ್ಮಾಣವನ್ನು ಎಂದಿಗೂ ತೆಗೆದುಹಾಕಲಾಗಿಲ್ಲ. ಸ್ಥಳೀಯವಾಗಿ ಮೌಲಾನಾ ಕಟ್ಟಡ ಎಂದು ಕರೆಯಲ್ಪಡುವ ನಾಲ್ಕು ಅಂತಸ್ತಿನ ರಚನೆಯು ಜವಾದ್ ಅವರ ತಂದೆ ದಿವಂಗತ ಮೊಹಮ್ಮದ್ ಹಮ್ಮದ್ ಸಿದ್ದಿಕಿ ಅವರಿಗೆ ಸೇರಿದ್ದು, 25 ಕ್ಕೂ ಹೆಚ್ಚು ಕಿಟಕಿಗಳು ಮತ್ತು ದೊಡ್ಡ ನೆಲಮಾಳಿಗೆಯನ್ನು ಹೊಂದಿದೆ.


1990 ರ ದಶಕದಲ್ಲಿ ನಿರ್ಮಿಸಲಾದ ಈ ಕಟ್ಟಡವು ಕಾಯಸ್ಥ ನೆರೆಹೊರೆಯ ಮೊಹೌದಲ್ಲಿ ಅತ್ಯಂತ ಗುರುತಿಸಬಹುದಾದ ರಚನೆಗಳಲ್ಲಿ ಒಂದಾಗಿದೆ. ಸಿದ್ದಿಕಿ ಕುಟುಂಬವು ಬಹು-ರಾಜ್ಯ ವಂಚನೆ ತನಿಖೆಯಲ್ಲಿ ಸಂವೇದನಾಶೀಲ ಬೆಳವಣಿಗೆಗಳ ನಂತರ ಈಗಾಗಲೇ ರಾಷ್ಟ್ರೀಯ ಪರಿಶೀಲನೆಗೆ ಒಳಪಟ್ಟಿರುವ ಸಮಯದಲ್ಲಿ ಕಂಟೋನ್ಮೆಂಟ್ ಮಂಡಳಿಯ ಇತ್ತೀಚಿನ ಕ್ರಮ ಬಂದಿದೆ.

**ಮಾಲೀಕರ ವೆಚ್ಚದಲ್ಲಿ ಧ್ವಂಸ**

## 2300 ಮಕ್ಕಳನ್ನು ರಕ್ಷಿಸಿದ ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗ

**ಇಟಾನಗರ:** ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಳೆದ ಆರು ತಿಂಗಳಲ್ಲಿ ದೇಶಾದ್ಯಂತ ಸುಮಾರು 26,000 ಪ್ರಕರಣಗಳನ್ನು ವಿಲೇವಾರಿ ಮಾಡಿ 2,300 ಕ್ಕೂ ಹೆಚ್ಚು ಮಕ್ಕಳನ್ನು ರಕ್ಷಿಸಿದೆ ಎಂದು ಹೇಳಿದೆ. ಬಾಲ ನ್ಯಾಯ, ಪೋಕ್ಸೊ ಮತ್ತು ಎನ್‌ಸಿಪಿಸಿಆರ್‌ನ ವಿಶೇಷ ಕೋಶಗಳ ವಿಭಾಗದ ಮುಖ್ಯಸ್ಥ ಪರೇಶ್ ಶಾ ಅವರು, ಮಕ್ಕಳ ಹಕ್ಕುಗಳ ಉಲ್ಲಂಘನೆಯು ಕೇವಲ ಅಂಕಿಅಂಶಗಳಲ್ಲ ಮತ್ತು ಪ್ರತಿಯೊಂದು ಪ್ರಕರಣವು ಮಗು ಮತ್ತು ಕುಟುಂಬದ ಕಥೆಯನ್ನು ಪ್ರತಿನಿಧಿಸುತ್ತದೆ ಎಂದು ಹೇಳಿದರು.

ಅಧಿಕಾರಿಗಳ ಪರಿಣಾಮಕಾರಿ ಕ್ರಮವು ಮಕ್ಕಳ ಜೀವನವನ್ನು ಮಾತ್ರವಲ್ಲದೆ ದೇಶದ ಭವಿಷ್ಯವನ್ನು ನಿರ್ಧರಿಸುತ್ತದೆ ಎಂದು ಅವರು ಹೇಳಿದರು. ಕೇಂದ್ರ, ರಾಜ್ಯ ಸರ್ಕಾರಗಳು ಅರುಣಾಚಲ ಪ್ರದೇಶದ ಪ್ರತಿಯೊಂದು ಮಗುವನ್ನು ರಕ್ಷಿಸಲು ಬದ್ಧವಾಗಿವೆ ಎಂದು ಶಾ ಹೇಳಿದರು, ಆದರೆ ಬಲವಾದ ಮೇಲ್ವಿಚಾರಣೆ, ಅರಿವು ಮತ್ತು ಸಂಘಟಿತ ಜಾರಿ ಇಲ್ಲದೆ ಬಲವಾದ ಕಾನೂನುಗಳು ಮಾತ್ರ ಸಾಕಾಗುವುದಿಲ್ಲ ಎಂದು ಒತ್ತಿ ಹೇಳಿದರು. ಇತ್ತೀಚೆಗೆ ಇಲ್ಲಿ ನಡೆದ ಪ್ರಮುಖ ಮಕ್ಕಳ ಹಕ್ಕುಗಳ



ಕಾನೂನುಗಳ ಅನುಷ್ಠಾನದಲ್ಲಿನ ಅಂತರಗಳು ಮತ್ತು ಸವಾಲುಗಳ ಕುರಿತು ರಾಜ್ಯಮಟ್ಟದ ಸಮ್ಮೇಳನದಲ್ಲಿ ಈ ಹೇಳಿಕೆ ಬಂದಿತು. ಮಕ್ಕಳ ಹಕ್ಕುಗಳ ಉಲ್ಲಂಘನೆ ಕೇವಲ ಅಂಕಿಅಂಶಗಳಲ್ಲ, ಪ್ರತಿಯೊಂದು ಪ್ರಕರಣವು ಒಂದು ಮಗು ಮತ್ತು ಒಂದು ಕುಟುಂಬದ ಕಥೆಯನ್ನು ಪ್ರತಿನಿಧಿಸುತ್ತದೆ.

ಅಧಿಕಾರಿಗಳ ಪರಿಣಾಮಕಾರಿ ಕ್ರಮವು ಮಕ್ಕಳ ಜೀವನವನ್ನು ಮಾತ್ರವಲ್ಲದೆ ದೇಶದ ಭವಿಷ್ಯವನ್ನೂ ನಿರ್ಧರಿಸುತ್ತದೆ ಎಂದು ಅವರು ಸಮ್ಮೇಳನದಲ್ಲಿ ಹೇಳಿದ್ದನ್ನು ಒಂದು ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ. ಕಳೆದ ಆರು ತಿಂಗಳಲ್ಲಿ ಆಯೋಗವು ಸುಮಾರು 26,000 ಪ್ರಕರಣಗಳನ್ನು ವಿಲೇವಾರಿ ಮಾಡಿದೆ, 2,300 ಕ್ಕೂ ಹೆಚ್ಚು ಮಕ್ಕಳನ್ನು ರಕ್ಷಿಸಿದೆ ಮತ್ತು 1,000 ಕ್ಕೂ ಹೆಚ್ಚು ಮಕ್ಕಳನ್ನು ಅವರ ತವರು ಜಿಲ್ಲೆಗಳಿಗೆ ವಾಪಸ್ ಕಳುಹಿಸಿದೆ ಎಂದು ಶಾ ತಿಳಿಸಿದರು.

## ಮಿನಿ ನ್ಯೂಸ್

### ಅನಿಲ್ ಅಂಬಾನಿಯ ಮತ್ತಷ್ಟು ಆಸ್ತಿ ಮುಟ್ಟುಗೋಲು

**ನವದೆಹಲಿ:** ರಿಲಯನ್ಸ್ ಗ್ರೂಪ್ ಅಧ್ಯಕ್ಷ ಅನಿಲ್ ಅಂಬಾನಿ ಅವರಿಗೆ ಸೇರಿದ ಮತ್ತಷ್ಟು ಆಸ್ತಿಗಳನ್ನು ಇಡಿ ಮುಟ್ಟುಗೋಲು ಹಾಕಿಕೊಂಡಿದೆ. ಅಂಬಾನಿ, ಅವರ ಕಂಪನಿಗಳಿಗೆ ಸಂಬಂಧಿಸಿದ ಹಣ ವರ್ಗಾವಣೆ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯ (ಇಡಿ) ಕೋಟ್ಯಂತರ ರೂಪಾಯಿ ಮೌಲ್ಯದ ಹೊಸ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಈ ಪ್ರಕರಣದಲ್ಲಿ ಫೆಡರಲ್ ತನಿಖಾ ಸಂಸ್ಥೆ ಈ ಹಿಂದೆ 7,500 ಕೋಟಿ ರೂ. ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿತ್ತು.ದೇಶದ ವಿವಿಧ ಭಾಗಗಳಲ್ಲಿರುವ ಆಸ್ತಿಗಳಿಗೆ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್ಎ) ಅಡಿಯಲ್ಲಿ ಇತ್ತೀಚಿನ ತಾತ್ಕಾಲಿಕ ಮುಟ್ಟುಗೋಲು ಆದೇಶವನ್ನು ಹೊರಡಿಸಲಾಗಿದೆ. ಇತ್ತೀಚಿನ ಆದೇಶದ ಭಾಗವಾಗಿ 1,400 ಕೋಟಿ ರೂ.ಗಳಗೂ ಹೆಚ್ಚು ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಅಂದಾಜಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

### ಜಿ20 ಶೃಂಗಸಭೆ : ಇಂದು ದಕ್ಷಿಣ ಆಫ್ರಿಕಾಗೆ ತೆರಳಲಿದ್ದಾರೆ ಮೋದಿ

**ನವದೆಹಲಿ:** ಇಂದಿನಿಂದ ನ.23 ರವರೆಗೆ ಜೋಹಾನ್ಸ್ ಬರ್ಗ್‌ನಲ್ಲಿ ನಡೆಯಲಿರುವ ಜಿ20 ನಾಯಕರ ಶೃಂಗಸಭೆಯಲ್ಲಿ ಭಾಗಿಯಾಗಲು ಪ್ರಧಾನಿ ನರೇಂದ್ರ ಮೋದಿ ಇಂದಿನಿಂದ ಮೂರು ದಿನಗಳ ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಳ್ಳಲಿದ್ದಾರೆ. ಶೃಂಗದಲ್ಲಿ ಸಮಗ್ರ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆ, ವಿಪತ್ತು ಅಪಾಯ ಕಡಿತದಲ್ಲಿ ಜಿ20 ಕೊಡುಗೆ, ಹವಾಮಾನ ಬದಲಾವಣೆ ಮತ್ತು ನಿರ್ಣಾಯಕ ಖನಿಜಗಳು, ಕೃತಕ ಬುದ್ಧಿಮತ್ತೆಯ ಕುರಿತು ನಡೆಯುವ ಈ ಶೃಂಗಸಭೆಯ ಮೂರು ಅಧಿವೇಶನಗಳಲ್ಲಿ ಪ್ರಧಾನಿ ಮೋದಿ ಮಾತನಾಡುವ ನಿರೀಕ್ಷೆಯಿದೆ. ಕೆಲವು ನಾಯಕರೊಂದಿಗೆ ಪ್ರಧಾನಿ ದ್ವಿಪಕ್ಷೀಯ ಸಭೆಗಳನ್ನು ನಡೆಸುವ ಸಾಧ್ಯತೆ. ದಕ್ಷಿಣ ಆಫ್ರಿಕಾ ತನ್ನ ಬಿಳಿ ಅಲ್ಪಸಂಖ್ಯಾತ ರೈತರ ವಿರುದ್ಧ ತಾರತಮ್ಯ ಮಾಡುತ್ತಿದೆ ಎಂದು ಆರೋಪಿಸಿ, ಅಮೆರಿಕ ಶೃಂಗಸಭೆಯನ್ನು ಬಹಿಷ್ಕರಿಸುವುದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಈ ಹಿನ್ನೆಲೆಯಲ್ಲೇ, ಪ್ರಧಾನಿ ನರೇಂದ್ರ ಮೋದಿ ದಕ್ಷಿಣ ಆಫ್ರಿಕಾ ಆಯೋಜಿಸುತ್ತಿರುವ 20ನೇ ಜಿ20 ನಾಯಕರ ಶೃಂಗಸಭೆಯಲ್ಲಿ ಭಾಗವಹಿಸುತ್ತಿದ್ದಾರೆ.

ಸೆಪ್ಟೆಂಬರ್‌ನಲ್ಲಿ ನವದೆಹಲಿಯಲ್ಲಿ ಭಾರತೀಯ ಅಧಿಕಾರಿಗಳೊಂದಿಗೆ ಅಮೆರಿಕದ ಸಹಾಯಕ ವ್ಯಾಪಾರ ಪ್ರತಿನಿಧಿ ಬ್ರೆಂಡನ್ ಲಿಂಚ್ ಮಾತುಕತೆ ನಡೆಸಿದ ನಂತರ ವ್ಯಾಪಾರ ಒಪ್ಪಂದದ ಕುರಿತು ಚರ್ಚೆಗಳು ಪುನರ್ ಆರಂಭಗೊಂಡವು. ಜೈಶಂಕರ್ ಮತ್ತು ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರ ಇತ್ತೀಚಿನ ಅಮೆರಿಕ ಭೇಟಿಗಳಲ್ಲಿಯೂ ವ್ಯಾಪಾರ ಚರ್ಚೆಗಳು ನಡೆದಿವೆ.ದಕ್ಷಿಣ ಆಫ್ರಿಕಾ 2024ರ ಡಿಸೆಂಬರ್ 1ರಿಂದ ಈ ವರ್ಷದ ನವೆಂಬರ್ ವರೆಗೆ 20 ಅಧ್ಯಕ್ಷತೆಯನ್ನು ವಹಿಸಿಕೊಂಡಿತ್ತು.ಅಧ್ಯಕ್ಷ ಸಿರಿಲ್ ರಾಮಾಫೋಸಾ ಈ ಹಿಂದೆ ಅಮೆರಿಕದ ಬಹಿಷ್ಕಾರವು ತಮಗೆ ನಷ್ಟವುಂಟು ಮಾಡಿದೆ ಎಂದು ಹೇಳಿಕೆ ನೀಡಿದ್ದರು.

### ಗಾಜಾ-ಖಾನ್ ಯೂನಿಸ್ ಮೇಲೆ ಇಸ್ರೇಲ್ ದಾಳಿ: 25 ಮಂದಿ ಸಾವು

**ಗಾಜಾಪಟ್ಟಿ:** ಗಾಜಾದ ವಿವಿಧ ಪ್ರದೇಶಗಳು ಸೇರಿದಂತೆ ಖಾನ್ ಯೂನಿಸ್ ಮೇಲೆ ಇಸ್ರೇಲ್ ಪಡೆಗಳು ನಡೆಸಿದ ದಾಳಿಯಿಂದಾಗಿ 25 ಪ್ಯಾಲೆಸ್ಟೀನಿಯರು ಮೃತಪಟ್ಟಿದ್ದು, 77 ಮಂದಿ ಗಾಯಗೊಂಡಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಇಸ್ರೇಲ್ ಪಡೆಗಳು ದಕ್ಷಿಣ ಲೆಬನಾನ್‌ನಲ್ಲಿರುವ ಪ್ಯಾಲೆಸ್ಟೀನ್ ನಿರಾಶ್ರಿತರ ಶಿಬಿರದ ಮೇಲೆ ವಾಯು ದಾಳಿ ನಡೆಸಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಅಮೆರಿಕ ಮಧ್ಯಸ್ಥಿಕೆಯ ಕದನ ವಿರಾಮವನ್ನು ಉಲ್ಲಂಘಿಸಿ ಇಸ್ರೇಲ್ ಗಾಜಾದ ಮೇಲೆ ಈವರೆಗೆ 393 ಬಾರಿ ದಾಳಿ ನಡೆಸಿದೆ. ಇದರಿಂದಾಗಿ 280 ಮಂದಿ ಸಾವಿಗೀಡಾಗಿದ್ದು, 672 ಜನರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಕಳೆದ ತಿಂಗಳು ಇಸ್ರೇಲ್ ರಕ್ಷಣಾ ಪಡೆಗಳು ಗಾಜಾದ ಹಲವೆಡೆ ನಡೆಸಿದ ದಾಳಿಯಲ್ಲಿ 9 ಮಂದಿ ಕೊನೆಯುಸಿರೆಳೆದಿದ್ದರು. ಈ ಮೂಲಕ ಅಮೆರಿಕ ಮಧ್ಯಸ್ಥಿಕೆಯ ಕದನ ವಿರಾಮ ಒಪ್ಪಂದವನ್ನು ಉಲ್ಲಂಘಿಸಿದೆ ಎಂದು ಸಿಎನ್‌ಎನ್ ವರದಿ ಮಾಡಿದೆ. ಗಾಜಾದ ಮೇಲೆ ತಕ್ಷಣವೇ ದಾಳಿ ನಡೆಸುವಂತೆ ಇಸ್ರೇಲ್ ಪ್ರಧಾನಿ ನೆತನ್ಯಾಹು ಸೇನೆಗೆ ಸೂಚನೆ ನೀಡಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. ಗಾಜಾದ ಮೇಲೆ ದಾಳಿ ನಡೆಸುವ ಸಂಬಂಧ ಅಮೆರಿಕಕ್ಕೆ ಇಸ್ರೇಲ್ ಮಾಹಿತಿ ನೀಡಿದೆ ಎಂದು ಮೂಲಗಳು ತಿಳಿಸಿವೆ.

### ವಿಶೇಷ ರಾಯಭಾರಿ ಲಿಯು ಭೇಟಿಯಾದ ಯಾದವ್

**ಬೆಲೆಮ್:** ಭಾರತದ ಪರಿಸರ ಸಚಿವ ಭೂಪೇಂದರ್ ಯಾದವ್ ಅವರು ಚೀನಾದ ಹವಾಮಾನ ಬದಲಾವಣೆ ವಿಶೇಷ ರಾಯಭಾರಿ ಲಿಯು ಝುನ್ನಿನ್ ಅವರನ್ನು ಭೇಟಿಯಾಗಿ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಕುರಿತ ಶೃಂಗಸಭೆಗೆ (ಸಿಒಪಿ-30) ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ.

ಗುರುವಾರ ಬ್ರೆಜಿಲ್‌ನ ಬೆಲೆಮ್‌ನಲ್ಲಿ ಚೀನಾದ ಹವಾಮಾನ ಬದಲಾವಣೆಯ ವಿಶೇಷ ರಾಯಭಾರಿ ಲಿಯು ಝುನ್ನಿನ್ ಅವರನ್ನು ಭೇಟಿ ಮಾಡಿದೆ. ಇದೇ ವೇಳೆ ಪ್ಯಾರಿಸ್ ಒಪ್ಪಂದದ ಸಮಗ್ರತೆಯನ್ನು ಕಾಪಾಡಿಕೊಳ್ಳುವತ್ತ ಗಮನಹರಿಸುವುದು ಸೇರಿದಂತೆ ಅಭಿವೃದ್ಧಿಶೀಲ ದೇಶಗಳ ನಡುವಿನ ಸಮನ್ವಯಕ್ಕೆ ಸಂಬಂಧಿಸಿ ಚರ್ಚೆ ನಡೆಸಲಾಯಿತು ಎಂದು ಭೂಪೇಂದರ್ ಯಾದವ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

# ಬ್ರಿಟನ್ ಸಮುದ್ರ ಗಡಿದಲ್ಲಿ ರಷ್ಯಾದ ಪತ್ತೇದಾರಿ ಯಾಂಟರ್ ಹಡಗು ಪತ್ತೆ

## ರಷ್ಯಾದೊಂದಿಗೆ ಯುದ್ಧಕ್ಕೆ ಸಿದ್ಧ ಎಂದು ಎಚ್ಚರಿಕೆ ನೀಡಿದ ಬ್ರಿಟನ್‌ನ ರಕ್ಷಣಾ ಕಾರ್ಯದರ್ಶಿ ಜಾನ್ ಹೀಲಿ, ಲಂಡನ್ ಆರೋಪಗಳ ನಿರಾಕರಣೆ

**ಲಂಡನ್:** ರಷ್ಯಾ, ಉಕ್ರೇನ್ ನಡುವಿನ ಯುದ್ಧದಿಂದಾಗಿ ನ್ಯಾಟೋ ದೇಶಗಳು ರಷ್ಯಾದ ವಿರುದ್ಧ ಹಲವು ನಿರ್ಬಂಧಗಳನ್ನು ಹೇರುತ್ತಾ ತಮ್ಮ ವಿರೋಧವನ್ನು ವ್ಯಕ್ತಪಡಿಸುತ್ತಲೇ ಇವೆ. ಇದರ ನಡುವೆ ರಷ್ಯಾ ಇತ್ತಿಚೇಗೆ ನ್ಯಾಟೋ ದೇಶಗಳ ವೈಮಾನಿಕ ಜಾಗದ ಮೇಲೆ ಆಗಾಗ ಡ್ರೋಣ್ ಹಾರಿಸವುದು ಹಾಗೂ ಗಡಿಗಳಲ್ಲಿ ಗೂಢಚಾರಿಕೆ ಮಾಡುತ್ತಾ ಬೆದರಿಕೆ ಒಡ್ಡುತ್ತಿದೆ. ಈಗ ಮತ್ತೆ ರಷ್ಯಾದ ಗೂಢಚಾರಿಕೆ ಹಡಗು ಬ್ರಿಟನ್‌ನ ಸಮುದ್ರ ಗಡಿಗೆ ನುಗ್ಗಿ, ಅಲ್ಲಿನ ಸೇನಾ ವಿಮಾನಗಳ ಪೈಲಟ್‌ಗಳ ಮೇಲೆ ಲೇಸರ್ ಕಿರಣಗಳನ್ನು ಹರಿಸಿದೆ ಎಂದು ಬ್ರಿಟನ್‌ನ ರಕ್ಷಣಾ ಕಾರ್ಯದರ್ಶಿ ಜಾನ್ ಹೀಲಿ ಹೇಳಿದ್ದಾರೆ.

**ಬ್ರಿಟನ್ ಸಮುದ್ರದೊಳಗೆ ರಷ್ಯಾದ ಪತ್ತೆದಾರಿ ಹಡಗು ಯಾಂಟರ್:** ಈ ಕುರಿತು ಮಾತನಾಡಿರುವ ಜಾನ್ ಹೀಲಿ ರಷ್ಯಾದ ಯಂಟಾರ್ ಪತ್ತೇದಾರಿ ಹಡಗು ಪ್ರಸ್ತುತ ಸ್ಕಾಟ್ಲೆಂಡ್‌ನ ಉತ್ತರಕ್ಕೆ ಬ್ರಿಟಿಷ್ ನೀರಿನ ಅಂಚಿನಲ್ಲಿದೆ ಮತ್ತು ಈ ಹಡಗನ್ನು ಗುಪ್ತಚರ ಮಾಹಿತಿಯನ್ನು ಸಂಗ್ರಹಿಸಲು ಮತ್ತು ಬ್ರಿಟನ್‌ನ ಸಮುದ್ರದೊಳಗಿನ ಕೇಬಲ್‌ಗಳನ್ನು ಮ್ಯಾಪಿಂಗ್ ಮಾಡಲು ವಿನ್ಯಾಸಗೊಳಿಸಲಾಗಿದೆ. ಹಾಗಾಗಿ ರಾಯಲ್ ಏರ್ ಫೋರ್ಸ್‌ನ ಪೋಸಿಡಾನ್-8 ವಿಮಾನವನ್ನು ಈ ಹಡಗಿನ ಚಲನವಲನಗಳನ್ನು ನಿಗಾವಹಿಸಲು ಕಳುಹಿಸಲಾಗಿದೆ. ಆದರೆ ರಷ್ಯಾದ ಪತ್ತೆದಾರಿ ಹಡಗು ವಿಮಾನದ ಮೇಲೆ ಲೇಸರ್ ಕಿರಣಗಳನ್ನು ಹರಿಸಿದೆ ಎಂದು ಪೈಲೆಟ್‌ಗಳು ತಿಳಿಸದ್ದಾರೆ ಎಂದು ವಿವರಿಸಿದರು.

**ರಷ್ಯಾದ ಪ್ರತಿಕ್ರಿಯೆ ಏನು?:** ಇದಕ್ಕೆ ಲಂಡನ್‌ನಲ್ಲಿರುವ ರಷ್ಯಾದ ರಾಯಭಾರ ಕಚೇರಿ ಪ್ರತಿಕ್ರಿಯಿಸಿ ಹೀಲಿಯವರ ಇತ್ತಿಚಿನ ಹೇಳಿಕೆಗಳು ಅತ್ಯಂತ ಪ್ರಚೋದನಕಾರಿಯಾಗಿದೆ. ಯಾಂಟರ್ ಹಡಗು ಸಾಗರಶಾಸ್ತ್ರ ಸಂಶೋಧನಾ ಹಡಗು ಆಗಿದ್ದು, ಅಂತರರಾಷ್ಟ್ರೀಯ ಜಲಸೀಮೆಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದ್ದು, ಈ ಹಡಗು ಬ್ರಿಟನ್‌ನ ಅಂತರ್ಜಲ ಸಂವಹನಗಳಿಗೆ ಅಡ್ಡಿಪಡಿಸುತ್ತಿದೆ, ಅದರ ಭದ್ರತೆಗೆ ಧಕ್ಕೆ ತರುತ್ತಿದೆ ಎಂಬ ಲಂಡನ್‌ನ ಆರೋಪವನ್ನು ರಾಯಭಾರ ಕಚೇರಿ ನಿರಾಕರಿಸಿದೆ. ಅಲ್ಲದೆ, ಲಂಡನ್‌ನ ರಷ್ಯಾ ವಿರೋಧಿ ಧೋರಣೆ, ಮಿಲಿಟರಿ ಆಕ್ರಮಣವನ್ನು ಹೆಚ್ಚಿಸುವುದು ಯುರೋಪಿಯನ್ ಭದ್ರತೆಯನ್ನು ಮತ್ತಷ್ಟು ಹದಗೆಡಿಸುತ್ತಿದೆ, ಇದು ಹೊಸ ಅಪಾಯಕಾರಿ ಪರಿಸ್ಥಿತಿಗಳಿಗೆ ಕಾರಣವಾಗುತ್ತಿದೆ ಎಂದು ಎಚ್ಚರಿಸಿದೆ.

ರಷ್ಯಾ ಹಾಗೂ ಉಕ್ರೇನ್ ನಡುವೆ ನಡೆಯುತ್ತಿರುವ ದೀರ್ಘಕಾಲದ ಯುದ್ಧ ಸದ್ಯಕ್ಕೆ ನಿಲ್ಲುವ ಯಾವ ಲಕ್ಷಣಗಳು ಕಾಣುತ್ತಿಲ್ಲ. ಆದರೆ ಇದರ ಮಧ್ಯೆ, ರಷ್ಯಾದ ಕ್ರಮಗಳು ಹಾಗೂ ನ್ಯಾಟೋ ರಾಷ್ಟ್ರಗಳ ಹೇಳಿಕೆಗಳು ಯುರೋಪ್‌ನಲ್ಲಿ ಇನ್ನೊಂದು ಯುದ್ಧಕ್ಕೆ ನಾಂದಿ ಹಾಡಲಿದೆಯಾ ಎಂಬ ಆತಂಕಕ್ಕೆ ಕಾರಣವಾಗಿದೆ.



**ಇನ್ನು, ರಷ್ಯಾದ ಈ ಕೃತ್ಯ ಅತ್ಯಂತ ಅಪಾಯಕಾರಿಯಾಗಿದೆ ಎಂದ ಹೀಲಿ ರಷ್ಯಾ ಮತ್ತು ಅಧ್ಯಕ್ಷ ವ್ಲಾಡಿಮಿರ್ ಪುಟಿನ್‌ಗೆ ನನ್ನ ಸಂದೇಶ ಇದು ನಾವು ನಿಮ್ಮನ್ನು ನೋಡುತ್ತಿದ್ದೇವೆ, ನೀವು ಏನು ಮಾಡುತ್ತಿದ್ದೀರಿ ಎಂದು ನಮಗೆ ತಿಳಿದಿದೆ, ಮತ್ತು ಯಾಂಟರ್ ಹಡಗು ತನ್ನ ದಿಕ್ಕನ್ನು ಬದಲಾಯಿಸಿ ಒಳ ನುಸುಳುವ ಪ್ರಯತ್ನ ಮಾಡಿದರೆ, ಬ್ರಿಟನ್ ಮಿಲಿಟರಿ ಆಯ್ಕೆಗಳನ್ನು ಸಿದ್ಧಪಡಿಸಿದೆ, ನಾವು ಯುದ್ಧಕ್ಕೆ ಸಿದ್ಧರಿದ್ದೇವೆ.**

**- ಜಾನ್ ಹೀಲಿ, ಬ್ರಿಟನ್‌ನ ರಕ್ಷಣಾ ಕಾರ್ಯದರ್ಶಿ**

### ಲೇಸರ್ ಕಿರಣ ಹರಿಸಿ ದಾಳಿ

**ಬ್ರಿಟನ್‌ನ ಸಮುದ್ರ ಗಡಿಗೆ ನುಗ್ಗಿದ ರಷ್ಯಾದ ಗೂಢಚಾರಿಕೆ ಹಡಗು 'ಯಾಂಟರ್' ನುಗ್ಗಿ ಸೇನಾ ವಿಮಾನಗಳ ಮೇಲೆ ಲೇಸರ್ ಕಿರಣ ಹರಿಸಿ ದಾಳಿ ಮಾಡಿದೆ ಎಂದು ರಕ್ಷಣಾ ಕಾರ್ಯದರ್ಶಿ ಜಾನ್ ಹೀಲಿ ಹೇಳಿದ್ದಾರೆ.ರಷ್ಯಾದ ಈ ಕ್ರಮವನ್ನು ಖಂಡಿಸಿರುವ ಹೀಲಿ,ಇದು ಅತ್ಯಂತ ಅಪಾಯಕಾರಿ ಎಂದಿದ್ದು, ನಾವು ರಷ್ಯಾದೊಂದಿಗೆ ಯುದ್ಧಕ್ಕೆ ಸಿದ್ಧ ಎಂದು ಎಚ್ಚರಿಕೆ ನೀಡಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ರಷ್ಯಾದ ರಾಯಭಾರ ಕಚೇರಿ ಆರೋಪ ನಿರಾಕರಿಸಿದ್ದು, ಹೀಲಿಯವರ ಹೇಳಿಕೆಗಳು ಪ್ರಚೋದನಾಕಾರಿಯಾಗಿವೆ ಎಂದು ಹೇಳಿದೆ.**

# ಬ್ಯಾಂಕ್ ಆಫ್ ಭಾಗ್ಯಲಕ್ಷ್ಮೀ ತಡವಾಗಿ ತೆರೆಗೆ



ಶ್ರೀದೇವಿ ಎಂಟರ್ಟೈನರ್ಸ್ ಬ್ಯಾನರ್'ನಿಂದ ಇಲ್ಲಿಯವರೆಗೆ 'ರಂಗಿತರಂಗ', 'ಅವನೇ ಶ್ರೀಮನ್ನಾರಾಯಣ', 'ಕಥಾಸಂಗಮ', 'ಸ್ಪೂಕಿ ಕಾಲೇಜ್'ನಂತಹ ಭಿನ್ನ ಅಲೆಯ ಮನರಂಜನಾತ್ಮಕ ಸಿನಿಮಾಗಳು ತಯಾರಾಗಿವೆ. ಎಲ್ಲಾ ಚಿತ್ರಗಳನ್ನ ನೀವು ಪ್ರೀತಿಯಿಂದ ನೋಡಿ, ನಮ್ಮ ಸಂಸ್ಥೆಗೆ ಬೆಂಬಲವಾಗಿ ನಿಂತಿದ್ದೀರಿ. ಇದೀಗ ನಮ್ಮ ಬ್ಯಾನರ್ ನಿಂದ ಕನ್ನಡ ಚಿತ್ರರಂಗಕ್ಕೆ ಐದನೇ ಕಾಣಿಕೆಯಾಗಿ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮೀ' ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. ನಮ್ಮ ಸಂಸ್ಥೆ ಇಲ್ಲಿಯವರೆಗೆ ಮಾಡಿರೋ ಎಲ್ಲಾ ಚಿತ್ರಗಳಲ್ಲಿ ಹೊಸ ನಿರ್ದೇಶಕರುಗಳಿಗೆ ಅವಕಾಶ ಕೊಡುತ್ತಾ ಬಂದಿದೆ. ಅದರ ಬಗ್ಗೆ ನಮಗೆ ಹೆಮ್ಮೆಯೂ ಇದೆ. ಆದರೀಗ ಬ್ಯಾಂಕ್ ಆಫ್ ಭಾಗ್ಯಲಕ್ಷ್ಮೀ ಚಿತ್ರವನ್ನು ಅಂದುಕೊಂಡ ದಿನಾಂಕಕ್ಕೆ ಅಂದರೆ ನವೆಂಬರ್ 21ಕ್ಕೆ ತೆರೆಗೆ ತರಲು ಆಗುತ್ತಿಲ್ಲ. ಈ ಬಗ್ಗೆ ಕನ್ನಡ ಚಿತ್ರಪ್ರೇಮಿಗಳಲ್ಲಿ ಕ್ಷಮೆ ಯಾಚಿಸುತ್ತಿದ್ದೇವೆ.

ಕೆಲ ತಾಂತ್ರಿಕ ಕೆಲಸಗಳ ವಿಳಂಬನೆಯಿಂದ ಬ್ಯಾಂಕ್ ಆಫ್ ಭಾಗ್ಯಲಕ್ಷ್ಮೀ ಸಿನಿಮಾದ ರಿಲೀಸ್ ಅನ್ನು ಒಂದು ವಾರ ಮುಂದೂಡುತ್ತಿದ್ದೇವೆ. ಇದೇ ನವೆಂಬರ್ 27ರ ಗುರುವಾರದಂದು ಬ್ಯಾಂಕ್ ಆಫ್ ಭಾಗ್ಯಲಕ್ಷ್ಮೀ ಬಿಡುಗಡೆ ಆಗುತ್ತಿದೆ.

# ಸೈಕಲಾಜಿಕಲ್ ಥ್ರಿಲ್ಲರ್ ಫೆಬ್ರವರಿ 30

ಸೈಕಲಾಜಿಕಲ್ ಥ್ರಿಲ್ಲರ್ ಕಥಾಹಂದರ ಒಳಗೊಂಡ ಚಿತ್ರ ಫೆಬ್ರವರಿ 30. ಮೈಸೂರು ಮೂಲದ ಪ್ರಶಾಂತ್ ಎಂ.ಎಲ್.ಅವರ ನಿರ್ದೇಶನದ ಈ ಚಿತ್ರಕ್ಕೆ ಶಂಕರ ಮೂವೀಸ್ ಇಂಟರ್ ನ್ಯಾಷನಲ್ ಮೂಲಕ ಜೋಸೆಫ್ ಬೇಬಿ ಅವರು ಬಂಡವಾಳ ಹೂಡಿದ್ದಾರೆ. ಈ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಅಭಿಷೇಕ್, ಸಾಹಿತ್ಯಶೆಟ್ಟಿ, ಅಕ್ಷಯ್, ಮನೋಜ್, ಶಿವಕುಮಾರ್ ಚಿತ್ರದ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಪಿ.ಎಂ. ಉನ್ನಿಕೃಷ್ಣನ್ ಅವರ ಛಾಯಾಗ್ರಹಣ, ಲಿಜಿನ್ ಪಂಬೋ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ.

ನಿರ್ದೇಶಕ ಪ್ರಶಾಂತ್ ಮಾತನಾಡುತ್ತ ನಾನು ಐಟಿಯಲ್ಲಿ ವರ್ಕ್ ಮಾಡುತ್ತಿದ್ದು, ಬಿಡುವಿನ ವೇಳೆ ಕಥೆ ಬರೆಯುವುದು, ಷಾರ್ಟ್ ಫಿಲಂ ಮಾಡುವುದು ನನ್ನ ಹವ್ಯಾಸ. ಅದಕ್ಕೆ ಶಿವಕುಮಾರ್ ಸಾಥ್ ಕೊಟ್ಟರು. ನಾನ್ಯಾಕೆ ಸಿನಿಮಾ ಮಾಡಬಾರದು ಎಂಬ ಆಲೋಚನೆ ಹೊಳೆದು ಸಣ್ಣಕಥೆ ಮಾಡಿಕೊಂಡೆ. ಸ್ನೇಹಿತರ ಮೂಲಕ ಈ ನಿರ್ಮಾಪಕರ ಪರಿಚಯವಾಯಿತು. ಅವರು ಕಥೆ ಕೇಳಲಿಲ್ಲ. ಸಿನಿಮಾ ಮಾಡಿ ತೋರಿಸು ಅಂದರು. ಫೆಬ್ರವರಿ 30 ಟೈಟಲ್ ಕೇಳಿದಾಗಲೇ ಒಂದು ಕುತೂಹಲ ಮೂಡುತ್ತದೆ. ಅದೇ ಕ್ಯೂರಿಯಾಸಿಟಿಯಿಂದ ಥೇಟರಿಗೆ ಬರುವ ಪ್ರೇಕ್ಷಕರಿಗೆ ಉತ್ತರದ ಜತೆ ಥ್ರಿಲ್ಲಿಂಗ್ ಅನುಭವ ಸಿಗುತ್ತದೆ. ಫೆಬ್ರವರಿ 30 ಎಂಬ ದಿನಾಂಕ ನಮ್ಮ ಲೈಫಲ್ಲಿ ಬರುತ್ತೆ ಅಂತ ಯಾರೂ ಊಹಿಸಿರಲ್ಲ. ನಮ್ಮಲ್ಲಿರುವ ಅರಿಷಡ್ವರ್ಗಗಳೇ ಹೇಗೆ ನಮಗೆ ವಿಲನ್ ಆಗುತ್ತವೆ ಅನ್ನೋದನ್ನು ಈ ಚಿತ್ರದಲ್ಲಿ ತೋರಿಸಿದ್ದೇವೆ. ಐದು ಜನ ಸ್ನೇಹಿತರು ಒಂದು ಅಪರಿಚಿತ ಸ್ಥಳಕ್ಕೆ ಹೋದಾಗ ಅಲ್ಲಿ ಅವರಿಗೆ ಏನೆಲ್ಲ ಅನುಭವಗಳಾಗುತ್ತವೆ, ಒಂದು ಅಮಾನುಷ ಶಕ್ತಿಯ ವಿರುದ್ಧ ಹೇಗೆಲ್ಲಾ ಹೋರಾಡುತ್ತಾರೆ ಎಂಬುದನ್ನು ಈ ಚಿತ್ರದ ಮೂಲಕ ಹೇಳಲು ಟ್ರೈ ಮಾಡಿದ್ದೇವೆ. ಕೇರಳದ ಅಮ್ಮಚ್ಚಿ ಕೊಟ್ಟಲ್ ಎಂಬಲ್ಲಿ 14 ದಿನ ಹಾಗೂ ಮೈಸೂರಿನಲ್ಲಿ 3 ದಿನ ಸೇರಿ 17. ದಿನಗಳ ಕಾಲ ದಿನದ 24 ಗಂಟೆಯೂ ಫೆಬ್ರವರಿ 30 ಚಿತ್ರದ ಚಿತ್ರೀಕರಣ ನಡೆಸಿದ್ದೇವೆ. ಮೈಸೂರಿನಲ್ಲಿ ಶುರುವಾಗೋ ಕಥೆ ಅಲ್ಲೇ ಎಂಡ್ ಆಗುತ್ತದೆ. ಚಿತ್ರವೀಗ ಬಿಡುಗಡೆಗೆ ಸಿದ್ದವಿದ್ದು ಮುಂದಿನ ತಿಂಗಳು ರಿಲೀಸ್ ಮಾಡೋ ಪ್ಲಾನಿದೆ ಎಂದರು.



ಚಿತ್ರದ ಟೀಸರ್ ಬಿಡುಗಡೆ

# Congratulations ಬ್ರದರ್ ತಂಡಕ್ಕೆ ಶುಭ ಹಾರೈಕೆ

ಹೊಸತಂಡದ ಹೊಸಪ್ರಯತ್ನ ನವೆಂಬರ್ 21ಕ್ಕೆ ತೆರೆಗೆ

ಸಾಮಾಜಿಕ ಮಾಧ್ಯಮದಲ್ಲಿ ಸಾಕಷ್ಟು ಸದ್ದು ಮಾಡಿರುವ ಡೈಲಾಗ್ Congratulations ಬ್ರದರ್. ಈಗ ಈ ಜನಪ್ರಿಯ ಡೈಲಾಗ್ ಸಿನಿಮಾ ಶೀರ್ಷಿಕೆಯಾಗಿರುವುದು ಎಲ್ಲರಿಗೂ ತಿಳಿದ ಸಂಗತಿ.

ಕಲ್ಲೂರ್ ಸಿನಿಮಾಸ್, ಪೆನ್ ಎನ್ ಪೇಪರ್ ಸ್ಟುಡಿಯೋಸ್ ಹಾಗೂ ಸ್ಕ್ರೀನ್ ಫಸ್ಟ್ ಪ್ರೊಡಕ್ಷನ್ ಲಾಂಛನದಲ್ಲಿ ಪ್ರಶಾಂತ್ ಕಲ್ಲೂರ್ ಅವರು ನಿರ್ಮಿಸಿರುವ, ಪ್ರತಾಪ್ ಗಂಧರ್ವ ನಿರ್ದೇಶನದ, ಹೆಸರಾಂತ ನಿರ್ದೇಶಕ ಹರಿ ಸಂತೋಷ್ ಕಥೆ ಬರೆದು ಕ್ರಿಯೇಟಿವ್ ಹೆಡ್ ಆಗಿ ಕಾರ್ಯ ನಿರ್ವಹಿಸಿರುವ ಹಾಗೂ ಯುವ ನಟರಾಗಿರುವ ರಕ್ಷಿತ್ ನಾಗ್ ನಾಯಕನಾಗಿ ಹಾಗೂ ಸಂಜನ್ ದಾಸ್ ನಾಯಕಿಯರಾಗಿ ನಟಿಸಿರುವ Congratulations ಬ್ರದರ್ ಚಿತ್ರ ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿದೆ.



ಹರೀಶ್ ರೆಡ್ಡಿ ಅವರ ಸಹ ನಿರ್ಮಾಣವಿರುವ ಈ ಚಿತ್ರ ನವೆಂಬರ್ 21 ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಚಿತ್ರ ಬಿಡುಗಡೆಗೂ ಪೂರ್ವದಲ್ಲಿ ಆಯೋಜಿಸಲಾಗಿದ್ದ ಪ್ರೀ ರಿಲೀಸ್ ಇವೆಂಟ್‌ಗೆ ಡಾರ್ಲಿಂಗ್ ಕೃಷ್ಣ ಅವರು ಮುಖ್ಯ ಅತಿಥಿಗಳಾಗಿ ಅಗಮಿಸಿದ್ದರು.

ನನಗೆ ಚಿತ್ರದ ಶೀರ್ಷಿಕೆಯೇ ಬಹಳ ಇಷ್ಟವಾಯಿತು. ಟ್ರೇಲರ್ ಇನ್ನೂ ಇಷ್ಟವಾಯಿತು. ಸಿನಿಮಾ ಕೂಡ ಚೆನ್ನಾಗಿರುವ ಭರವಸೆ ಇದೆ. ನಾನು ಥಿಯೇಟರ್ ನಲ್ಲೇ ಸಿನಿಮಾ ನೋಡುತ್ತೇನೆ. ಹೊಸತಂಡಕ್ಕೆ ಹಾಗೂ ಆ ಹೊಸತಂಡದ ಮೇಲೆ ಭರವಸೆಯಿಟ್ಟು ಬಂಡವಾಳ ಹೂಡಿರುವ ನಿರ್ಮಾಪಕರಿಗೆ ಒಳ್ಳೆಯದಾಗಲಿ ಎಂದು ಡಾರ್ಲಿಂಗ್ ಕೃಷ್ಣ ಹಾರೈಸಿದರು. ಸರಿಯಾಗಿ ಒಂದು ವರ್ಷದ ಹಿಂದೆ ಈ ಚಿತ್ರ ಆರಂಭವಾಗಿದ್ದು. ಈಗ ಇದೇ 21 ರಂದು ಚಿತ್ರ ಬಿಡುಗಡೆಯಾಗುತ್ತಿದೆ. ನಾವು ಬರಹದಲ್ಲಿ ಆಸಕ್ತಿವುಳ್ಳ ಒಂದಿಷ್ಟು ಗೆಳೆಯರು ಸೇರಿ ಪೆನ್ ಎನ್ ಪೇಪರ್ ಸ್ಟುಡಿಯೋಸ್ ಎಂಬ ಸಂಸ್ಥೆ ಶುರು ಮಾಡಿದ್ದೆವು. ಸಾಕಷ್ಟು ಕಥೆಗಳನ್ನು ಬರೆದಿದ್ದೆವು. ಅದರೆ ಅದನ್ನು ಸಿನಿಮಾ ರೂಪಕ್ಕೆ ತರಲು ನಿರ್ಮಾಪಕರು ಬೇಕು. ಆಗ ನಮಗೆ ಪ್ರಶಾಂತ್ ಕಲ್ಲೂರ್ ಅವರು ಸಿಕ್ಕರು. ಕಥೆ ಕೇಳಿ ನಿರ್ಮಾಣಕ್ಕೆ ಮುಂದಾದರು. ಹರೀಶ್ ರೆಡ್ಡಿ ಅವರು ಜೊತೆಯಾದರು. ನಾನು ಈ ಚಿತ್ರಕ್ಕೆ ಕಥೆ ಬರೆಯುವುದರ ಜೊತೆಗೆ ಕ್ರಿಯೇಟಿವ್ ಹೆಡ್ ಆಗಿಯೂ ಕಾರ್ಯ ನಿರ್ವಹಿಸಿದ್ದೇನೆ. ಈ ಉತ್ಸಾಹಿ ತಂಡದ ಹೊಸಪ್ರಯತ್ನ ಗೆಲ್ಲುವ ಎಲ್ಲಾ ಲಕ್ಷಣಗಳು ಇದೆ. ಈಗಾಗಲೇ ಪ್ರೀಮಿಯರ್ ಶೋನಲ್ಲಿ ಸಿನಿಮಾ ನೋಡಿರುವವರು ಮೆಚ್ಚಿಕೊಂಡಿದ್ದಾರೆ. ನನ್ನ ಬಳಿ 45 ಕಥೆಗಳಿದೆ. ಈ ಚಿತ್ರ ಗೆದ್ದರೆ, ಅಷ್ಟು ಚಿತ್ರಗಳನ್ನು ಈ ತಂಡದ ಜೊತೆಗೆ ಮಾಡುತ್ತೇನೆ ಎಂದರು.

# ಕ್ರಿಮಿನಲ್‌ಗೆ ಮುಹೂರ್ತ





ಹೊಸ ತಂಡದ ಕೆಲಸ


ಆಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ಹೊಸ ಸಿನಿಮಾ ನಿನ್ನೆ ಅದ್ದೂರಿಯಾಗಿ ಸೆಟ್ಟೇರಿದೆ. ಉತ್ತರ ಕರ್ನಾಟಕದ ಸೊಗಡಿನಲ್ಲಿ ಮೂಡಿಬರುತ್ತಿರುವ ಈ ಸಿನಿಮಾ ನೈಜ ಘಟನೆ ಆಧರಿಸಿದ್ದು, ಚಿತ್ರಕ್ಕೆ ಕ್ರಿಮಿನಲ್ ಎಂಬ ಟೈಟಲ್ ಇಡಲಾಗಿದೆ. ನಿರ್ದೇಶಕ ರಾಜ್ ಗುರು ಮಾತನಾಡಿ ಕಥೆ ಕೇಳಿ ಧ್ರುವ ಸರ್ಜಾ ಒಪ್ಪಿದರು. ಬಳಿಕ ಸೆಲ್ಫಿ ತೆಗೆದುಕೊಂಡೆ. ಸೆಲ್ಫಿ ನೋಡಿ ಖುಷಿ ಜೊತೆ ಭಯ ಶುರುವಾಯ್ತು. ಇದು ಜವಾಬ್ದಾರಿ ಎಂಬ ಭಯ. ಉತ್ತರ ಕರ್ನಾಟಕದ ಬಗ್ಗೆ ಸಿನಿಮಾ ಮಾಡುತ್ತಿದ್ದೇವೆ. ದೊಡ್ಡ ಪ್ರೊಡಕ್ಷನ್ ಕಂಪನಿ ನನಗೆ ಅವಕಾಶ ಕೊಟ್ಟಿದೆ. ಇದು ನನ್ನ ಎರಡನೇ ಸಿನಿಮಾ. ಈ ಚಿತ್ರಕ್ಕೆ ನಿಮ್ಮ ಸಪೋರ್ಟ್ ಇರಲಿ ಎಂದರು.

ನಿರ್ಮಾಪಕ ಮನೀಶ್ ಮಾತನಾಡಿ, ಧ್ರುವ ಸಿನಿಮಾ ಪ್ರೊಡ್ಯೂಸ್ ಮಾಡಿ ಎಂದಾಗ ನನಗೆ ಸರ್ ಪ್ರೈಸ್ ಆಯ್ತು. ನನ್ನ ಕನಸು ನನಸಾಗಿದೆ. ನಾನು ಕನ್ನಡ ಸಿನಿಮಾ ಮಾಡುತ್ತಿರುವುದು ಖುಷಿ ಆಗಿದೆ. ಇದು ಗ್ರೇಟ್ ಮೂಮೆಂಟ್ ಎಂದರು.

ನಟಿ ರಚಿತಾ ರಾಮ್ ಮಾತನಾಡಿ, ಎಂಟು ವರ್ಷಗಳ ನಂತರ ನನ್ನ ಒಳ್ಳೆ ಫ್ರೆಂಡ್ ಧ್ರುವ ಅವರ ಜೊತೆ ಸಿನಿಮಾ ಮಾಡುತ್ತಿರುವುದು ಖುಷಿ ಆಗ್ತಿದೆ. ಭರ್ಜರಿ ಸಿನಿಮಾದ ಮುಹೂರ್ತ ಇಲ್ಲೇ ಆಗಿದೆ. ಕ್ರಿಮಿನಲ್ ಕೂಡ ಇಲ್ಲೇ ಆಗಿದೆ. ಹೊಸ ತಂಡದ ಕೆಲಸ ಮಾಡುತ್ತಿರುವುದು ಖುಷಿ ಇದೆ. ಗೋಲ್ಡ್ ಮೈನ್ ಪ್ರೊಡಕ್ಷನ್ ಜೊತೆ ಕೆಲಸ ಮಾಡುತ್ತಿದ್ದೇನೆ. ಫಸ್ಟ್ ನನಗೆ ಧ್ರುವ ಕಾಲ್ ಮಾಡಿದರು. ಕಥೆ, ಪ್ರೊಡಕ್ಷನ್ ಹೌಸ್ ಏನೂ ಕೇಳಲಿಲ್ಲ. ಒಕೆ ಮಾಡ್ತೀನಿ ಎಂದೆ. ಆಮೇಲೆ ನಿರ್ದೇಶಕರು ಮನೆಗೆ ಬಂದು ಕಥೆ ಹೇಳಿದರು.

ತುಂಬಾ ಎಕ್ಸ್ ಪಿರಿಮೇಂಟ್ ರೋಲ್‌ನ ಧ್ರುವ ಮಾಡುತ್ತಿದ್ದಾರೆ. ಇದು ಅವರ ಏಳನೇ ಸಿನಿಮಾ. ಇದು ಅವರ ಸಿನಿಕರಿಯರ್ ನ ಬೆಸ್ಟ್ ಚಿತ್ರವಾಗಲಿದೆ ಎಂದರು.

# ಬಾಲಯ್ಯ ಸಿನಿಮಾದಲ್ಲಿ ನಯನತಾರಾ



ವೀರ ಸಿಂಹ ರೆಡ್ಡಿ ಸೂಪರ್ ಸಕ್ಸಸ್ ಬಳಿಕ ಬಾಲಯ್ಯ ನಿರ್ದೇಶಕ ಗೋಪಿಚಂದ್ ಮಲಿನೇನಿ ಮತ್ತೊಮ್ಮೆ ಕೈ ಜೋಡಿಸಿದ್ದಾರೆ. ಸದ್ಯ ರಾಮ್ ಚರಣ್ ಗೆ ಪೆದ್ದಿ ಚಿತ್ರ ನಿರ್ಮಾಣ ಮಾಡುತ್ತಿರುವ ವೃದ್ಧಿ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ವೆಂಕಟ ಸತೀಶ್ ಕಿಲಾರು ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಇದೀಗ ಚಿತ್ರತಂಡ ನಾಯಕಿಯನ್ನು ಪರಿಚಯಿಸಿದೆ. ಬಾಲಕೃಷ್ಣಗೆ ಜೋಡಿಯಾಗಿ ಲೇಡಿ ಸೂಪರ್ ಸ್ಟಾರ್ ನಯನತಾರಾ ಸಾಥ್ ಕೊಡುತ್ತಿದ್ದಾರೆ. ನಯನ್ ಬರ್ತಡೇ ವಿಶೇಷವಾಗಿ ಚಿತ್ರತಂಡ ಸ್ಪೆಷಲ್ ವಿಡಿಯೋ ಮೂಲಕ ಅವರನ್ನು ಸ್ವಾಗತಿಸಿದೆ. ಅಂದಹಾಗೇ ಸಿಂಹ, ಜೈ ಸಿಂಹ ಮತ್ತು ಶ್ರೀ ರಾಮ ರಾಜ್ಯಂ ಚಿತ್ರಗಳ ಬಳಿಕ ನಾಲ್ಕನೇ ಬಾರಿಗೆ ಬಾಲಯ್ಯ ಹಾಗೂ ನಯನತಾರಾ ಒಂದಾಗುತ್ತಿದ್ದಾರೆ. ಈ ಯಶಸ್ವಿ ಜೋಡಿಯನ್ನು ಮತ್ತೊಮ್ಮೆ ತೆರೆಯ ಮೇಲೆ ನೋಡಲು ಪ್ರೇಕ್ಷಕರು ಉತ್ಸುಕರಾಗಿದ್ದಾರೆ. ಗೋಪಿಚಂದ್ ಮಲನೇನಿ ಅವರು ಈ ಬಾರಿ ಐತಿಹಾಸಿಕ ಕಥೆಯನ್ನು ಹೇಳೋದಿಕ್ಕೆ ಹೊರಟಿದ್ದಾರೆ. ಕಮರ್ಷಿಯಲ್ ಹಿಟ್ ಕೊಟ್ಟಿರುವ ಬಾಲಯ್ಯ ಅವರನ್ನು ಹೊಸ ಗೆಟಪ್‌ನಲ್ಲಿ ಪ್ರೇಕ್ಷಕರಿಗೆ ತೋರಿಸಲು ಯೋಜನೆ ಹಾಕಿಕೊಂಡಿದ್ದಾರೆ.

# ಪಾಕ್ ಆಟಗಾರನೊಂದಿಗೆ ಶೇಕ್ ಹ್ಯಾಂಡ್ ಮಾಡಿದ ಭಾರತೀಯ ಕ್ರಿಕೆಟಿಗ

ಅಬುಧಾಬಿಯಲ್ಲಿ ನಡೆಯುತ್ತಿರುವ ಟಿ10 ಲೀಗ್ ಪಂದ್ಯದ ವೇಳೆ ಭಾರತೀಯ ಕ್ರಿಕೆಟಿಗ ಹರ್ಭಜನ್ ಸಿಂಗ್ ಪಾಕಿಸ್ತಾನ್ ಆಟಗಾರ ಶಹನವಾಝ್ ದಹಾನಿಗೆ ಶೇಕ್ ಹ್ಯಾಂಡ್ ನೀಡಿ ಸುದ್ದಿಯಾಗಿದ್ದಾರೆ. ಹೀಗೆ ಸುದ್ದಿಯಾಗಲು ಮುಖ್ಯ ಕಾರಣ ಈ ಹಿಂದೆ ಹರ್ಭಜನ್ ಸಿಂಗ್ ಪಾಕಿಸ್ತಾನ್ ವಿರುದ್ಧ ಕಣಕ್ಕಿಳಿಯಲು ಹಿಂದೇಟು ಹಾಕಿದ್ದರು.



ಜುಲೈ 19 ರಂದು ಬರ್ಮಿಂಗ್ ಹ್ಯಾಮ್ ನ ಎಡ್ಜ್ ಬಾಸ್ಟನ್ ಸ್ಟೇಡಿಯಂನಲ್ಲಿ ನಡೆಯಬೇಕಿದ್ದ ವರ್ಲ್ಡ್ ಚಾಂಪಿಯನ್ಸ್ ಟೂರ್ನಿಯಲ್ಲಿ ಪಾಕಿಸ್ತಾನ್ ಚಾಂಪಿಯನ್ಸ್ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿಯಲು ಹರ್ಭಜನ್ ಸಿಂಗ್, ಇರ್ಫಾನ್ ಪಠಾಣ್, ಯೂಸುಫ್ ಪಠಾಣ್, ಸುರೇಶ್ ರೈನಾ ಹಾಗೂ ಶಿಖರ್ ಧವನ್ ಹಿಂದೇಟು ಹಾಕಿದ್ದರು. ಹೀಗಾಗಿ ಈ ಪಂದ್ಯವನ್ನು ರದ್ದುಗೊಳಿಸಲಾಗಿತ್ತು.

ಇದೀಗ ಅಬುಧಾಬಿ ಟಿ10 ಲೀಗ್ ನಲ್ಲಿ ಆಸ್ಪಿನ್ ಸ್ಟಾಲಿಯನ್ಸ್ ತಂಡದ ನಾಯಕನಾಗಿ ಕಣಕ್ಕಿಳಿಯುತ್ತಿರುವ ಹರ್ಭಜನ್ ಸಿಂಗ್ ನಾದರ್ನ್ ವಾರಿಯರ್ಸ್ ತಂಡದಲ್ಲಿದ್ದ ಪಾಕ್ ಆಟಗಾರ ಶಹನವಾಝ್ ದಹನಿಗೆ ಹಸ್ತಲಾಘವ ಮಾಡಿದ್ದಾರೆ. ಈ ವಿಡಿಯೋ ಇದೀಗ ಸೋಷಿಯಲ್ ಮೀಡಿಯಾದಲ್ಲಿ ಸಿಕ್ಕಾಪಟ್ಟೆ ವೈರಲ್ ಆಗಿದೆ. ಈ ಹಿಂದೆ ''ರಕ್ತ ಮತ್ತು ಬೆವರು ಒಟ್ಟಿಗೆ ಇರಲು ಸಾಧ್ಯವಿಲ್ಲ'' ಎಂದು ಪಾಕ್ ವಿರುದ್ಧ ಕಣಕ್ಕಿಳಿಯಲು ನಿರಾಕರಿಸಿರುವ ಹರ್ಭಜನ್ ಸಿಂಗ್ ಅವರು ಈಗ ಹೇಗೆ ಪಾಕ್ ಆಟಗಾರನಿಗೆ ಶೇಕ್ ಹ್ಯಾಂಡ್ ನೀಡುತ್ತಿದ್ದಾರೆ ಎಂದು ಅನೇಕರು ಪ್ರಶ್ನಿಸಿದ್ದಾರೆ.

# ಶುಭ್‌ಮನ್ ಗಿಲ್ ಔಟ್



ಭಾರತ ಮತ್ತು ಸೌತ್ ಆಫ್ರಿಕಾ ನಡುವಣ ದ್ವಿತೀಯ ಟೆಸ್ಟ್ ಪಂದ್ಯವು ಶನಿವಾರದಿಂದ (ನ.22) ಶುರುವಾಗಲಿದೆ. ಗುವಾಹಟಿಯ ಬರ್ಸಪಾರ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆಯಲಿರುವ ಈ ಪಂದ್ಯದಿಂದ ಟೀಮ್ ಇಂಡಿಯಾ ನಾಯಕ ಶುಭ್ ಮನ್ ಗಿಲ್ ಹೊರಗುಳಿದಿದ್ದಾರೆ. ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ಮೊದಲ ಪಂದ್ಯದ ವೇಳೆ ಗಿಲ್ ಅವರು ಕುತ್ತಿಗೆ ನೋವಿಗೀಡಾಗಿದ್ದರು. ಹೀಗಾಗಿ ಅವರು ದ್ವಿತೀಯ ಇನಿಂಗ್ಸ್ ನಲ್ಲಿ ಕಣಕ್ಕಿಳಿದಿರಲಿಲ್ಲ. ಇದೀಗ ಚಿಕಿತ್ಸೆ ಪಡೆದಿರುವ ಶುಭ್ ಮನ್ ಗಿಲ್ ಗೆ ವಿಶ್ರಾಂತಿ ತೆಗೆದುಕೊಳ್ಳುವಂತೆ ವೈದ್ಯರು ಸೂಚಿಸಿದ್ದಾರೆ. ಹೀಗಾಗಿ ಸೌತ್ ಆಫ್ರಿಕಾ ವಿರುದ್ಧದ ದ್ವಿತೀಯ ಟೆಸ್ಟ್ ನಿಂದ ಹೊರಗುಳಿದಿದ್ದಾರೆ.



**ರಿಷಭ್ ಪಂತ್ ನಾಯಕ:** ಶುಭ್ ಮನ್ ಗಿಲ್ ಅನುಪಸ್ಥಿತಿಯಲ್ಲಿ ದ್ವಿತೀಯ ಟೆಸ್ಟ್ ನಲ್ಲಿ ಭಾರತ ತಂಡವನ್ನು ಉಪನಾಯಕ ರಿಷಭ್ ಪಂತ್ ಮುನ್ನಡೆಸಲಿದ್ದಾರೆ. ಅದರಲ್ಲೂ ಈ ಪಂದ್ಯವು ಟೀಮ್ ಇಂಡಿಯಾ ಪಾಲಿಗೆ ನಿರ್ಣಾಯಕವಾಗಿದ್ದು, ಸರಣಿಯನ್ನು ಸಮಬಲಗೊಳಿಸಲು ಭಾರತ ತಂಡ ಗೆಲ್ಲಲೇಬೇಕು. ಹೀಗಾಗಿ ಈ ಮ್ಯಾಚ್ ರಿಷಭ್ ಪಂತ್ ಪಾಲಿಗೆ ಅಗ್ನಿಪರೀಕ್ಷೆ ಎಂದರೂ ತಪ್ಪಾಗಲಾರದು.

**ಒಂದು ಬದಲಾವಣೆ ಖಚಿತ:** ಶುಭ್ ಮನ್ ಗಿಲ್ ಹೊರಗುಳಿದಿರುವ ಕಾರಣ ದ್ವಿತೀಯ ಪಂದ್ಯದ ವೇಳೆ ಟೀಮ್ ಇಂಡಿಯಾದಲ್ಲಿ ಒಂದು ಬದಲಾವಣೆ ಕಂಡು ಬರುವುದು ಖಚಿತ. ಈ ಬದಲಾವಣೆಯಿಂದಾಗಿ ಯಾರಿಗೆ ಚಾನ್ಸ್ ಸಿಗಲಿದೆ ಎಂಬುದೇ ಈ ದೊಡ್ಡ ಪ್ರಶ್ನೆ. ಏಕೆಂದರೆ ಕಳೆದ ಮ್ಯಾಚ್ ವೇಳೆ ದೇವದತ್ ಪಡಿಕ್ಕಲ್ ಹಾಗೂ ಸಾಯಿ ಸುದರ್ಶನ್ ಬೆಂಚ್ ಕಾದಿದ್ದರು. ಇದೀಗ ನಿತೀಶ್ ಕುಮಾರ್ ರೆಡ್ಡಿ ಟೀಮ್ ಇಂಡಿಯಾಗೆ ಎಂಟ್ರಿ ಕೊಟ್ಟಿದ್ದಾರೆ. ಹೀಗಾಗಿ ಈ ಮೂವರಲ್ಲಿ ಒಬ್ಬರಿಗೆ ಚಾನ್ಸ್ ಸಿಗುವುದು ಖಚಿತ. ಇಲ್ಲಿ ಟೀಮ್ ಇಂಡಿಯಾ ಪರಿಪೂರ್ಣ ಬ್ಯಾಟರ್ ನನ್ನು ಕಣಕ್ಕಿಳಿಸಲು ಬಯಸಿದರೆ ಸಾಯಿ ಸುದರ್ಶನ್ ಅಥವಾ ದೇವದತ್ ಪಡಿಕ್ಕಲ್‌ಗೆ ಚಾನ್ಸ್ ಸಿಗಬಹುದು. ಇನ್ನು ಆಲ್ ರೌಂಡರ್‌ಗೆ ಮಣೆಹಾಕಲು ಮುಂದಾದರೆ ಮಾತ್ರ ನಿತೀಶ್ ಕುಮಾರ್ ರೆಡ್ಡಿ ಪ್ಲೇಯಿಂಗ್ ಇಲೆವೆನ್ ನಲ್ಲಿ ಕಾಣಿಸಿಕೊಳ್ಳಲಿದ್ದಾರೆ.


# ರಾಷ್ಟ್ರೀಯ ಉದ್ಯಾನಕ್ಕೆ ಅನಿಲ್ ಕುಂಬ್ಳೆ ಭೇಟಿ




ಭಾರತದ ಮಾಜಿ ಸ್ಟಾರ್ ಕ್ರಿಕೆಟಿಗ ಅನಿಲ್ ಕುಂಬ್ಳೆ ತಮ್ಮ ಪತ್ನಿಯೊಂದಿಗೆ ಅಸ್ಸಾಂನ ಕಾಜಿರಂಗ ರಾಷ್ಟ್ರೀಯ ಉದ್ಯಾನಕ್ಕೆ ಮಂಗಳವಾರ ಭೇಟಿ ನೀಡಿದ್ದರು.

ಎಲ್ಲರೂ ಜೀವನದಲ್ಲಿ ಒಮ್ಮೆಯಾದರೂ ಈ ಉದ್ಯಾನಕ್ಕೆ ಭೇಟಿ ನೀಡಬೇಕು ಎಂದು ಒತ್ತಾಯಿಸಿದರು. ಬಾಗೋರಿ ಪ್ರದೇಶದಲ್ಲಿ ಸಫಾರಿ ಮಾಡಿದರು. ಉದ್ಯಾನವನದ ಸೌಂದರ್ಯ, ವನ್ಯಜೀವಿಗಳು ಮತ್ತು ನಿರ್ವಹಣೆಯ ಬಗ್ಗೆ ಅವರು ಹೃತ್ಪೂರ್ವಕ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಕಾಜಿರಂಗ ನಿಜವಾಗಿಯೂ ತುಂಬಾ ಚೆನ್ನಾಗಿದೆ. ಈ ಅನುಭವವು ಉಲ್ಲಾಸಕರ ಮತ್ತು ಸ್ಮರಣೀಯವಾಗಿತ್ತು ಎಂದು ಕುಂಬ್ಳೆ ಹೇಳಿದ್ದಾರೆ. ಉದ್ಯಾನವನವು ಅತ್ಯಂತ ಸುಂದರವಾಗಿದೆ. ನಾನು ಹೂಲಾಕ್ ಗಿಬ್ಬನ್‌ಗಳು, ಖಡ್ಗಮೃಗಗಳು ಮತ್ತು ಹಲವಾರು ಪಕ್ಷಿ ಪ್ರಭೇದಗಳನ್ನು ನೋಡಿದೆ. ತುಂಬಾ ಅದ್ಭುತವಾಗಿತ್ತು ಎಂದರು.

ಕುಂಬ್ಳೆ ಅವರು ಪ್ರಕೃತಿ ಪ್ರಿಯರು ಮತ್ತು ಪ್ರವಾಸಿಗರು ತಮ್ಮ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಕಾಜಿರಂಗಕ್ಕೆ ಭೇಟಿ ನೀಡಬೇಕೆಂದು ಒತ್ತಾಯಿಸಿದರು.ಭಾರತದ ಸೌಂದರ್ಯ ಎಲ್ಲೆಡೆ ಇದೆ. ಕಾಜಿರಂಗಕ್ಕೆ ಬನ್ನಿ ಮತ್ತು ವನ್ಯಜೀವಿಗಳನ್ನು ಹತ್ತಿರದಿಂದ ನೋಡುವ ರೋಮಾಂಚನವನ್ನು ಆನಂದಿಸಿ ಎಂದು ಹೇಳಿದರು.ಸಚಿನ್ ತೆಂಡೂಲ್ಕರ್ ಕೂಡ ಇತ್ತೀಚೆಗೆ ಕಾಜಿರಂಗಕ್ಕೆ ಭೇಟಿ ನೀಡಿದ್ದರು.




ಭಾರತ ಮತ್ತು ಅಸ್ಸಾಂ ಎರಡೂ ಪ್ರತಿಭೆಗಳಿಂದ ಸಮೃದ್ಧವಾಗಿವೆ ಎಂದು ಕುಂಬ್ಳೆ ಹೇಳಿದರು. ಆಟಗಾರನಾಗಿ ಅಸ್ಸಾಂಗೆ ತಮ್ಮ ಹಿಂದಿನ ಭೇಟಿಗಳನ್ನು ನೆನಪಿಸಿಕೊಂಡ ಕುಂಬ್ಳೆ, ಈ ಹಿಂದೆ ತಾವು ಆಡಿದ ಕ್ರೀಡಾಂಗಣಗಳು ವರ್ಷಗಳಲ್ಲಿ ಹೇಗೆ ರೂಪಾಂತರಗೊಂಡಿವೆ ಎಂಬುದನ್ನು ನೋಡಲು ಉತ್ಸುಕನಾಗಿದ್ದೇನೆ ಎಂದು ಹೇಳಿದರು.

ವಿಕೆಟ್ ಕೀಪರ್-ಬ್ಯಾಟರ್ ಉಮಾ ಚೆಟ್ರಿ ಅವರ ಸಾಧನೆಗಳಿಗಾಗಿ ಅವರು ಅಭಿನಂದಿಸಿದರು ಮತ್ತು ಬಲಗೈ ಬ್ಯಾಟ್ಸ್‌ಮನ್ ರಿಯಾನ್ ಪರಾಗ್ ಅವರನ್ನು ಶ್ಲಾಘಿಸಿದರು. ಕುಂಬ್ಳೆ ಮತ್ತು ಅವರ ಪತ್ನಿ ಕಾಜಿರಂಗ ರಾಷ್ಟ್ರೀಯ ಉದ್ಯಾನವನಕ್ಕೆ ಭೇಟಿ ನೀಡಿ ಸ್ಥಳೀಯ ಕುಶಲಕರ್ಮಿಗಳು ತಯಾರಿಸಿದ ಕರಕುಶಲ ವಸ್ತುಗಳನ್ನು ನೋಡಿದರು.

# 64.30 ಕೋಟಿ ರೂ. ಮೊತ್ತ

## ಪತಿರಾಣ ಮೇಲೆ 2 ಫ್ರಾಂಚೈಸಿಗಳ ಕಣ್ಣು



ಬೇಬಿ ಮಲಿಂಗ ಖ್ಯಾತಿಯ ಮತೀಶ ಪತಿರಾಣ ಐಪಿಎಲ್ ಸೀಸನ್-19ರ ಮಿನಿ ಹರಾಜಿನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಕಳೆದ ಕೆಲ ವರ್ಷಗಳಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಭಾಗವಾಗಿದ್ದ ಪತಿರಾಣ ಅವರನ್ನು ಇದೇ ಮೊದಲ ಬಾರಿಗೆ ಸಿಎಸ್ ಕೆ ಫ್ರಾಂಚೈಸಿ ಬಿಡುಗಡೆ ಮಾಡಿದೆ.

ಅದರಂತೆ ಐಪಿಎಲ್ 2026ರ ಮಿನಿ ಹರಾಜಿಗಾಗಿ ಮತೀಶ ಪತಿರಾಣ ಹೆಸರು ನೋಂದಾಯಿಸಿಕೊಳ್ಳಲಿದ್ದಾರೆ. ಅದು ಕೂಡ 2 ಕೋಟಿ ರೂ. ಮೂಲ ಬೆಲೆಯೊಂದಿಗೆ. ಸ್ಟಾರ್ ಬೌಲರ್ ಎನಿಸಿಕೊಂಡಿರುವ ಶ್ರೀಲಂಕಾ ವೇಗಿ ಗರಿಷ್ಠ ಬೇಸ್ ಪ್ರೈಸ್ ಪಟ್ಟಿಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇದಕ್ಕೆ ಮುಖ್ಯ ಕಾರಣ ಮತೀಶ ಪತಿರಾಣ ಮೇಲೆ ಎರಡು ಐಪಿಎಲ್ ಫ್ರಾಂಚೈಸಿಗಳು ಕಣ್ಣಿಟ್ಟಿರುವುದು. ಸಿಎಸ್ ಕೆ ತಂಡದಲ್ಲಿರುವಾಗಲೇ ಕೆಕೆಆರ್ ಫ್ರಾಂಚೈಸಿಯು ಪತಿರಾಣ ಅವರನ್ನು ಟ್ರೇಡ್ ಮಾಡಿಕೊಳ್ಳಲು ತೆರೆಮರೆಯ ಪ್ರಯತ್ನ ನಡೆಸಿತ್ತು. ಇದಾಗ್ಯೂ ಅದು ಸಫಲವಾಗಿರಲಿಲ್ಲ. ಆದರೆ ಅಚ್ಚರಿ ಎಂಬಂತೆ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿಯು ಇದೀಗ ಮತೀಶ ಪತಿರಾಣ ಅವರನ್ನು ಬಿಡುಗಡೆ ಮಾಡಿದೆ. ಈ ರಿಲೀಸ್ ಹೊರತಾಗಿಯೂ ಸಿಎಸ್ ಕೆ ಮತ್ತೆ ಪತಿರಾಣ ಅವರನ್ನು ಖರೀದಿಸುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಏಕೆಂದರೆ ಕಳೆದ ಸೀಸನ್ ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಮತೀಶ ಪತಿರಾಣಗೆ ನೀಡಿದ್ದು ಬರೋಬ್ಬರಿ 13 ಕೋಟಿ ರೂ. ಈ ಬೃಹತ್ ಮೊತ್ತದ ಕಾರಣದಿಂದಾಗಿ ರಿಲೀಸ್ ಮಾಡಿದ್ದು, ಕಡಿಮೆ ಮೊತ್ತಕ್ಕೆ ಮತ್ತೆ ಖರೀದಿಸಲು ಸಿಎಸ್‌ಕೆ ಮುಂದಾಗಲಿದೆ.

ಬೃಹತ್ ಮೊತ್ತದವರೆಗೆ ಬಿಡ್ಡಿಂಗ್

ಇತ್ತ ಮತೀಶ ಪತಿರಾಣ ರಿಲೀಸ್ ಆಗುತ್ತಿದ್ದಂತೆ ಕೊಲ್ಕತ್ತಾ ನೈಟ್ ರೈಡರ್ಸ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ಯುವ ವೇಗಿಯನ್ನು ಖರೀದಿಸಲು ಪ್ಲ್ಯಾನ್ ರೂಪಿಸುತ್ತಿದೆ ಎಂದು ವರದಿಯಾಗಿದೆ. ಅದರಲ್ಲೂ 64.30 ಕೋಟಿ ರೂ. ಪರ್ಸ್ ಮೊತ್ತ ಹೊಂದಿರುವ ಕೆಕೆಆರ್ ಮತೀಶ ಪತಿರಾಣಗಾಗಿ ಭರ್ಜರಿ ಪೈಪೋಟಿ ನಡೆಸುವುದಂತು ದಿಟ. ಏಕೆಂದರೆ ಕೊಲ್ಕತ್ತಾ ನೈಟ್ ರೈಡರ್ಸ್ ತಂಡಕ್ಕೆ ವೇಗದ ಬೌಲರ್ ನ ಅವಶ್ಯಕತೆಯಿದೆ. ಐಪಿಎಲ್‌ನಲ್ಲಿ ಈಗಾಗಲೇ ತನ್ನ ಸಾಮರ್ಥ್ಯವನ್ನು ತೆರೆದಿಟ್ಟಿರುವ ಪತಿರಾಣ ಅವರನ್ನು ಖರೀದಿಸುವುದು ಕೆಕೆಆರ್‌ಗೆ ಕಷ್ಟವೇನಲ್ಲ. ಏಕೆಂದರೆ ಹರಾಜಿನಲ್ಲಿ 64.30 ಕೋಟಿ ರೂ.ನೊಂದಿಗೆ ಕಾಣಿಸಿಕೊಳ್ಳಲಿರುವ ಕೆಕೆಆರ್ ಬೃಹತ್ ಮೊತ್ತದವರೆಗೆ ಬಿಡ್ಡಿಂಗ್ ನಡೆಸುವ ಸಾಧ್ಯತೆಯಿದೆ. ಈ ಮೂಲಕ ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿ ಬೇಬಿ ಮಲಿಂಗನನ್ನು ತನ್ನ ತೆಕ್ಕೆಗೆ ತೆಗೆದುಕೊಂಡರೂ ಅಚ್ಚರಿಪಡಬೇಕಿಲ್ಲ.


Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news



ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966